


ಫ್ಯಾಸೀವಾದದ ವಿರುದ್ಧ ವಿಜಯ

ಸಂಪುಟ: 38 ಸಂಚಿಕೆ: 08 | ಅಕ್ಟೋಬರ್ 2025
ಬೆಲೆ: ರೂ. 7/-

# ಕಾರ್ಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ

**ಒಳ ಪುಟಗಳಲ್ಲಿ.............**

ಬಾಲ್ಯದಲ್ಲೇ ಮಕ್ಕಳಿಗೆ ಮಿಲಿಟರಿ ತರಬೇತಿ ---------------------3
ಅಮೆರಿಕಾದ ಮನೆಬಾಗಿಲಿಗೆ ಬಂದ ಟ್ರಂಪ್ ಯುದ್ಧ ---------------4
ಗಿಗ್ ಆರ್ಥಿಕತೆ – ಬಂಡವಾಳಶಾಹಿ
ವ್ಯವಸ್ಥೆಯ ಹೊಸ ವೇತನ ಗುಲಾಮಗಿರಿ! ---------------------5
ಎಐಯುಟಿಯುಸಿ ಸಂಘಟಿತ ಅಖಿಲ ಭಾರತ ಕಾರ್ಮಿಕ ಪ್ರತಿಭಟನೆ -----7
ಮಹಾನ್ ಮಾನವತಾವಾದಿ ಸಾಹಿತಿ
ಶರತ್‌ಚಂದ್ರ ಚಟರ್ಜಿಯವರ 149ನೇ ಜನ್ಮ ವಾರ್ಷಿಕ ಆಚರಣೆ -------8
ಬಂಗಾಲಿ ಭಾಷೆಯನ್ನಾಡುವ ಮುಸ್ಲಿಂ ವಲಸೆಗಾರರ ಮೇಲಿನ ಆಕ್ರಮಣ ---9
ಮಾಲೆಗಾಂವ್ ತೀರ್ಪು: ಸತ್ತವರು ಹಲವರು, ಅಪರಾಧಿಗಳಿಲ್ಲ ಯಾರೂ.. ---10

## ಹಿಟ್ಲರನ ಫ್ಯಾಸೀವಾದವನ್ನು ಸೋಲಿಸಿದ ವಿಜಯಕ್ಕೆ ಈಗ 80 ವರ್ಷ

### ಮಾನವಕುಲವನ್ನು ರಕ್ಷಿಸಿದ ಮಹಾನ್ ನಾಯಕ ಸ್ಟಾಲಿನ್!

ಭಾಗ–02

*(1945ರ ಮೇ 2ರಂದು ಸೋವಿಯತ್ ಒಕ್ಕೂಟದ ಕೆಂಪು ಸೈನ್ಯವು ರಾಜಧಾನಿ ಬರ್ಲಿನ್ ತಲುಪಿ, ಜರ್ಮನಿಯನ್ನು ನಾಝಿ ಆಳ್ವಿಕೆಯಿಂದ ಮುಕ್ತಗೊಳಿಸಿತು. ಹಿಮ್ಮೆಟ್ಟುತ್ತಿದ್ದ ಜರ್ಮನ್ ಸೈನ್ಯವನ್ನು ಬೆನ್ನಟ್ಟಿಕೊಂಡು ಬಂದ ಕೆಂಪು ಸೈನ್ಯವು ಅಲ್ಲಿನ ಸಂಸತ್ ಭವನ 'ರೀಚ್‌ಸ್ಟ್ಯಾಗ್'ನ್ನು ವಶಪಡಿಸಿಕೊಂಡು ಅದರ ಗೋಪುರದ ಮೇಲೆ ಕೆಂಬಾವುಟವನ್ನು ಹಾರಿಸಿತು. ಇದರೊಂದಿಗೆ, ಜರ್ಮನಿ–ಇಟಲಿ–ಜಪಾನ್‌ಗಳ ಫ್ಯಾಸಿಸ್ಟ್ ದುಷ್ಟಕೂಟವು ಮಣ್ಣಾದಂತಾಯಿತು. 1945ರ ಮೇ 8ರಂದು ಜರ್ಮನಿಯಲ್ಲಿ ಅಧಿಕಾರದಲ್ಲಿದ್ದವರು ಬೇಷರತ್ತಾಗಿ ಕೆಂಪು ಸೈನ್ಯಕ್ಕೆ ಶರಣಾದರು. 2025ರ ಮೇ 8 – ಈ ಅಮೋಘ ವಿಜಯದ 80ನೇ ವಾರ್ಷಿಕ. ಈ ಲೇಖನದ ಮೊದಲ ಭಾಗವು ಕಾರ್ಮಿಕ ದೃಷ್ಟಿಕೋನದ 2025ರ ಜೂನ್ ಮಾಸಿಕದ ಸಂಚಿಕೆಯಲ್ಲಿ ಪ್ರಕಟವಾಗಿದೆ. ಭಾಗ 1ರಲ್ಲಿ ಹಿಟ್ಲರ್ ಮತ್ತು ಫ್ಯಾಸೀವಾದದ ಉದಯದ ಹಿನ್ನೆಲೆಯನ್ನು ಚರ್ಚಿಸಲಾಗಿದೆ.)*

#### ಯುದ್ಧದ ಕುರಿತು ಸ್ಟಾಲಿನ್‌ರ ಮುನ್ನೋಟ

ಆಗ ಮಹಾನ್ ಸ್ಟಾಲಿನ್ ಅವರ ನೇತೃತ್ವದಲ್ಲಿದ್ದ ಸೋವಿಯತ್ ಒಕ್ಕೂಟವು, ಸಾಮ್ರಾಜ್ಯಶಾಹಿ ಶಕ್ತಿಗಳಿಂದ ಯಾವುದೇ ಸಮಯದಲ್ಲಿ ಆಕ್ರಮಣಕ್ಕೊಳಗಾಗುವ ಆತಂಕವನ್ನು ಎದುರಿಸುತ್ತಿದ್ದ ಏಕೈಕ ಸಮಾಜವಾದಿ ರಾಷ್ಟ್ರವಾಗಿತ್ತು. ಆದ್ದರಿಂದ, ವಿದೇಶಿ ಆಕ್ರಮಣ ಮತ್ತು ಯುದ್ಧದಲ್ಲಿ ಸಿಲುಕಿಕೊಳ್ಳುವುದರಿಂದ ಸಮಾಜವಾದದ ಮುನ್ನಡೆಗೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು ಎಂಬುದು ಸ್ಟಾಲಿನ್‌ರ ಅಭಿಮತವಾಗಿತ್ತು. ಹಾಗಾಗಿ, ಹಿಟ್ಲರ್‌ನನ್ನು ಎದುರಿಸಲು ಅವರು ಬ್ರಿಟನ್ ಮತ್ತು ಫ್ರಾನ್ಸ್‌ನೊಂದಿಗೆ ಉಕ್ಕಿನಂತಹ ಮಿಲಿಟರಿ ಮೈತ್ರಿಗೆ ಮುಂದಾದರು. ಆದರೆ, ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ಶಕ್ತಿಗಳು ಕೈಕೊಸರಿಕೊಂಡವು. ಏಕೆಂದರೆ, ಸೋವಿಯತ್ ಸಮಾಜವಾದವನ್ನು ಹಿಟ್ಲರ್ ನಾಶ ಮಾಡುವುದನ್ನು ಅವು ಬಯಸಿದ್ದವು. ಅಂದು ಸೋವಿಯತ್ ಒಕ್ಕೂಟದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳದರ ಪರಿಣಾಮದಿಂದಾಗಿ ಅಂತಿಮವಾಗಿ ಇಡೀ ಮಾನವಕುಲವು ಬಹುದೊಡ್ಡ ಹಾನಿಯನ್ನು ಅನುಭವಿಸುವಂತಾಯಿತು.

ಈ ನಿಟ್ಟಿನಲ್ಲಿ, ಭಾರತದ ಸ್ವಾತಂತ್ರ್ಯ ಹೋರಾಟದ ರಾಜಿರಹಿತ ಪಂಥದ ನೇತಾರರಾದ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಕಾಣ್ಕೆ ಗಮನಾರ್ಹವಾಗಿದೆ. 1939ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ತ್ರಿಪುರಿ ಅಧಿವೇಶನದಲ್ಲಿ, ಕಾಂಗ್ರೆಸ್ ಅಧ್ಯಕ್ಷರಾಗಿ, "ಜನತಾಂತ್ರಿಕ ಶಕ್ತಿಗಳೆಂದು ಕರೆಯಲ್ಪಡುವ ಫ್ರಾನ್ಸ್ ಮತ್ತು ಬ್ರಿಟನ್‌ಗಳು ಯುರೋಪಿಯನ್ ರಾಜಕೀಯದಿಂದ ಸೋವಿಯತ್ ರಷ್ಯಾವನ್ನು ಅಳಿಸಿಹಾಕಲು ಇಟಲಿ ಮತ್ತು ಜರ್ಮನಿ ನಡೆಸುತ್ತಿರುವ ಪಿತೂರಿಯಲ್ಲಿ ಸೇರಿಕೊಂಡಿವೆ.. ಹಿಟ್ಲರ್‌ವಾದದ ಸೋಲು ಎಂದರೆ ಕಮ್ಯುನಿಸಂನ ಸ್ಥಾಪನೆ" ಎಂದು ಸೋವಿಯತ್ ಒಕ್ಕೂಟವನ್ನು ನಾಶಮಾಡಲು ಸಾಮ್ರಾಜ್ಯಶಾಹಿ ಬಣವು ನಡೆಸುತ್ತಿದ್ದ ಪಿತೂರಿಯ ಬಗ್ಗೆ ಅವರು ತಮ್ಮ ಆತಂಕವನ್ನು ಹೀಗೆ ವ್ಯಕ್ತಪಡಿಸಿದ್ದರು (ಕ್ರಾಸ್‌ರೋಡ್ಸ್ ಕೃತಿಯಲ್ಲಿ).

#### ಐತಿಹಾಸಿಕ ಮಾಸ್ಕೋ ವಿಚಾರಣೆ

ಆದರೆ, ಯುದ್ಧಕ್ಕೆ ಮುಂಚಿನ ಸೋವಿಯತ್ ಒಕ್ಕೂಟದ ಪ್ರಗತಿ ಮತ್ತು ಅದರೊಂದಿಗೆ ಸ್ಟಾಲಿನ್‌ರ ಪಯಣವು ಸುಗಮವಾಗಿರಲಿಲ್ಲ ಹಾಗೂ ಶಾಂತಿಯುತವಾಗಿಯೂ ಇರಲಿಲ್ಲ. ಪ್ರಮುಖ ಸಮಿತಿಗಳಲ್ಲಿದ್ದ ಟ್ರಾಟ್‌ಸ್ಕಿ, ಬುಖಾರಿನ್, ಕಾಮೆನೆವ್, ಝಿನೋವೀವ್ ಮತ್ತಿತರ ಪಕ್ಷದ್ರೋಹಿಗಳು ತಮ್ಮ ಸ್ಥಾನದ ಪ್ರಭಾವವನ್ನು ಬಳಸಿಕೊಂಡು ಪಕ್ಷದೊಳಗೆ ಹಾಗೂ ಸರ್ಕಾರ ಮತ್ತು ಕೆಂಪು ಸೇನೆಯ ಒಳಗೂ ಸಹ ರಹಸ್ಯಮಯ ಗುಂಪುಗಳನ್ನು ಕಟ್ಟಿಕೊಂಡು, ಪಕ್ಷವಿರೋಧಿ ಹಾಗೂ ಪ್ರಭುತ್ವ ವಿರೋಧಿ ಚಟುವಟಿಕೆಗಳನ್ನು ಮಾಡಲಾರಂಭಿಸಿದರು. ಈ ಪಿತೂರಿಗಾರರು ಎರಡನೇ ಮಹಾಯುದ್ಧಕ್ಕೆ ಮುನ್ನ ನಾಝಿ ಜರ್ಮನಿಯ ಜತೆಯಲ್ಲಿ ಗುಪ್ತ ಒಪ್ಪಂದವನ್ನು ಮಾಡಿಕೊಂಡಿದ್ದರು. ಸೋವಿಯತ್ ಒಕ್ಕೂಟದ ಮೇಲೆ ಹಿಟ್ಲರ್‌ನ ದಾಳಿಯ ಲಾಭವನ್ನು ಪಡೆದು, ಪಕ್ಷ ಮತ್ತು ಸರ್ಕಾರದ ನಾಯಕರನ್ನು ಹತ್ಯೆಗೈದು, ಮಿಲಿಟರಿ ಕ್ಷಿಪ್ರದಂಗೆಯ ಮೂಲಕ ಅಧಿಕಾರವನ್ನು ತಮ್ಮ ಕೈವಶ ಮಾಡಿಕೊಳ್ಳುವ ಕುತ್ಸಿತ ಯೋಜನೆಯ ಒಂದು ನೀಲನಕ್ಷೆಯನ್ನು ಅವರು ಸಿದ್ಧಪಡಿಸಿದ್ದರು. ಎರಡನೇ ಮಹಾಯುದ್ಧವು ಆರಂಭವಾಗುವ ಸ್ವಲ್ಪ ಮೊದಲು ಸ್ಟಾಲಿನ್‌ರ ವಿಶ್ವಾಸಾರ್ಹ ಒಡನಾಡಿಯಾಗಿದ್ದ ಮತ್ತು ಪಕ್ಷ ಹಾಗೂ ಸರ್ಕಾರದ ಪ್ರಮುಖ ನಾಯಕರಲ್ಲಿ ಮತ್ತು 2ನೇ ಪುಟಕ್ಕೆ

ಈ ಲೇಖನದ ಭಾಗ–01ನ್ನು ಓದಲು ಈ ಮೇಲಿನ QR ಕೋಡ್ ಅನ್ನು ಬಳಸಿ.

## ಉತ್ತರ ಕರ್ನಾಟಕದ ಪ್ರವಾಹ ಪೀಡಿತ ಜನರಿಗೆ ತಕ್ಷಣ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕೆಂದು ಎಸ್‌ಯುಸಿಐ(ಸಿ) ಒತ್ತಾಯ

ರಾಜ್ಯದ ಕಲಬುರ್ಗಿ, ಯಾದಗಿರಿ, ಬೀದರ್, ವಿಜಯಪುರ, ರಾಯಚೂರು ಇನ್ನಿತರ ಜಿಲ್ಲೆಗಳ ನೂರಾರು ಹಳ್ಳಿಗಳು ಅತಿವೃಷ್ಟಿ ಮತ್ತು ಪ್ರವಾಹಕ್ಕೆ ತುತ್ತಾಗಿವೆ. ಜನ, ಜಾನುವಾರು, ಮನೆ ಮತ್ತು ಬೆಳೆಹಾನಿ ವ್ಯಾಪಕವಾಗಿದೆ.

ಇಂತಹ ಸಂದರ್ಭದಲ್ಲಿ ತೊಂದರೆಗೊಳಗಾದ ಜನರಿಗೆ ತಕ್ಷಣವೇ ಗಂಜಿ ಕೇಂದ್ರಗಳನ್ನು ತೆರೆದು ಅಲ್ಲಿ ಅಗತ್ಯ ಮೂಲ ಸೌಕರ್ಯ ಒದಗಿಸಬೇಕು. ಜಾನುವಾರುಗಳಿಗೆ ಕೂಡ ಅಗತ್ಯಕ್ಕೆ ಅನುಗುಣವಾಗಿ ಮೇವು ಕೇಂದ್ರಗಳನ್ನು ಆರಂಭಿಸಬೇಕು.

ಹಾನಿಯಾದ ಮನೆಗಳಿಗೆ ಹಾನಿಗೆ ತಕ್ಕಂತೆ ಪರಿಹಾರ ಒದಗಿಸಬೇಕು. ಹಾನಿಯಾದ ಬೆಳೆಗಳಿಗೆ ನ್ಯಾಯಯುತ, ಸಮರ್ಪಕ ಪರಿಹಾರ ನೀಡಬೇಕು. ಗೇಣಿ ಮತ್ತು ಗುತ್ತಿಗೆ ಆಧಾರದ ಕೃಷಿ ಭೂಮಿಯನ್ನು ಗುರುತಿಸಿ ಗೇಣಿದಾರರಿಗೆ ಪರಿಹಾರ ದೊರಕುವಂತೆ ನೋಡಬೇಕು.

ಸಾಂಕ್ರಾಮಿಕ ರೋಗಗಳು ಹರಡದಂತೆ ವೈದ್ಯಕೀಯ ಶಿಬಿರಗಳನ್ನು ತೆರೆಯಬೇಕು. ಪ್ರತಿಬಾರಿ ಮುಳುಗಡೆಯಾಗುವ ನದಿತೀರದ ಹಳ್ಳಿಗಳಿಗೆ ಸಮರ್ಪಕವಾದ ಪುನರ್ವಸತಿ ಯೋಜನೆ ರೂಪಿಸಬೇಕು.

ಕೇಂದ್ರ ಸರ್ಕಾರವು ಕೂಡ ತನ್ನ ನೈಸರ್ಗಿಕ ಪ್ರಕೋಪ ನಿಧಿಯಿಂದ ಪರಿಹಾರ ನೀಡಬೇಕು. ರಾಜ್ಯ ಸರ್ಕಾರ ಮತ್ತು ಆಯಾ ಜಿಲ್ಲಾಡಳಿತಗಳು ಸಮರದೋಪಾದಿಯಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ. ಉಮಾ ಅವರು ಒತ್ತಾಯಿಸಿದ್ದಾರೆ.




ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಆಯಾ ಜಿಲ್ಲಾ ಸಮಿತಿಗಳು ತಕ್ಷಣವೇ ಜನರ ನೆರವಿಗೆ ಧಾವಿಸುವಂತೆ ಕಾಮ್ರೇಡ್ ಕೆ. ಉಮಾ ಕರೆ ನೀಡಿದ್ದಾರೆ.

## ಹಿಟ್ಲರನ ಫ್ಯಾಸೀವಾದದ ವಿರುದ್ಧ ವಿಜಯ

1ನೇ ಪುಟದಿಂದ ನೀತಿ ನಿರೂಪಕರಲ್ಲಿ ಒಬ್ಬರಾದ ಕಿರೋವ್ ಅವರನ್ನು ಲೆನಿನ್‌ಗ್ರಾಡ್‌ನಲ್ಲಿ ಸಂರಕ್ಷಿತ ಪ್ರದೇಶದ ಒಳಗಡೆಯೇ ಹತ್ಯೆ ಮಾಡಲಾಯಿತು. ಆಗ, ಈ ಪಿತೂರಿಯು ಬಯಲಾಯಿತು. ತನಿಖೆಯಿಂದ ಪಕ್ಷ, ಸರ್ಕಾರ ಮತ್ತು ಕೆಂಪು ಸೇನೆಯ ವಿವಿಧ ಹಂತಗಳಲ್ಲಿ ಪ್ರತಿ–ಕ್ರಾಂತಿಕಾರಿ ಗುಪ್ತ ಗುಂಪುಗಳು ಸಕ್ರಿಯವಾಗಿದ್ದು, ಮುಂಬರಲಿದ್ದ ಯುದ್ಧದ ಲಾಭವನ್ನು ಪಡೆದು ಪ್ರತಿ–ಕ್ರಾಂತಿಯನ್ನು ಪ್ರಚೋದಿಸಲು ಹಲವು ಶಕ್ತಿಗಳು ಕಾಯುತ್ತಿದ್ದವು ಎಂದು ಬೆಳಕಿಗೆ ಬಂತು. ಆ ಸಂದರ್ಭದಲ್ಲಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಬಿಟ್ಟು ಸ್ಟಾಲಿನ್‌ರ ಬಳಿ ಬೇರೆ ದಾರಿಯಿರಲಿಲ್ಲ.

1933 ಮತ್ತು 1938ರ ನಡುವೆ ನಡೆದ ವಿವಿಧ ಪ್ರಕರಣಗಳ ವಿಚಾರಣೆಗಳ ಸಮಯದಲ್ಲಿ ಈ ಪಿತೂರಿಯ ಭಯಾನಕ ಸ್ವರೂಪವು ಇಡೀ ಜಗತ್ತಿಗೆ ತಿಳಿಯಿತು. 1933 ರಿಂದ ಈ ಆರೋಪಿತ ದೇಶದ್ರೋಹಿಗಳ ವಿಚಾರಣೆಗಳು ಬಹಿರಂಗವಾಗಿ ಮತ್ತು ಸಾರ್ವಜನಿಕರ ಸಂಪೂರ್ಣ ವೀಕ್ಷಣೆಯಲ್ಲಿ ನಡೆದವು. ಸ್ಟಾಲಿನ್ ಆಗಲಿ ಅಥವಾ ಇತರರು ಯಾರೇ ಆಗಲಿ, ಯಾರ ಹಸ್ತಕ್ಷೇಪವೂ ಇಲ್ಲದ ಮತ್ತು ಆರೋಪಿಗಳಿಗೆ ತಮ್ಮ ವಾದಗಳನ್ನು ಮಂಡಿಸಲು ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿದ ಇಂತಹ ವಿಚಾರಣೆಯು ಇಡೀ ಜಗತ್ತಿನಲ್ಲೇ ಅಭೂತಪೂರ್ವವಾಗಿತ್ತು. ದೇಶವಿದೇಶಗಳ ಪತ್ರಕರ್ತರು, ನ್ಯಾಯವಾದಿಗಳು, ರಾಜತಾಂತ್ರಿಕರು ಮತ್ತು ರಾಜಕೀಯ ನಾಯಕರನ್ನು ವಿಚಾರಣಾ ಕೊಠಡಿಗಳಲ್ಲಿ ಉಪಸ್ಥಿತರಿರಲು ಆಹ್ವಾನ ನೀಡಲಾಗಿತ್ತು ಮತ್ತು ಅನೇಕರು ಸಂಪೂರ್ಣ ವಿಚಾರಣಾ ಪ್ರಕ್ರಿಯೆಯನ್ನು ವೀಕ್ಷಿಸಿದರು. ದೇಶದ್ರೋಹಿಗಳ ಇಂತಹ ಬಹಿರಂಗ ವಿಚಾರಣೆ, ಅದೂ ವಿದೇಶಿ ಪ್ರಮುಖರ ಸಮ್ಮುಖದಲ್ಲಿ, ಈ ಹಿಂದೆ ಜಗತ್ತಿನ ಯಾವುದೇ ದೇಶದಲ್ಲಿ ನಡೆದ ಉದಾಹರಣೆಗಳು ಇಲ್ಲವೇ ಇಲ್ಲ. ವಿಚಾರಣೆಯನ್ನು ಗಮನಿಸಿದವರೆಲ್ಲರೂ ಇಷ್ಟು ಮುಕ್ತವಾಗಿ ಮತ್ತು ಜನತಾಂತ್ರಿಕ ರೀತಿಯಲ್ಲಿ ನಡೆಸಿದ ನ್ಯಾಯನಿರ್ಣಯವನ್ನು ಜಗತ್ತು ಹಿಂದೆಂದೂ ಕಂಡೇ ಇರಲಿಲ್ಲ ಎಂದು ಘೋಷಿಸಿದರು. ಆಗ ನಡೆದಿರುವ ಘಟನೆಗಳನ್ನು ಅವರಲ್ಲಿ ಅನೇಕರು ತಮ್ಮ ಹಲವಾರು ಪುಸ್ತಕಗಳಲ್ಲಿ ವಿವರವಾಗಿ ದಾಖಲಿಸಿದ್ದಾರೆ. ನಿಸ್ಸಂದೇಹವಾಗಿ ಅಲ್ಲಿ ಪ್ರಭುತ್ವದ ವಿರುದ್ಧ ಬಹುದೊಡ್ಡ ಪಿತೂರಿಯು ನಡೆದಿತ್ತು ಎಂದೂ ಅವರು ಹೇಳಿದರು.

ಆಗ ಸೋವಿಯತ್ ಒಕ್ಕೂಟದಲ್ಲಿ ಅಮೆರಿಕದ ರಾಯಭಾರಿಯಾಗಿದ್ದ ಮತ್ತು ವಿಚಾರಣೆಗಳ ಪ್ರತ್ಯಕ್ಷದರ್ಶಿಯಾಗಿದ್ದ ಜೋಸೆಫ್ ಡೇವಿಸ್, ವಿಚಾರಣೆಯ ಕಲಾಪಗಳನ್ನು ಗಮನಿಸಿದ ನಂತರ, ಆರೋಪಿಗಳು ತಮ್ಮ ತಪ್ಪನ್ನು ಒಪ್ಪಿಕೊಳ್ಳಲು ಯಾವುದೇ ಒತ್ತಾಯವಿರಲಿಲ್ಲ ಮತ್ತು ಆರೋಪಿಗಳ ಅಪರಾಧಗಳನ್ನು ಸೋವಿಯತ್ ಸರ್ಕಾರವು ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ಸಾಬೀತುಪಡಿಸಲು ಸಾಧ್ಯವಾಯಿತು ಎಂದು ತಮಗೆ ಮನವರಿಕೆಯಾಯಿತು ಎಂದು ತಮ್ಮ ಪ್ರಸಿದ್ಧ ಪುಸ್ತಕ "ಮಿಷನ್ ಟು ಮಾಸ್ಕೋ"ದಲ್ಲಿ ಬರೆದಿದ್ದಾರೆ.

ವಿಚಾರಣೆಯ ನಂತರ ಬೋಲ್ಶೆವಿಕ್ ಪಕ್ಷವನ್ನು ದೇಶದ್ರೋಹಿಗಳಿಂದ ಮತ್ತು ಪಿತೂರಿಗಾರರಿಂದ ಸ್ವಚ್ಛಗೊಳಿಸಲು ಒಂದು ಪೂರ್ಣ ಶುದ್ಧೀಕರಣ (Purging) ಕ್ರಿಯೆಯು ನಡೆಯಿತು. ಈ ಶುದ್ಧೀಕರಣ ಪ್ರಕ್ರಿಯೆಯು ಸ್ಟಾಲಿನ್ ನಡೆಸಿದ ಕ್ರೌರ್ಯ ಮತ್ತು ದಬ್ಬಾಳಿಕೆ ಎಂದು ಹಲವರು ದೂಷಿಸಿದರು. ಆದರೆ ಕಠಿಣ ಕ್ರಮಗಳನ್ನು ಕೈಗೊಳ್ಳದೆ ಹೋಗಿರದಿದ್ದರೆ, ಸೋವಿಯತ್ ಸಮಾಜವಾದವು ತೀವ್ರ ಅಪಾಯಕ್ಕೆ ಸಿಲುಕುತ್ತಿತ್ತು ಮತ್ತು ಹಿಟ್ಲರ್‌ನ ಫ್ಯಾಸೀವಾದದ ವಿರುದ್ಧ ವೀರಾವೇಶದ ವಿಜಯಶಾಲಿ ಯುದ್ಧವನ್ನು ನಡೆಸಲು ಆಗ ಸಾಧ್ಯವಾಗುತ್ತಿರಲಿಲ್ಲ ಎಂದು ಇತಿಹಾಸವು ಸಾಬೀತುಪಡಿಸಿದೆ. ಆ ಸಂಪೂರ್ಣ ಕಾರ್ಯಾಚರಣೆಯು ದೋಷಗಳಿಂದ ಮುಕ್ತವಾಗಿರಲಿಲ್ಲ ಎಂದು ಸ್ವತ: ಒಪ್ಪಿಕೊಂಡ ಸ್ಟಾಲಿನ್, "ಈ ಶುದ್ಧೀಕರಣದಲ್ಲಿ ಗಂಭೀರವಾದ ತಪ್ಪುಗಳು ಆಗಿಲ್ಲವೆಂದು ಹೇಳಲಾಗುವುದಿಲ್ಲ. ದುರದೃಷ್ಟವಶಾತ್, ನಮ್ಮ ನಿರೀಕ್ಷೆಯನ್ನೂ ಮೀರಿ ತಪ್ಪುಗಳು ನಡೆದವು. ಆದಾಗ್ಯೂ, 1933–1936ರ ಶುದ್ಧೀಕರಣವು ಅನಿವಾರ್ಯವಾಗಿತ್ತು ಮತ್ತು ಒಟ್ಟಾರೆಯಾಗಿ, ಅದರ ಫಲಿಶ್ರುತಿಗಳು ಪ್ರಯೋಜನಕಾರಿಯಾಗಿದ್ದವು" ಎಂದು ನಂತರ ಹೇಳಿದರು. (ಪ್ರಾಬ್ಲಮ್ಸ್ ಆಫ್ ಲೆನಿನಿಸಂ ಕೃತಿಯಲ್ಲಿ)

ಬ್ರಿಟನ್ನಿನ ಪ್ರಧಾನಿಯಾಗಿದ್ದ ಚರ್ಚಿಲ್, ಸ್ವಯಂ ಒಬ್ಬ ಕಟ್ಟಾ ಸಾಮ್ರಾಜ್ಯಶಾಹಿ ಮತ್ತು ತೀವ್ರ ಕಮ್ಯುನಿಸ್ಟ್ ವಿರೋಧಿಯಾಗಿದ್ದರೂ ಸಹ, 1942ರ ಫೆಬ್ರವರಿ 16ರಂದು ಮಾಡಿದ ರೇಡಿಯೋ ಭಾಷಣದಲ್ಲಿ, ಹಿಟ್ಲರ್‌ಗೆ, ಅವನು ನಿರಾಶನಾಗುವಂತೆ, ರಷ್ಯಾದಲ್ಲಿ ಒಬ್ಬನೇ ಒಬ್ಬ 'ಫಿಫ್ತ್ ಕಾಲಮ್ನಿಸ್ಟ್' (ನಾಜ಼ಿ ಗೂಢಚಾರ) ಕೂಡ ಉಳಿದಿರಲಿಲ್ಲ ಎಂದು ಹೇಳಿದರು. ಹಿಟ್ಲರ್‌ನ ಮುಖ್ಯ ಹಿಂಬಾಲಕನಾಗಿದ್ದ ಗೋರಿಂಗ್ ಕೂಡ 'ನಾನು ನಿರೀಕ್ಷಿಸಿದ್ದ ಕುಸಿತವು ಕೆಂಪು ಸೇನೆಯಲ್ಲಿ ಸಂಭವಿಸಲಿಲ್ಲ' ಎಂದು ಹಿಟ್ಲರ್ ವಿಷಾದದಿಂದ ತನಗೆ ತಿಳಿಸಿದ್ದಾಗಿ 1942ರ ಮೇ 8ರಂದು ತನ್ನ ದಿನಚರಿಯಲ್ಲಿ ಬರೆದಿದ್ದಾನೆ. ಹಾಗೇಕಾಯಿತು? ಏಕೆಂದರೆ, ತಮ್ಮ ಕ್ರಾಂತಿಕಾರಿ ಜ್ಞಾನವನ್ನು ಬಳಸಿ ಸ್ಟಾಲಿನ್, 'ಫಿಫ್ತ್ ಕಾಲಂ'ಗಳನ್ನು ಸಂಘಟಿಸುವ ಎಲ್ಲಾ ವಿಷಬೇರುಗಳನ್ನು ಬುಡಸಮೇತ ಕೀಳುವಲ್ಲಿ ಯಶಸ್ವಿಯಾಗಿದ್ದರು.

"ಅಂದ ಹಾಗೆ, ರಷ್ಯಾದ ವಿಚಾರಣೆಗಳು ನಕಲಿಯಲ್ಲ, ಬದಲಿಗೆ ಕ್ರಾಂತಿಯ ವಿಚಾರಗಳಿಗೆ ದ್ರೋಹ ಬಗೆದವರ ನಡುವೆ ಸ್ಟಾಲಿನ್ ಅವರನ್ನು ಮೂರ್ಖ ಪ್ರತಿಗಾಮಿ ಎಂದು ನೋಡುವವರ ನಡುವೆ ಒಂದು ಪಿತೂರಿ ನಡೆದಿದೆ ಎಂಬುದಕ್ಕೆ ಹೆಚ್ಚು ಹೆಚ್ಚು ಪುರಾವೆಗಳು ಸಿಗುತ್ತಿವೆ... ಆರಂಭದಲ್ಲಿ, ಇದು ಸುಳ್ಳು ಮತ್ತು ವಂಚನೆಯನ್ನು ಆಧರಿಸಿದ ಸರ್ವಾಧಿಕಾರಿಯ ದಬ್ಬಾಳಿಕೆಯ ಕೃತ್ಯಗಳೆಂದು ನಾನು ದೃಢವಾಗಿ ನಂಬಿದ್ದೆ, ಆದರೆ ಅದು ಭ್ರಮೆಯಾಗಿತ್ತು" ಎಂದು ಆಲ್ಬರ್ಟ್ ಐನ್‌ಸ್ಟೈನ್ ಕೂಡ ಹೇಳಿದ್ದಾರೆ. (ಹ್ಯಾಸ್ ಸೈನ್ಸ್ ಡಿಸ್ಕವರ್ಡ್ ಗಾಡ್ – ಎ. ಕೆ. ಕಾಟನ್ ಕೃತಿಯಲ್ಲಿ)

### ಜರ್ಮನಿಯೊಂದಿಗೆ ಒಪ್ಪಂದದ ತಂತ್ರ

ಸೋವಿಯತ್ ಒಕ್ಕೂಟವು ದುರ್ಬಲವಾಗಿದೆ ಎಂದು ಹಿಟ್ಲರ್ ಬಗೆದಿದ್ದನ್ನು ಮತ್ತು ಆರಂಭದಲ್ಲಿ, ತನ್ನ ಶಕ್ತಿಶಾಲಿ ಪಾಶ್ಚಿಮಾತ್ಯ ಶತ್ರುಗಳನ್ನು ಸೋಲಿಸಲು ಅವನು ಹೆಚ್ಚು ಉತ್ಸುಕನಾಗಿರುವುದನ್ನು ಸ್ಟಾಲಿನ್ ಗ್ರಹಿಸಿದರು. ಆದರೆ, ಕೊನೆಗೆ ಸೋವಿಯತ್ ಒಕ್ಕೂಟದ ಮೇಲೆ ಹಿಟ್ಲರ್ ತನ್ನ ಬಂದೂಕನ್ನು ತಿರುಗಿಸುತ್ತಾನೆ ಎಂದು ಅವರಿಗೆ ಖಚಿತವಾಗಿತ್ತು. ಏಕೆಂದರೆ ನಾಜಿಗಳು ಸಮಾಜವಾದವನ್ನು ಉಳಿಯಲು ಬಿಡಲಾರರು ಎಂದು ಅವರಿಗೆ ಅರಿವಿತ್ತು. ಆದ್ದರಿಂದ, ಈ ಅದ್ಭುತ ದೂರದೃಷ್ಟಿಯೊಂದಿಗೆ, ನಾಜ಼ಿ ಜರ್ಮನಿಯೊಂದಿಗೆ ಪರಸ್ಪರರ ಮೇಲೆ ದಾಳಿ ಮಾಡದಂತೆ ಒಂದು ಒಪ್ಪಂದವನ್ನು (Non Agression Pact) ಸ್ಟಾಲಿನ್ ಮಾಡಿಕೊಂಡರು. 1939ರ ಆಗಸ್ಟ್ 23ರಂದು ಮೊಲೊಟೊವ್–ರಿಬ್ಬೆನ್‌ಟ್ರಾಪ್ ದಾಳಿಯನ್ನು ನಿಷೇಧಿಸುವ ಒಪ್ಪಂದಕ್ಕೆ ಸಹಿ ಹಾಕಿದರು. ಅಂದು, ಹಿಟ್ಲರ್‌ಗೆ ಇದು ಅನುಕೂಲಕರವಾಗಿತ್ತು. ಏಕೆಂದರೆ, ಆಗ ಅವನ ಕಣ್ಣು ಪಾಶ್ಚಿಮಾತ್ಯ ರಂಗದ ಮೇಲಿತ್ತು. ಸಮಯ ವ್ಯರ್ಥ ಮಾಡದೆ, ಜರ್ಮನಿಯು ಸೆಪ್ಟೆಂಬರ್ 1, 1939ರಂದು ಪೋಲೆಂಡ್ ಮೇಲೆ ಆಕ್ರಮಣ ಮಾಡಿತು. ನಂತರ, ಬ್ರಿಟನ್ ಮತ್ತು ಫ್ರಾನ್ಸ್‌ಗಳು ಸೆಪ್ಟೆಂಬರ್ 3, 1939ರಂದು ಜರ್ಮನಿಯ ಮೇಲೆ ಯುದ್ಧ ಸಾರಿದವು ಹೀಗೆ ಎರಡನೇ ಮಹಾಯುದ್ಧವು ಅಧಿಕೃತವಾಗಿ ಶುರುವಾಯಿತು.

ಜರ್ಮನಿಯೊಂದಿಗೆ ಒಪ್ಪಂದ ಮಾಡಿಕೊಂಡ ಸ್ಟಾಲಿನ್‌ರ ಉಪಾಯವನ್ನು ದುರುದ್ದೇಶದಿಂದ ದೂಷಿಸಿದ ಮತ್ತು ಅದನ್ನು ಇಂದಿಗೂ ಖಂಡಿಸುತ್ತಿರುವವರಿಗೆ ತಕ್ಕ ಉತ್ತರ ನೀಡುತ್ತಾ, ಸ್ಟಾಲಿನ್, "ಸೋವಿಯತ್ ಸರ್ಕಾರವು ಅಂತಹ ನಂಬಿಕೆದ್ರೋಹಿಗಳು ಮತ್ತು ಹಿಟ್ಲರ್ ಹಾಗೂ ರಿಬ್ಬನ್‌ಟ್ರಾಪ್‌ರಂತಹ ರಕ್ಕಸರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲು ಹೇಗೆ ಒಪ್ಪಿಕೊಂಡಿತು ಎಂದು ನೀವು ಕೇಳಬಹುದು..... ಯಾವುದೇ ಶಾಂತಿಪ್ರಿಯ ರಾಷ್ಟ್ರವು ತನ್ನ ನೆರೆಯ ದೇಶದೊಂದಿಗೆ ಶಾಂತಿ ಒಪ್ಪಂದವನ್ನು ತಿರಸ್ಕರಿಸಲು ಸಾಧ್ಯವಿಲ್ಲ ಎಂದು ನಾನು ಭಾವಿಸುತ್ತೇನೆ, ಅಂತಹ ದೇಶಕ್ಕೆ ಹಿಟ್ಲರ್ ಮತ್ತು ರಿಬ್ಬನ್‌ಟ್ರಾಪ್‌ನಂತಹವರೇ ಮುಖ್ಯಸ್ಥರಾಗಿದ್ದರೂ ಸಹ. ಆದರೆ, ಆ ಶಾಂತಿ ಒಪ್ಪಂದವು ನೇರವಾಗಿ ಅಥವಾ ಪರೋಕ್ಷವಾಗಿ ಶಾಂತಿಪ್ರಿಯ ರಾಷ್ಟ್ರದ ಪ್ರಾದೇಶಿಕ ಸಮಗ್ರತೆ, ಸ್ವಾತಂತ್ರ್ಯ ಮತ್ತು ಗೌರವಕ್ಕೆ ಅಪಾಯ ತಂದೊಡ್ಡುವಂತೆ ಇರಬಾರದು ಎಂಬ ಏಕೈಕ ಅನಿವಾರ್ಯ ಷರತ್ತಿನ ಮೇಲೆ ಮಾತ್ರ ಇದು ಸಾಧ್ಯ. ಜರ್ಮನಿಯೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುವುದರಿಂದ ನಾವು ಏನನ್ನು ಗಳಿಸಿದೆವು? ನಾವು ನಮ್ಮ ದೇಶಕ್ಕೆ ಒಂದೂವರೆ ವರ್ಷಗಳ ಕಾಲ ಶಾಂತಿಯನ್ನು ಗಟ್ಟಿ ಮಾಡಿಕೊಂಡೆವು ಮತ್ತು ಒಪ್ಪಂದದ ಹೊರತಾಗಿಯೂ ಫ್ಯಾಸಿಸ್ಟ್ ಜರ್ಮನಿ ನಮ್ಮ ದೇಶದ ಮೇಲೆ ದಾಳಿ ಮಾಡಲು ಹವಣಿಸಿದರೆ ಅದನ್ನು ಹಿಮ್ಮೆಟ್ಟಿಸಲು ನಮ್ಮ ಸೈನ್ಯವನ್ನು ಸಿದ್ಧಪಡಿಸಿಕೊಳ್ಳುವ ಅವಕಾಶವನ್ನು ಗಳಿಸಿಕೊಂಡೆವು. ಇದು ನಮಗೆ ಒಂದು ಖಚಿತವಾದ ಲಾಭವಾಗಿತ್ತು ಮತ್ತು ಫ್ಯಾಸಿಸ್ಟ್ ಜರ್ಮನಿಗೆ ಒಂದು ಅನನುಕೂಲವಾಗಿತ್ತು.....ಇದು ಫ್ಯಾಸಿಸ್ಟ್ ಜರ್ಮನಿಯೊಂದಿಗಿನ ಯುದ್ಧದಲ್ಲಿ ಕೆಂಪು ಸೈನ್ಯದ ನಿರ್ಣಾಯಕ ಯಶಸ್ಸಿಗೆ ಮುಖ್ಯ ಕಾರಣವೆಂಬುದು ಖಚಿತ." (ಆನ್ ದಿ ಗ್ರೇಟ್ ಪೇಟ್ರಿಯಾಟಿಕ್ ವಾರ್ SW ಸಂಪುಟ XIV ಕೃತಿಯಲ್ಲಿ....)

### ಬ್ರಿಟನ್ ಮತ್ತು ಫ್ರಾನ್ಸ್ ವಿರುದ್ಧ ಜರ್ಮನಿ ಯುದ್ಧ ಆರಂಭ – ಮಿಲಿಟರಿ ಬಲ ವೃದ್ಧಿಸಿಕೊಂಡ ಸೋವಿಯತ್ ಒಕ್ಕೂಟ

ಕೇವಲ 2 ವರ್ಷಗಳ ಅವಧಿಯಲ್ಲಿ ಪೂರ್ವ ಮತ್ತು ಮಧ್ಯ ಯುರೋಪಿನ ಹಲವು ದೇಶಗಳು ನಾಜ಼ಿ ಬ್ಲಿಟ್ಜ್‌ಕ್ರೀಗ್(ಹಠಾತ್ ಅಚ್ಚರಿಯ ದಾಳಿ ನಡೆಸುವ ಹಿಟ್ಲರ್ ತಂತ್ರ)ಗೆ ಸಿಲುಕಿದವು. ಬ್ರಿಟನ್ ಮತ್ತು ಫ್ರಾನ್ಸ್ ವಿರುದ್ಧ ಯುದ್ಧ ಘೋಷಿಸಿದಾಗ ಮುಸೊಲಿನಿ ನೇತೃತ್ವದ ಇಟಲಿಯು ಅಧಿಕೃತವಾಗಿ ಜರ್ಮನಿಯೊಂದಿಗೆ ಸೇರಿಕೊಂಡಿತು. ಪ್ರಮುಖ ಸಾಮ್ರಾಜ್ಯಶಾಹಿ ಮತ್ತು ಮಿಲಿಟರಿ ಶಕ್ತಿಗಳಲ್ಲಿ ಒಂದಾದ ಫ್ರಾನ್ಸ್‌ಗೂ ಕೂಡ ಎರಡು ವಾರಗಳಿಗಿಂತ ಹೆಚ್ಚು ಕಾಲ ಫ್ಯಾಸೀವಾದಿ ಜರ್ಮನಿಯನ್ನು ಎದುರಿಸಲು ಸಾಧ್ಯವಾಗಲಿಲ್ಲ. ಅಂದು ಫ್ರಾನ್ಸ್‌ನ ಬಂಡವಾಳಶಾಹಿ ಆಳ್ವಿಕರು ಅಧಿಕಾರವನ್ನು ಹಸ್ತಾಂತರಿಸಿ ನಾಜ಼ಿಗಳಿಗೆ ಶರಣಾದರು. ಇಟಲಿಯು ದಕ್ಷಿಣ ಯುರೋಪ್ ಮತ್ತು ಉತ್ತರ ಆಫ್ರಿಕಾದಲ್ಲಿ ಈ ಯುದ್ಧವನ್ನು ಆರಂಭಿಸಿತು. ಸೆಪ್ಟೆಂಬರ್ 27, 1940ರಂದು ಜಪಾನ್ ಫ್ಯಾಸೀವಾದಿ ಕೂಟವನ್ನು ಸೇರಿಕೊಂಡಿತು.

ಫ್ಯಾಸೀವಾದಿ ಮಿಲಿಟರಿ ಶಕ್ತಿಯ ಬೂಟುಗಳ ಅಡಿಯಲ್ಲಿ ಸಿಲುಕಿದ ರಾಷ್ಟ್ರಗಳ ಗೊಂದಲದ ನಡುವೆ, ಮಹಾನ್ ಸ್ಟಾಲಿನ್ ನಾಯಕತ್ವದಲ್ಲಿ 24 ವರ್ಷ ತುಂಬಿದ್ದ ಯುವ ಸಮಾಜವಾದಿ ಸೋವಿಯತ್ ಒಕ್ಕೂಟವು, ತನ್ನ ಸಮರಶಕ್ತಿಯನ್ನು ಬಲಪಡಿಸುವಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿತ್ತು ಮತ್ತು ಎಲ್ಲಾ ಪ್ರಮುಖ ಕೈಗಾರಿಕೆಗಳನ್ನು ದೇಶದ ಒಳಕ್ಕೆ ಅಂದರೆ ಸೈಬೀರಿಯಾಕ್ಕೆ ಸ್ಥಳಾಂತರಿಸಿತು. ಇದರಿಂದಾಗಿ, ಉತ್ಪಾದನೆಯ ಮೇಲೆ ಯುದ್ಧದ ದುಷ್ಪರಿಣಾಮವಾಗದಂತೆ ಎಚ್ಚರ ವಹಿಸಿತು. ಕೆಂಪು ಸೈನ್ಯವು ಸಂಪೂರ್ಣವಾಗಿ ಆಕ್ರಮಣ ಮತ್ತು ರಕ್ಷಣಾ ತಂತ್ರಗಳನ್ನು ಅಭಿವೃದ್ಧಿಪಡಿಸುವಲ್ಲಿ ಮತ್ತು ತನ್ನ ವಾಯು ಪಡೆಯನ್ನು ಸುಧಾರಿಸುವಲ್ಲಿ ಅದು ಗಮನಹರಿಸಿತು.

1940ರ ಮೇ ತಿಂಗಳಲ್ಲಿ ಫ್ರಾನ್ಸ್, ನಾಜ಼ಿಗಳ ಕೈವಶವಾಗುವ ವೇಳೆಗೆ ಸೋವಿಯತ್ ಒಕ್ಕೂಟವು ತನ್ನ ತಂತ್ರಗಳು ಮತ್ತು ಮಿಲಿಟರಿ ಬಲದೊಂದಿಗೆ ಸಿದ್ಧವಾಗಿತ್ತು. ಸ್ಟಾಲಿನ್ ಇಡೀ ಸೋವಿಯತ್ ಜನರನ್ನು ಒಂದಾಗಿ ಫ್ಯಾಸೀವಾದಿ ಆಕ್ರಮಣವನ್ನು ಎದುರಿಸಲು ಪ್ರೇರೇಪಿಸಿದರು. ಸ್ಟಾಲಿನ್, ಕೆಂಪು ಸೈನ್ಯದ ಸರ್ವೋಚ್ಚ ಕಮಾಂಡರ್ ಆದಾಗ, ಅವರು ಸೋವಿಯತ್ ಒಕ್ಕೂಟವನ್ನು ವಿಜಯದತ್ತ ಮುನ್ನಡೆಸಲು ಯುದ್ಧ ತಂತ್ರಗಳನ್ನು ಸಂಪೂರ್ಣವಾಗಿ ಕಲಿಯಲು ಪ್ರಾರಂಭಿಸಿದರು. ಆರಂಭದಲ್ಲಿ, ತನ್ನ ಹಠಾತ್ತಾದ ಅಚ್ಚರಿಯ ದಾಳಿಯಲ್ಲಿ ಒಂದೂವರೆ ಅಥವಾ ಎರಡು ತಿಂಗಳಲ್ಲಿ ಸೋವಿಯತ್ ಒಕ್ಕೂಟವನ್ನು ಕಬಳಿಸಲು ಸಾಧ್ಯವಾಗುತ್ತದೆ ಎಂದು ನಂಬಿದ್ದ ಜರ್ಮನಿ, ಸೋವಿಯತ್ ದೇಶದ ಹೊರಭಾಗಗಳನ್ನು ವಶಪಡಿಸಿಕೊಳ್ಳುತ್ತಾ ಮುನ್ನಡೆಯುವ ಬದಲಿಗೆ ಒಳಭಾಗಕ್ಕೇ ನುಗ್ಗಿತು. ಆದರೆ, ಅತಿಶೀಘ್ರದಲ್ಲೇ ತಾನು ಮಾಡಿದ್ದು ಎಂತಹ ತಪ್ಪು ಎಂದು ಅದಕ್ಕೆ ಅರಿವಾಗತೊಡಗಿತು.

"ಇದು ಇಡೀ ಜನತೆಯ ಯುದ್ಧ. ಅಜೇಯ ಸೇನೆಗಳು ಇರಲಿಲ್ಲ ಮತ್ತು ಎಂದಿಗೂ ಇರುವುದಿಲ್ಲ. ಜರ್ಮನಿ ಅಚ್ಚರಿಯ ದಾಳಿಯ ಮೂಲಕ ಪ್ರಮುಖ ಯಶಸ್ಸನ್ನು ಗಳಿಸಿದೆ. ಆದರೆ, ತಾನೊಂದು ರಕ್ತಪಿಪಾಸು ದಾಳಿಕೋರ ಎಂದು ಬಯಲಾಗಿದ್ದು, ರಾಜಕೀಯವಾಗಿ ಸೋತಿದೆ. ಕೆಂಪು ಸೈನ್ಯವು ಸೋವಿಯತ್ ದೇಶದ ಪ್ರತಿ ಇಂಚು ಭೂಮಿಗಾಗಿ ಹೋರಾಡಬೇಕು. ಆದರೆ, ಹಿಂದಡಿಯಿಡುವುದು ಅನಿವಾರ್ಯವಾದ ಸಂದರ್ಭದಲ್ಲಿ, ಅಮೂಲ್ಯವಾಗಿರುವ ಎಲ್ಲವನ್ನೂ ಸ್ಥಳಾಂತರಿಸಬೇಕು ಅಥವಾ ನಾಶಪಡಿಸಬೇಕು. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ನಾವು ಸೆಣಸುವ ಯುದ್ಧವು, ಜನತಾಂತ್ರಿಕ ಸ್ವಾತಂತ್ರ್ಯಕ್ಕಾಗಿ ಯುರೋಪ್ ಮತ್ತು ಅಮೆರಿಕದ ಜನರ ಹೋರಾಟದೊಂದಿಗೆ ಬೆಸೆದುಕೊಳ್ಳುತ್ತದೆ" ('ದಿ ಸ್ಟಾಲಿನ್ ಎರಾ' – ಅನ್ನಾ ಲೂಯಿಸ್ ಸ್ಟ್ರಾಂಗ್) ಎಂದು ಮಹಾನ್ ಸ್ಟಾಲಿನ್ ಕರೆ ನೀಡಿದರು. ಅದರಂತೆ, ಸೋವಿಯತ್ ಸೈನ್ಯ ಮತ್ತು ಜನಸಾಮಾನ್ಯರು ಮೊದಲಿಗೆಯೇ ತಮ್ಮ ಮನೆ, ಆಸ್ತಿಪಾಸ್ತಿಗಳನ್ನು ಬಿಟ್ಟು ಹೊರಡುವಾಗ, ಜರ್ಮನ್ ಸೇನೆಗೆ ಏನೂ ಸಹ ಲಭ್ಯವಾಗದಂತೆ ಎಲ್ಲಾ ಬೆಳೆಗಳನ್ನು ಸುಟ್ಟುಹಾಕಿದರು ಮತ್ತು ನೀರಿನ ಮೂಲಗಳನ್ನು ವಿಷಪೂರಿತಗೊಳಿಸಿದರು, ಸೇತುವೆಗಳು ಮತ್ತು ರೈಲು ಮಾರ್ಗಗಳಂತಹ ಮೂಲಸೌಕರ್ಯಗಳನ್ನು ತಾವೇ ಧ್ವಂಸ ಮಾಡಿದರು. ಕೆಂಪು ಸೈನ್ಯವು ಫ್ಯಾಸೀವಾದಿ ಜರ್ಮನ್ ಪಡೆಗಳನ್ನು ಒಳಕ್ಕೆ ಬಿಟ್ಟುಕೊಂಡು ನಂತರ ಅವರನ್ನು ಹಿಂದಿನಿಂದಲೂ ಸುತ್ತುವರಿಯಿತು. ಇದು ಸ್ಟಾಲಿನ್‌ರ ಒಂದು ಮಾಸ್ಟರ್ ಪ್ಲಾನ್(ಸ್ಕಾರ್ಚ್ಡ್ ಅರ್ಥ್ ಸ್ಟ್ರಾಟಜಿ) ಆಗಿತ್ತು.

ಮತ್ತೊಂದೆಡೆ, ಸೋವಿಯತ್ ಒಕ್ಕೂಟದ ಪ್ರತಿರೋಧವು ಒಂದು ತಿಂಗಳ ದಾಳಿಯಲ್ಲಿ ನಾಶವಾಗುತ್ತದೆ ಎಂದು ಬ್ರಿಟನ್ ಮತ್ತು ಅಮೆರಿಕ ಭಾವಿಸಿದ್ದವು. ಆದರೆ, "ಜರ್ಮನ್ನರು ಈವರೆಗೂ ಎದುರಿಸದಿದ್ದ ಪ್ರಬಲ ಪ್ರತಿರೋಧವನ್ನು ರಷ್ಯನ್ನರು ಒಡ್ಡಿದ್ದಾರೆ" ಎಂದು ನಂತರ ಅಮೆರಿಕ ಒಪ್ಪಿಕೊಂಡಿತು. ಆರು ವಾರಗಳಲ್ಲಿ, ಬ್ರಿಟಿಷ್ ಪ್ರಧಾನಿ ಚರ್ಚಿಲ್ ಕೆಂಪು ಸೈನ್ಯದ 'ಅದ್ಭುತ ಶ್ರದ್ಧೆ'ಯನ್ನು ಪ್ರಶಂಸಿಸಿದರು ಮತ್ತು ಅವರ ಮಿಲಿಟರಿ ಕಾರ್ಯಾಚರಣೆಯ ದಕ್ಷತೆಯನ್ನು ಕಂಡು ಬೆರಗಾದರು.

ಪಾಶ್ಚಿಮಾತ್ಯ ಭಾಗದಲ್ಲಿ ಮಿತ್ರ ರಾಷ್ಟ್ರಗಳಾದ ಬ್ರಿಟನ್, ಫ್ರಾನ್ಸ್, ಅಮೆರಿಕಾ, ಜರ್ಮನಿಯನ್ನು ಎದುರಿಸಿದರೆ, (ಎರಡನೇ ಮುಂದಳದ ಕ್ರಿಯಾಶೀಲತೆ) ಆಗ ಪೂರ್ವ ಭಾಗದಲ್ಲಿ ಸೋವಿಯತ್ ಒಕ್ಕೂಟದೊಂದಿಗೆ ಯುದ್ಧನಿರತ ಜರ್ಮನಿಯು ಕಂಗೆಡುತ್ತದೆ ಎಂದು ಸ್ಟಾಲಿನ್ ಮಿತ್ರರಾಷ್ಟ್ರಗಳನ್ನು ಪದೇಪದೇ ಆಗ್ರಹಿಸಿದರು. ಆದರೆ, ನಾಜ಼ಿಗಳ ದಾಳಿಯಿಂದ ಸೋವಿಯತ್ ಒಕ್ಕೂಟ ಸೋಲುವುದನ್ನು ಕಾಣಲು ಬಯಸುತ್ತಿದ್ದ 'ಮಿತ್ರರಾಷ್ಟ್ರಗಳು', ಯುದ್ಧದ ಕೊನೆಯ ದಿನಗಳವರೆಗೂ ಪಶ್ಚಿಮ ಯುರೋಪ್‌ನಲ್ಲಿ ಎರಡನೇ ಮುಂದಳದ ಕ್ರಿಯಾಶೀಲತೆಯ ಕಾರ್ಯವನ್ನು ಮುಂದೂಡಿದವು ಮತ್ತು ಯುದ್ಧಕ್ಕೆ ಕೈಜೋಡಿಸುವ ತಮ್ಮ ಈ ನೈತಿಕ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಎಲ್ಲಾ ರೀತಿಯ ಕುತಂತ್ರಗಳನ್ನು ಬಳಸಿದರು. ಹಾಗಾಗಿ, ಸೋವಿಯತ್ ಒಕ್ಕೂಟವು ಫ್ಯಾಸೀವಾದಿಗಳ ಸಂಯುಕ್ತ ಮಿಲಿಟರಿ ಶಕ್ತಿಯ(ಜರ್ಮನಿ, ಇಟಲಿ ಮತ್ತು ಜಪಾನ್) ವಿರುದ್ಧ ಏಕಾಂಗಿಯಾಗಿ ಹೋರಾಡಿತು. ಮುಂದೆ, ಕೆಂಪು ಸೈನ್ಯದ ಆರಂಭಿಕ ಕಾಲದ ತಾತ್ಕಾಲಿಕ ಹಿನ್ನಡೆಗೆ ಕಾರಣಗಳನ್ನು ಉಲ್ಲೇಖಿಸಿ, ಸ್ಟಾಲಿನ್, "ಕೆಂಪು ಸೈನ್ಯದ ಹಿನ್ನಡೆಗೆ ಒಂದು ಕಾರಣವೆಂದರೆ ಜರ್ಮನ್ ಫ್ಯಾಸೀವಾದಿ ಸೈನ್ಯದ ವಿರುದ್ಧ ಯುರೋಪ್‌ನಲ್ಲಿ ಎರಡನೇ ಮುಂದಳದ ಅನುಪಸ್ಥಿತಿ. ವಾಸ್ತವವೆಂದರೆ, ಪ್ರಸ್ತುತ ಸಮಯದಲ್ಲಿ ಜರ್ಮನ್ ಫ್ಯಾಸೀವಾದಿ ಸೈನ್ಯದ ವಿರುದ್ಧ ಹೋರಾಡಲು ಯುರೋಪಿಯನ್ ಖಂಡದಲ್ಲಿ ಗ್ರೇಟ್ ಬ್ರಿಟನ್ ಅಥವಾ ಅಮೆರಿಕದ ಯಾವುದೇ ಸೇನೆ ಲಭ್ಯವಿಲ್ಲ. ಇದರ ಪರಿಣಾಮವಾಗಿ, ಜರ್ಮನ್ನರ ಮೇಲೆ ತಮ್ಮ ಸೈನ್ಯವನ್ನು ವಿಭಜಿಸಲು ಹಾಗೂ ಪಶ್ಚಿಮ ಮತ್ತು ಪೂರ್ವದಲ್ಲಿ ಎರಡು ರಂಗಗಳಲ್ಲಿ ಏಕಕಾಲಕ್ಕೆ ಯುದ್ಧ 4ನೇ ಪುಟಕ್ಕೆ

# ಬಾಲ್ಯದಲ್ಲೇ ಮಕ್ಕಳಿಗೆ ಮಿಲಿಟರಿ ತರಬೇತಿ

## ಮಹಾರಾಷ್ಟ್ರ ಸರ್ಕಾರದ ಅಪಾಯಕಾರಿ ಯೋಜನೆ

ಬಿಜೆಪಿ ನೇತೃತ್ವದ ಮಹಾರಾಷ್ಟ್ರ ಸರ್ಕಾರವು ವಿದ್ಯಾರ್ಥಿಗಳಲ್ಲಿ ದೇಶಪ್ರೇಮ, ಶಿಸ್ತು ಮತ್ತು ದೈಹಿಕ ಕ್ಷಮತೆಯನ್ನು ಬೆಳೆಸುವ ಹೆಸರಿನಲ್ಲಿ ಆರು ವರ್ಷದ ಎಳೆಯ ವಯಸ್ಸಿನಲ್ಲೇ ಮಕ್ಕಳಿಗೆ ಮೂಲಭೂತ ಮಿಲಿಟರಿ ತರಬೇತಿಯನ್ನು ಜಾರಿಗೊಳಿಸಲು ಯೋಜನೆ ಮಾಡುತ್ತಿದೆ. ಒಂದನೇ ತರಗತಿಯಿಂದಲೇ ಅಂತಹ ತರಬೇತಿಯನ್ನು ಕೊಡುವುದರಿಂದ ಚಿಕ್ಕ ಮಕ್ಕಳಿಗೆ ರಚನಾತ್ಮಕ ತರಬೇತಿಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಲಾಗುತ್ತಿದೆ; ಈ ತರಬೇತಿಯು ದೈಹಿಕ ವ್ಯಾಯಾಮ, ಮೂಲಭೂತ ಕವಾಯತು ಮತ್ತು ಪಾಠಗಳನ್ನು ಒಳಗೊಂಡಿರುತ್ತದೆ. ಬಹಳ ಕಾಲದಿಂದಲೂ ಆರ್‌ಎಸ್‌ಎಸ್, ಕಲ್ಪಿತ ವೈರಿಯ ವಿರುದ್ಧ ಸಜ್ಜಾಗಿರುವಂತೆ 'ಹಿಂದೂ ಸಮಾಜವನ್ನು ಮಿಲಿಟರೀಕರಣ'ಗೊಳಿಸಬೇಕು ಎಂದು ಪ್ರತಿಪಾದಿಸುತ್ತಲೇ ಬಂದಿದೆ. ಒಂದು ಕಾಲದಲ್ಲಿ ಮುಕ್ತ ಚಿಂತನೆಯ ಜಾಗವಾಗಿದ್ದ ತರಗತಿಗಳಿಗೆ ಈಗ ಅಂತಹ ಸೈದ್ಧಾಂತಿಕ ಶಸ್ತ್ರಾಗಾರಗಳನ್ನು ಜೋಡಿಸಲಾಗುತ್ತಿದೆ.

ನಿಜ, 'ಆಪರೇಷನ್ ಸಿಂಧೂರ್' ಆದಮೇಲೆ ಇಂತಹ ಪ್ರಸ್ತಾಪಕ್ಕೆ ದೇಶದ ಬೇರೆ ಕಡೆಗಳಿಂದಲೂ ಸಾಕಷ್ಟು ಬೆಂಬಲ ಪಡೆಯಲು ಸಾಧ್ಯವಾಗುತ್ತದೆ. ಬಿಜೆಪಿ ನೇತೃತ್ವದ ರಾಜ್ಯಗಳು ಸ್ವಲ್ಪವೂ ವಿಳಂಬ ಮಾಡದೆ ಅಂತಹ ಯೋಜನೆಗಳನ್ನು ಜಾರಿಗೊಳಿಸಬಹುದು. ಈಗಾಗಲೇ ಸರ್ಕಾರದ ಶಿಕ್ಷಣ ವ್ಯವಸ್ಥೆಯು ಗಂಭೀರ ಸ್ಥಿತಿಯಲ್ಲಿದೆ; ಅತ್ಯಂತ ಹೀನಾಯ ಸ್ಥಿತಿಯಲ್ಲಿರುವ ಮೂಲಸೌಕರ್ಯಗಳು, ಶಿಕ್ಷಕರ ವಿಪರೀತ ಕೊರತೆ, ಶೌಚಾಲಯದಂತಹ ಮೂಲಭೂತ ಸೌಕರ್ಯಗಳ ಅಲಭ್ಯತೆ, ಕಡಿಮೆಯಿರುವ ಮತ್ತು ಶಿಥಿಲವಾಗುತ್ತಿರುವ ತರಗತಿಗಳು, ಪದೇಪದೇ ಬದಲಾಗುವ ಪಠ್ಯಕ್ರಮ, ಫೇಲು ಮಾಡಬಾರದ ನೀತಿ, ವಿದ್ಯಾರ್ಥಿಗಳ ಬೆಳವಣಿಗೆಯನ್ನು ವಾಸ್ತವಿಕವಾಗಿ ವಿಶ್ಲೇಷಿಸುವ ಪರೀಕ್ಷಾ ಪದ್ಧತಿಯ ಅಪಮೌಲ್ಯೀಕರಣ – ಪರಿಸ್ಥಿತಿ ಹೀಗಿರುವಾಗ ಮೇಲಿನ ಕ್ರಮವು ಬಿಕ್ಕಟ್ಟನ್ನು ಮತ್ತಷ್ಟು ಹೆಚ್ಚಿಸುತ್ತದೆ. ಏಕೆಂದರೆ ಈಗಾಗಲೇ ವಿರಳವಾಗಿರುವ ಮೂಲಭೂತ ಸೌಕರ್ಯ ಹಾಗೂ ವಿದ್ಯಾಭ್ಯಾಸಕ್ಕೆ ಎಂದು ಮೀಸಲಾದ ಸಮಯ – ಇವುಗಳ ಒಂದು ಭಾಗವು ಈ ಯೋಜನೆಗೆ ಹೋಗುತ್ತದೆ.

ಇದರ ಜೊತೆಗೆ, ಮೂಲಭೂತ ಸೌಕರ್ಯಗಳ ಕೊರತೆ, ಹಾಗೆಯೇ ಇನ್ನಿತರ ಬದಲಾದ ನೀತಿಗಳ ಕಾರಣಗಳಿಂದಾಗಿ, ಕಳೆದ ದಶಕದಿಂದ ಸಾವಿರಾರು ಸರ್ಕಾರಿ ಶಾಲೆಗಳನ್ನು ಮುಚ್ಚಲಾಗಿದೆ. ಇದು ಮಕ್ಕಳಿಗೆ ಸರಿಯಾದ ಶಿಕ್ಷಣ ಸಿಗುವುದನ್ನು ವಂಚಿಸುವುದರಿಂದ ಶಿಕ್ಷಣದ ಹಕ್ಕಿನ ಸ್ಪಷ್ಟ ಉಲ್ಲಂಘನೆಯಾಗಿದೆ. ಈಗಾಗಲೇ ಶಿಕ್ಷಣದ ವಾರ್ಷಿಕ ಸ್ಥಿತಿಗತಿಯ ವರದಿಯು (ASER), ಮಹಾರಾಷ್ಟ್ರದ ಶಾಲಾ ಶಿಕ್ಷಣದ ಕೆಟ್ಟ ಚಿತ್ರಣವನ್ನು ವರದಿ ಮಾಡಿದೆ. ಮೇಲಿನ ಪ್ರಸ್ತಾಪವು ಶಾಲಾ ಶಿಕ್ಷಣಕ್ಕೆ ತಗುಲಿರುವ ಮೂಲ ರೋಗವನ್ನು ಮುಚ್ಚಿಹಾಕುವ ಪ್ರಯತ್ನವೆನ್ನುವಂತೆ ಕಾಣುತ್ತದೆ. ಒಂದನೇ ತರಗತಿಯಿಂದಲೇ ವಿದ್ಯಾರ್ಥಿಗಳಿಗೆ ಮಿಲಿಟರಿ ಶೈಲಿಯ ಕವಾಯತುಗಳನ್ನು ಕಲಿಸಬೇಕೆನ್ನುವ ಸುಮಾರು 2,50,000 ಮಾಜಿ ಸೈನಿಕರ ಬೆಂಬಲ ಪಡೆದ ಈ ನಿರ್ಧಾರವು ಭಾರತದಲ್ಲಿ ಸಾರ್ವಜನಿಕ ಚರ್ಚೆಗೆ ಜೋರು ಶಬ್ದದೊಂದಿಗೆ ಬರದೇ ಕಳ್ಳ ಧ್ವನಿಯಲ್ಲಿ ಬರುತ್ತಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ. ಇದೊಂದು ಶಾಲಾ ವೇಳಾಪಟ್ಟಿಯಲ್ಲಿ ಮಾಡಿಕೊಳ್ಳುವ, ಸದುದ್ದೇಶದಿಂದ ಕೂಡಿದ ಹೊಂದಾಣಿಕೆಯಲ್ಲ. ಇದು ಶಿಕ್ಷಣಕ್ಕೆ ರಚನಾತ್ಮಕ ಮರು ರೂಪ ಕೊಡುವುದು; ಇದರರ್ಥ ಪ್ರಶ್ನಿಸುವ ಜಾಗದಲ್ಲಿ ವಿಧೇಯತೆಯನ್ನು, ಸ್ವಯಂಶಿಸ್ತಿನ ಜಾಗದಲ್ಲಿ ಯಾಂತ್ರಿಕ ಶರಣಾಗತಿಯನ್ನು ಮತ್ತು ಸಹಾನುಭೂತಿಯ ಜಾಗದಲ್ಲಿ ರಾಷ್ಟ್ರವಾದದ ನೆಪವೊಡ್ಡಿ ಬೇರೆಯವರನ್ನು ದ್ವೇಷಿಸುವುದನ್ನು ತಂದಿಡುವುದು. ಸುಲಭವಾಗಿ ಪ್ರಭಾವಿತವಾಗುವ ಈ ವಯಸ್ಸಿನಲ್ಲಿ ಇಂತಹ ವಿಚಾರಗಳು ದೀರ್ಘಕಾಲ ತಮ್ಮ ಪ್ರಭಾವವನ್ನು ಬೀರುತ್ತವೆ. ಈ ಯೋಜನೆಯು ಶಿಕ್ಷಣದ ಉದ್ದೇಶವನ್ನೇ ಸೋಲಿಸಿ ಬಿಡುತ್ತದೆ. ಇಲ್ಲಿ ಬಲ್ಬ್, ಫೋನೋ ಗ್ರಾಫ್ ಮತ್ತು ಚಲನಚಿತ್ರ ಕ್ಯಾಮರಾ ಕಂಡುಹಿಡಿದ ವಿಶ್ವವಿಖ್ಯಾತ ಥಾಮಸ್ ಅಲ್ವಾ ಎಡಿಸನ್ ಹೇಳಿದ ಮಾತುಗಳನ್ನು ಉಲ್ಲೇಖಿಸುವುದು ಸೂಕ್ತವಾಗುತ್ತದೆ: "ನಾಗರಿಕತೆ ಮಾಡಬೇಕಾದ ಅತ್ಯಂತ ಅಗತ್ಯವಾದ ಕೆಲಸವೆಂದರೆ, ಜನರಿಗೆ ಹೇಗೆ ಆಲೋಚನೆ ಮಾಡಬೇಕೆಂದು ಹೇಳಿಕೊಡುವುದು. ಇದು ನಮ್ಮ ಸಾರ್ವಜನಿಕ ಶಾಲೆಗಳ ಮೂಲ ಉದ್ದೇಶವಾಗಬೇಕು... ನಮ್ಮ ಶಿಕ್ಷಣ ಪದ್ಧತಿಯಲ್ಲಿರುವ ಸಮಸ್ಯೆ ಎಂದರೆ ಅದು ಬದಲಾವಣೆಗೆ ಒಗ್ಗುವ ಮನಸ್ಥಿತಿಯನ್ನು ಕೊಡುವುದಿಲ್ಲ. ಅದು ಮೆದುಳನ್ನು ಒಂದು ಅಚ್ಚಿಗೆ ಹಾಕುತ್ತದೆ. ಅದನ್ನು ಮಗು ಒಪ್ಪಿಕೊಳ್ಳಲೇಬೇಕೆಂದು ಒತ್ತಾಯಿಸುತ್ತದೆ. ಅದು ಮೂಲ ಚಿಂತನೆ ಅಥವಾ ವಿವೇಚನೆಗೆ ಪ್ರೋತ್ಸಾಹ ಕೊಡುವುದಿಲ್ಲ ಮತ್ತು ಲಕ್ಷ್ಯಕ್ಕಿಂತ ಹೆಚ್ಚಾಗಿ ನೆನಪಿನ ಶಕ್ತಿಗೆ ಒತ್ತು ಕೊಡುತ್ತದೆ."

ಅಂದರೆ, ಪರೇಡ್‌ಗಳಲ್ಲಿ ಹೆಜ್ಜೆ ಹಾಕುವ ಮತ್ತು ಸಲ್ಯೂಟ್ ಹೊಡೆಯುವ ಸೈನಿಕರನ್ನು ಅಥವಾ ವಿಧೇಯ ಜನರನ್ನು ತಯಾರು ಮಾಡುವುದು ಶಿಕ್ಷಣದ ಉದ್ದೇಶವಲ್ಲ; ಅದಕ್ಕೆ ತಿಳುವಳಿಕೆಯುಳ್ಳ, ಹುಡುಕಾಟದ ಮನಸ್ಸಿನ ಮತ್ತು ವಿರೋಧಿಸಬಲ್ಲ ನಾಗರೀಕರನ್ನು ತಯಾರು ಮಾಡುವ ಕರ್ತವ್ಯವಿದೆ. ಇಲ್ಲವಾದರೆ ಅದೊಂದು ಶಿಕ್ಷಣವಲ್ಲ. ಬದಲಿಗೆ, ರಹಸ್ಯವಾಗಿ ತಮಗೆ ಬೇಕಾದ ಸಿದ್ಧಾಂತವೊಂದನ್ನು ತಲೆಗೆ ತುರುಕಿದಂತೆ ಆಗುತ್ತದೆ.

ಬಹಳ ಎಳೆಯ ವಯಸ್ಸಿನಲ್ಲಿಯೇ ಮಕ್ಕಳಿಗೆ ಮಿಲಿಟರಿ ಶಿಸ್ತನ್ನು ಹೇರುವ ವಿಚಾರಕ್ಕೆ ನಿಜವಾದ ಶಿಕ್ಷಣಕ್ಕೆ ವಿರುದ್ಧವಾಗಿರುವ ಉದ್ದೇಶವಿದೆ. ಅದು ಸೃಜನಶೀಲತೆಯನ್ನು ಹೊಸಕಿ ಹಾಕುವುದಷ್ಟೇ ಅಲ್ಲದೇ, ರವೀಂದ್ರನಾಥ ಟಾಗೂರರು "ಜನರ ಚಿಂತನೆಯನ್ನು ಮೊಟಕುಗೊಳಿಸುವ, ಅವರ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕುವ ಸರ್ಕಾರಕ್ಕೆ ಜನರೆಲ್ಲರೂ ಸ್ವಯಿಚ್ಛೆಯಿಂದ ತಲೆಬಾಗುವುದು" ಎಂದು ಯಾವ ಅಪಾಯದ ಬಗ್ಗೆ ಎಚ್ಚರಿಕೆ ಕೊಟ್ಟಿದ್ದರೋ ಅಲ್ಲಿಗೆ ನಿಧಾನವಾಗಿ ತೆಗೆದುಕೊಂಡು ಹೋಗುತ್ತದೆ. ಆರನೇ ವಯಸ್ಸಿನಲ್ಲಿ ಮಕ್ಕಳು ಕಥೆ, ಹಾಡು ಮತ್ತು ನಾಟಕಗಳ ಮೂಲಕ ಚೆನ್ನಾಗಿ ಕಲಿಯುತ್ತವೆ. ಆದರೆ ಮಹಾರಾಷ್ಟ್ರದ ಪ್ರಸ್ತಾಪವು ಶಾಲೆಗಳನ್ನು ಮಕ್ಕಳು ಪಥ ಸಂಚಲನ, ಸೆಲ್ಯೂಟ್ ಮಾಡುವುದಕ್ಕೆ ಮತ್ತು ಆದೇಶಗಳನ್ನು ಅನುಸರಿಸುವುದಕ್ಕೆ ತರಬೇತಿ ಕೊಡುವ ಪರೇಡ್ ಮೈದಾನವನ್ನಾಗಿ ಪರಿವರ್ತಿಸುತ್ತದೆ.

ಅದು ಅಜ್ಞಾತ ವೈರಿಯ ವಿರುದ್ಧ ಮಕ್ಕಳ ಮನಸ್ಸಿನಲ್ಲಿ ಅನಗತ್ಯ ಭಯವನ್ನು ಸೃಷ್ಟಿಸುತ್ತದೆ; ಜೊತೆಗೆ ಸುಲಭವಾಗಿ ಪ್ರಭಾವಿತವಾಗುವ ಮನಸ್ಸುಗಳನ್ನು ಮತ್ತಷ್ಟು ಕುಗ್ಗಿಸುತ್ತದೆ ಮತ್ತು ವಿವಿಧ ಬಗೆಯ ಮಾನಸಿಕ ಸಮಸ್ಯೆಗಳಲ್ಲಿ ಅಂತ್ಯವಾಗುತ್ತದೆ. ಈ ಹಂತದಲ್ಲಿ ಮಿಲಿಟರಿ ವಿಧಾನಗಳನ್ನು ವೈಭವೀಕರಿಸುವುದೆಂದರೆ, ಅದು ಇರುವುದು ವಿಧೇಯತೆಯಲ್ಲಿಯೇ ಹೊರತು ಹೊರತು ಕಲ್ಪನೆಯಲ್ಲಲ್ಲ ಮತ್ತು ಪೌರತ್ವವು ಅನುಸರಣೆಯಿಂದ ಆರಂಭವಾಗುತ್ತದೆಯೇ ಹೊರತು ಸಹಾನುಭೂತಿಯಿಂದಲ್ಲ ಎನ್ನುವುದನ್ನು ಸೂಚಿಸುತ್ತದೆ. ಮಕ್ಕಳಿಗೆ ಓದುವ ಮೊದಲೇ ಸಲ್ಯೂಟ್ ಮಾಡುವುದನ್ನು ಕಲಿಸುವುದೆಂದರೆ, ಬಂಡವಾಳಶಾಹಿ–ಸಾಮ್ರಾಜ್ಯಶಾಹಿ ಪ್ರಭುತ್ವವು ದೇಶಪ್ರೇಮವನ್ನು ಮೂಡಿಸುವುದೆಂದಲ್ಲ – ಅದು ತನ್ನ ಆದೇಶಗಳಿಗೆ ವಿಧೇಯವಾಗಿರುವ ಭವಿಷ್ಯದ ಪದಾತಿ ಸೈನಿಕರನ್ನು ತಯಾರು ಮಾಡುತ್ತಿದೆ ಎಂದರ್ಥ. ವೈಚಾರಿಕ ಮನೋಭಾವ ಮತ್ತು ಧರ್ಮನಿರಪೇಕ್ಷ, ವೈಜ್ಞಾನಿಕ, ಪ್ರಜಾತಾಂತ್ರಿಕ ಶಿಕ್ಷಣವನ್ನು ಕೊಡುವ ಬಯಕೆಗೆ ವಿರುದ್ಧವಾಗಿ ರಾಷ್ಟ್ರಾಂಧಾಭಿಮಾನದ ಮಾರ್ಗದಲ್ಲಿ ಕರೆದೊಯ್ಯುವ ಜೊತೆಗೆ ಮಕ್ಕಳ ಆಲೋಚನಾ ಪ್ರಕ್ರಿಯೆಯನ್ನು ಒಂದು ಅಚ್ಚಿಗೆ ಹಾಕುವುದರ ಹಿಂದೆ ಸೈದ್ಧಾಂತಿಕ ಪಲ್ಲಟವಿದೆ. ಇದರೊಳಗೆ ಭಾರತದಲ್ಲಿ ಶಿಕ್ಷಣ, ಬಾಲ್ಯ ಮತ್ತು ಪೌರತ್ವವನ್ನು ಮರು ವ್ಯಾಖ್ಯಾನ ಮಾಡುವ ಸೈದ್ಧಾಂತಿಕ ಪಲ್ಲಟವಿದೆ. ಇದು ಶೈಕ್ಷಣಿಕ ನೀತಿಯಲ್ಲಿನ ಕೇವಲ ತಪ್ಪು ಹೆಜ್ಜೆಯಲ್ಲ, ಅದಕ್ಕಿಂತಲೂ ಹೆಚ್ಚಿನದು.

ಇಲ್ಲಿ ಗಮನಿಸಿರುವ ಮತ್ತೊಂದು ಅಂಶವೇನೆಂದರೆ, ಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಅಂತಹ ಗುಣಾತ್ಮಕವಾದ ದೊಡ್ಡ ಹೆಜ್ಜೆಯನ್ನಿಡುವ ಮೊದಲು ಮಹಾರಾಷ್ಟ್ರ ಸರ್ಕಾರವು ಸಮಾಜದಲ್ಲಿ ಅದರ ಬಗ್ಗೆ ವಿಶಾಲವಾದ ಚರ್ಚೆಗೆ ಅನುವು ಮಾಡಿಕೊಡಲಿಲ್ಲ; ಅಂತಹ ಕ್ರಮದ ಸಾಧಕ ಬಾಧಕಗಳನ್ನು ನೋಡಲಿಲ್ಲ. ಈ ಯೋಜನೆಯು ಕಾರ್ಯಸಾಧುವೇ ಎನ್ನುವುದರ ಬಗ್ಗೆ ಶಿಕ್ಷಣ ತಜ್ಞರಿಂದ ಸಲಹೆ ಮತ್ತು ಅಭಿಪ್ರಾಯಗಳನ್ನು ಪಡೆದು ನಂತರ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳುವ ರೀತಿಯನ್ನು ಅನುಸರಿಸಲಿಲ್ಲ.

ಸಾರ್ವಜನಿಕ ವಲಯದಲ್ಲಿ ಅಂತಹ ಯಾವುದೇ ಚರ್ಚೆ ಅಥವಾ ವಿಶಾಲ ಮಟ್ಟದಲ್ಲಿ ಮಾತುಕತೆಗಳು ನಡೆದ ಸುದ್ದಿ ಇಲ್ಲ. ಕೆಲವು ವರ್ಷಗಳ ಹಿಂದೆ ಪ್ರಧಾನಮಂತ್ರಿಯ ಕಛೇರಿಯು 'ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆ'ಗಾಗಿ ಕೇಂದ್ರೀಯ ವಿದ್ಯಾಲಯಗಳು ಮತ್ತು ಜವಾಹರ್ ನವೋದಯ ವಿದ್ಯಾಶಾಲೆಗಳು ಸೇರಿದಂತೆ ಇನ್ನಿತರ ಶಾಲೆಗಳಲ್ಲೂ, ಸೈನಿಕ್ ಶಾಲೆ ಮಾದರಿಯ ಅಂಶಗಳನ್ನು ಸೇರಿಸಿಕೊಳ್ಳಬೇಕೆಂದು ತನ್ನ ಮುನ್ನೋಟವನ್ನು ಪ್ರಸ್ತಾಪಿಸಿತ್ತು; ಈ ಯೋಜನೆಯು ಅದೇ ಮುನ್ನೋಟದ ವಿಸ್ತರಣೆ ಮತ್ತು ಅನುಷ್ಠಾನವೆಂದು ಕಾಣಿಸುತ್ತದೆ.

ಅದು ಸೈನಿಕ್ ಶಾಲೆಗಳಲ್ಲಿ ಸಾಮಾನ್ಯವಾಗಿ ಇರುವ ದೈಹಿಕ ತರಬೇತಿ, ಶಿಸ್ತು ಮತ್ತು ದೇಶಪ್ರೇಮದ ಮೌಲ್ಯಗಳನ್ನು ಬೇರೆ ಶಾಲೆಗಳಲ್ಲೂ ತರಬೇಕು ಎಂದು ಸಲಹೆ ನೀಡಿದೆ. ಇದು ವಾಸ್ತವದಲ್ಲಿ ಶೇ.67 ಕ್ಕೂ ಹೆಚ್ಚು ಸೈನಿಕ್ ಶಾಲೆಗಳನ್ನು ಆರ್‌ಎಸ್‌ಎಸ್–ಬಿಜೆಪಿ–ಸಂಘ ಪರಿವಾರ ಮತ್ತು ಅದರ ಅಂಗಸಂಸ್ಥೆಗಳ ಸುಪರ್ದಿಗೆ ಕೊಡಬೇಕೆನ್ನುವ ಕೇಂದ್ರ ಸರ್ಕಾರದ ಯೋಜನೆಯನ್ನು ಅನುಷ್ಠಾನಗೊಳಿಸುವ ಕಡೆಗೆ ಇಟ್ಟ ಇನ್ನೊಂದು ಹೆಜ್ಜೆ. ಇಲ್ಲೊಂದು ಘಟನೆಯನ್ನು ನೆನಪಿಸಿಕೊಳ್ಳಬೇಕು; ಜವಾಹರಲಾಲ್ ವಿಶ್ವವಿದ್ಯಾನಿಲಯದ (ಜೆಎನ್‌ಯು) ಉಪಕುಲಪತಿಗಳು 'ಕಾರ್ಗಿಲ್ ದಿವಸ' ಆಚರಣೆಯ ಸಂದರ್ಭದಲ್ಲಿ ಒಂದು ರಾಜಕೀಯ ಕಾರ್ಯಕ್ರಮವನ್ನು ಸಂಘಟಿಸಿದ್ದರು: ಅಲ್ಲಿ ಉಪಸ್ಥಿತರಿದ್ದ ಇಬ್ಬರು ಕೇಂದ್ರ ಸಚಿವರನ್ನು, ವಿದ್ಯಾರ್ಥಿಗಳಲ್ಲಿ ಸೈನ್ಯದ ಬಗ್ಗೆ ಪ್ರೀತಿಯನ್ನು ತುಂಬಲು ಸೈನ್ಯವು ಉಪಯೋಗಿಸದ ಸೈನ್ಯದ ಟ್ಯಾಂಕರ್ ಒಂದನ್ನು ವಿಶ್ವವಿದ್ಯಾನಿಲಯಕ್ಕೆ ಕೊಡುಗೆಯಾಗಿ ಕೊಡಬೇಕೆಂದು ಕೇಳಿದರು. ಜೆಎನ್‌ಯುನಲ್ಲಿ ಸೈನ್ಯದ ಟ್ಯಾಂಕರ್ ಸ್ಥಾಪಿಸುವ ಈ ವಿವಾದಿತ ಪ್ರಸ್ತಾಪಕ್ಕೆ ವಿದ್ಯಾರ್ಥಿಗಳು, ಶಿಕ್ಷಣ ತಜ್ಞರು, ಹಾಗೆ ಕಾಳಜಿಯುಳ್ಳ ವಿಶಾಲ ಜನ ಸಮೂಹದಿಂದ ತೀವ್ರ ಖಂಡನೆ ಬಂದಿತ್ತು.

ನಾವು ಶಿಕ್ಷಣದ ಉದ್ದೇಶದಲ್ಲಿ ಸ್ಫೋಟಕ ಪಲ್ಲಟಕ್ಕೆ ಸಾಕ್ಷಿಯಾಗುತ್ತಿದ್ದೇವೆ. ಒಂದು ಕಾಲದಲ್ಲಿ ಸ್ವಾತಂತ್ರ್ಯ, ಕುತೂಹಲ ಮತ್ತು ವಿಮರ್ಶಾತ್ಮಕ ಚಿಂತನೆಗಳಿಗಾಗಿ ನಿಂತ ಶಿಕ್ಷಣವು ಈಗ ಕಡ್ಡಾಯ ರಾಷ್ಟ್ರ ನಿರ್ಮಾಣದೆಡೆಗೆ ಸಾಗುತ್ತಿದೆ. ಜ್ಞಾನದ ಹೆಸರಿನಲ್ಲಿ ಮಾನಸಿಕ ಅಂಧಾನುಕ್ರಮವೆಂದರೆ (Mental Regimentation) ಯಾವುದರ ಬಗ್ಗೆಯೂ ಪ್ರಶ್ನೆಯನ್ನು ಕೇಳಬಾರದು, ಬದಲಿಗೆ ಪ್ರಭುತ್ವ ಮಾನ್ಯತೆ ನೀಡಿದ ಉತ್ತರಗಳನ್ನು ಕಂಠಪಾಠ ಮಾಡುವುದು. ಅನ್ಯಾಯವನ್ನು ಪ್ರಶ್ನಿಸುವ ವಿದ್ಯಾರ್ಥಿಯು ಅಪಾಯಕಾರಿಯಾಗುತ್ತಾನೆ. ಭಿನ್ನ ಅಭಿಪ್ರಾಯ ಹೊಂದಿದ ಶಿಕ್ಷಕರು ಕಣ್ಮರೆಯಾಗುವ ಅಪಾಯವಿದೆ. ಯುವ ಮನಸ್ಸುಗಳನ್ನು ಮಿಲಿಟರೀಕರಣಗೊಳಿಸುವುದೆಂದರೆ ನಿರೂಪಣೆಗಳು ಮಾತ್ರ ಉಳಿದುಕೊಳ್ಳುವ ಮತ್ತು ಬೇರೆಲ್ಲವೂ ದೇಶದ್ರೋಹವಾಗುವ ವ್ಯವಸ್ಥೆಯ ಕಾವಲುಗಾರನಾಗುವುದು.

ಈ ಹೆಜ್ಜೆಯನ್ನು ಪ್ರಶ್ನಿಸದಿದ್ದರೆ ಇದರ ಪರಿಣಾಮವು ಮಹಾರಾಷ್ಟ್ರದಿಂದಾಚೆಗೂ ವಿಸ್ತರಿಸುತ್ತದೆ. ಕೇಸರಿ ಪಡೆಯು ಸೂಚಿಸಿದ ವಿಜ್ಞಾನ ವಿರೋಧಿ, ಇತಿಹಾಸ ವಿರೋಧಿ ವಿಷಯಗಳ ಮೇಲಾಧಾರಿತವಾಗಿರುವ ಪಠ್ಯಕ್ರಮಗಳನ್ನು ತಯಾರು ಮಾಡುವುದರ ಮೂಲಕ, ಪ್ರಾಥಮಿಕ ಶಾಲಾ ಹಂತದಿಂದಲೇ ವಿದ್ಯಾರ್ಥಿಗಳ ಚಿಂತನಾ ಪ್ರಕ್ರಿಯೆಯನ್ನು ಅಂಧಾನುಕ್ರಮಕ್ಕೆ ಒಗ್ಗಿಸುವ ಪ್ರಯತ್ನವು ಈಗಾಗಲೇ ರಾಷ್ಟ್ರೀಯ ಶಿಕ್ಷಣ ನೀತಿ–20 ಅನ್ನು ಅನುಷ್ಠಾನಕ್ಕೆ ತರುವ ಮೂಲಕ ನಡೆಯುತ್ತಿದೆ. ಎಲ್ಲದಕ್ಕಿಂತಲೂ ಹೆಚ್ಚಾಗಿ, ಶಾಲಾ ಶಿಕ್ಷಣದ ಆರಂಭದಿಂದಲೇ ಮಿಲಿಟರಿ ತರಬೇತಿಯನ್ನು ಕಡ್ಡಾಯವೆಂದು ಸೇರಿಸಿದರೆ ಆಗ ಅಂಧಾನುಕ್ರಮದ ಪ್ರಕ್ರಿಯೆಯು ತೀವ್ರಗೊಳ್ಳುತ್ತದೆ; ಮಕ್ಕಳನ್ನು ಯಾಂತ್ರಿಕ ಚಿಂತನಾ ಪ್ರಕ್ರಿಯೆಯು ಆವರಿಸಿಕೊಳ್ಳುತ್ತದೆ ಮತ್ತು ತಮ್ಮ ಬಂಡವಾಳಶಾಹಿ ಮಾಲೀಕರ ಅಜ್ಞಾನಸಾರವಾಗಿ ಹಿಂದುತ್ವ ಆಳ್ವಿಕರಿಂದ ಆರಂಭಗೊಂಡ ಯಾಂತ್ರೀಕರಣದ ಪ್ರಕ್ರಿಯೆಯು ಸಂಪೂರ್ಣವಾಗುತ್ತದೆ. ಅದು ಪರಿಪೂರ್ಣ ವ್ಯಕ್ತಿತ್ವದ, ಜ್ಞಾನಭರಿತ, ಸುಚಿಂತನಾಶೀಲ ವ್ಯಕ್ತಿಯನ್ನು ರೂಪಿಸುವುದಿಲ್ಲ. ಇದು ಶಾಲಾ ಮಕ್ಕಳಿಗೆ ಮಿಲಿಟರಿ ಶಿಕ್ಷಣ ನೀಡುವುದರ ಹಿಂದಿರುವ ಅಪಾಯ!

'ಕಾರ್ಮಿಕ ದೃಷ್ಟಿಕೋನ – ಮಾಸಿಕ ಪತ್ರಿಕೆ'ಯನ್ನು ವಾಟ್ಸಾಪ್ ಚಾನೆಲ್‌ನಲ್ಲಿ ಓದಲು ಈ ಮೇಲಿನ QR ಕೋಡ್ ಅನ್ನು ಬಳಸಿ.

## ಗಾಜಾದಲ್ಲಿ ಯುದ್ಧ ವಿರಾಮದ ಕುರಿತು ಡೊನಾಲ್ಡ್ ಟ್ರಂಪ್ 'ಶಾಂತಿ ಪ್ರಸ್ತಾಪ' ಖಂಡಿಸಿ!

### ಎಸ್‌ಯುಸಿಐ(ಸಿ) ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ ಅವರು ಈ ಹೇಳಿಕೆ ನೀಡಿದ್ದಾರೆ:

"ಪಶ್ಚಿಮ ಏಷ್ಯಾದಲ್ಲಿ ಯುದ್ಧವನ್ನು ನಿಲ್ಲಿಸುವ ಹೆಸರಿನಲ್ಲಿ, ವಿಶೇಷವಾಗಿ ಗಾಜಾದಲ್ಲಿ ಪ್ಯಾಲೆಸ್ಟೀನಿಯರ ಮೇಲೆ ಇಸ್ರೇಲ್‌ನ ಆಕ್ರಮಣವನ್ನು ನಿಲ್ಲಿಸುವ ಹೆಸರಿನಲ್ಲಿ, ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 'ಶಾಂತಿ ಯೋಜನೆ'ಯನ್ನು ಪ್ರಸ್ತಾಪಿಸಿದ್ದಾರೆ. ಇದು ವಸಾಹತುಶಾಹಿ ಮಾದರಿಯ ರಚನೆಯಾಗಿದ್ದು, ಇದರಲ್ಲಿ ಪ್ಯಾಲೆಸ್ಟೀನಿಯರು ಯುಎಸ್–ಇಸ್ರೇಲ್ ಆಳ್ವಿಕರ ಶಾಶ್ವತ ಕೈದಿಗಳಾಗಿ ಉಳಿಯುತ್ತಾರೆ. ಇದು ತಕ್ಷಣವೇ ತಿರಸ್ಕರಿಸಬೇಕಾದ ಅಪಾಯಕಾರಿ ಪ್ರಸ್ತಾಪವಾಗಿದೆ.

ಜಾಗತಿಕ ಸಾರ್ವಜನಿಕ ಅಭಿಪ್ರಾಯವು ತಕ್ಷಣದ ಕದನ ವಿರಾಮ ಮತ್ತು ಪ್ಯಾಲೆಸ್ಟೀನ್ ಪ್ರಭುತ್ವದ ಮಾನ್ಯತೆಯನ್ನು ಒತ್ತಾಯಿಸುತ್ತಿರುವಾಗ, ಟ್ರಂಪ್‌ನ ಇಂತಹ ಪ್ರಸ್ತಾಪವು ನಿಜವಾದ ಸಾಮ್ರಾಜ್ಯಶಾಹಿ ಉದ್ದೇಶ ಮತ್ತು ಪಿತೂರಿಯನ್ನು ಬಯಲಿಗೆಳೆಯುತ್ತದೆ."

# ಅಮೆರಿಕಾದ ಮನೆಬಾಗಿಲಿಗೇ ಬಂದ ಟ್ರಂಪ್ ಯುದ್ಧ

ಯುದ್ಧ ಭೂಮಿಯಲ್ಲಿ ಶತ್ರು ದೇಶಗಳೊಂದಿಗೆ ಹೋರಾಡಬೇಕಿದ್ದ ಅಮೆರಿಕದ ಸೇನಾಪಡೆಯ ತುಕಡಿಗಳು ಕಳೆದ ಜೂನ್ 10ರಂದು ಲಾಸ್ ಏಂಜೆಲಿಸ್‌ನ ಬೀದಿಗಳಲ್ಲಿ ಬೂಟುಗಾಲಿನ ಸಪ್ಪಳ ಮಾಡಿ ತನ್ನದೇ ದೇಶದ ನಾಗರಿಕರನ್ನು ಗುರಿ ಮಾಡಿದವು.

ಅಮೆರಿಕದ ಇತಿಹಾಸದಲ್ಲಿ ತನ್ನದೇ ನಾಗರಿಕರ ಹಕ್ಕುಗಳನ್ನು ದಮನ ಮಾಡುವ ಕೃತ್ಯ ಹಿಂದೆಂದೂ ನಡೆದಿರಲಿಲ್ಲ. ಅಮೆರಿಕದ ಸಾಮ್ರಾಜ್ಯಶಾಹಿ ಶಕ್ತಿಗಳು ಹಾಗೂ ಬಹುರಾಷ್ಟ್ರೀಯ ಕಂಪನಿಗಳ ನಂಬಿಗಸ್ಥ ಬಂಟ ಡೊನಾಲ್ಡ್ ಟ್ರಂಪ್ ತನ್ನ ದೇಶದ ಪ್ರಜೆಗಳು ಹಕ್ಕುಗಳಿಗಾಗಿ ಉಸಿರೆತ್ತದಂತೆ ಮಾಡಲು ಮಿಲಿಟರಿಯ ಗುಮ್ಮವನ್ನು ತೋರಿಸಿದ ಬಗೆ ಇದು. ಈ ಯೋಧರು ಬಂದಿದ್ದು ಸಾರ್ವಜನಿಕರ ರಕ್ಷಣೆಯನ್ನು ಖಾತ್ರಿಪಡಿಸುವುದಕ್ಕಾಗಿ ಅಲ್ಲ. ಬದಲಾಗಿ ದೇಶದ್ರೋಹದ ಚಟುವಟಿಕೆಯನ್ನು ನಿಗ್ರಹಿಸುವ ಹೆಸರಿನಲ್ಲಿ ಟ್ರಂಪ್ ಆಡಳಿತದ ವಿರುದ್ಧ ಸಾರ್ವಜನಿಕರ ಭಿನ್ನ ಧ್ವನಿಯನ್ನು ಹತ್ತಿಕ್ಕಲು.

ಅಂದು ನಡೆದಿದ್ದು ಸಹಜ ಸೇನಾ ಕವಾಯತು ಪ್ರದರ್ಶನವೇನಲ್ಲ. ಬದಲಾಗಿ ನಿರ್ಲಜ್ಜವಾಗಿ ಸಾಮ್ರಾಜ್ಯಶಾಹಿ ಶಕ್ತಿಗಳ ಸೇವೆಗಾಗಿ ಟೊಂಕ ಕಟ್ಟಿ ನಿಂತ ಪ್ರಭುತ್ವವು ತಮ್ಮ ಪ್ರಜಾತಾಂತ್ರಿಕ ಹಕ್ಕುಗಳು ದಮನವಾಗುತ್ತಿರುವುದನ್ನು ಪ್ರತಿಭಟಿಸಲು ನಿಂತ ಪ್ರಜೆಗಳನ್ನು ಬೆದರಿಸಲು ಈ ಮಿಲಿಟರಿ ಶಕ್ತಿಯನ್ನು ಬಳಸಿಕೊಂಡಿತು. ಅಮೆರಿಕದ ವಲಸೆ ಮತ್ತು ಕಸ್ಟಮ್ಸ್ ಜಾರಿ ವಿಭಾಗದ (ಐಸಿಇ) ಅಧಿಕಾರಿಗಳು ಲ್ಯಾಟಿನ್ ಅಮೆರಿಕಾದ ಜನರು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶಗಳಿಗೆ ಭೇಟಿ ನೀಡಿ ಅವರನ್ನು ದೇಶದಿಂದ ಹೊರಹೋಗುವಂತೆ ಸೂಚಿಸಿದ ಪರಿಣಾಮ ಜೂನ್ ತಿಂಗಳಲ್ಲಿ ಅಲ್ಲಲ್ಲಿ ಪ್ರತಿಭಟನೆಗಳು ಭುಗಿಲೆದ್ದವು. ಎರಡನೇ ಬಾರಿ ಶ್ವೇತಭವನಕ್ಕೆ ಮರಳಿದ್ದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ದೇಶದಲ್ಲಿ ನೆಲೆಸಿರುವ ಅಕ್ರಮ ವಲಸಿಗರನ್ನು ಹೊರಹಾಕುವುದಾಗಿ ಘೋಷಿಸಿದ ಬಳಿಕ ಈ ಕಾರ್ಯಾಚರಣೆ ನಡೆಯಿತು.

### ಅಮೆರಿಕಾ ಪ್ರಭುತ್ವದ ಭೂಪಟ ಮರು ರಚಿಸಿದ ಯುದ್ಧ ಟ್ಯಾಂಕ್‌ಗಳು

ಅಮೆರಿಕದ ಇತಿಹಾಸದಲ್ಲಿ ಎಷ್ಟೋ ಆಂತರಿಕ ದಂಗೆಗಳು ನಡೆದಾಗಲೂ ಆ ದೇಶದ ಮಿಲಿಟರಿ ಪಡೆಗಳಾದ ಯುಎಸ್ ಮರೀನ್ಸ್ ಮತ್ತು ನ್ಯಾಶನಲ್ ಗಾರ್ಡ್‌ಗಳು ದೇಶದ ಗಡಿಯನ್ನು ಬಿಟ್ಟು ದೇಶದ ಜನವಸತಿಯ ನಗರಗಳ ಬೀದಿಗಳಿಗೆ ಬಂದಿರಲಿಲ್ಲ. ಅಕ್ರಮ ವಲಸಿಗರ ಮೇಲೆ ಕ್ರಮ ಕೈಗೊಳ್ಳುವ ನಿರ್ಧಾರ ಹೊರಬಿದ್ದ ಬಳಿಕ ದೇಶದಾದ್ಯಂತ ಪ್ರತಿಭಟನೆಗಳು ಭುಗಿಲೆದ್ದವು. 'ರಾಷ್ಟ್ರೀಯ ಸಾರ್ವಭೌಮತ್ವವನ್ನು' ರಕ್ಷಿಸುವ ಮತ್ತು 'ವಿದೇಶಿಯರ ಕಾನೂನುಬಾಹಿರ ಕೃತ್ಯ'ಗಳನ್ನು ಮಟ್ಟಹಾಕುವ ನೆಪವೊಡ್ಡಿ ಇವುಗಳನ್ನು ಮಿಲಿಟರಿ ಪಡೆ ಬಳಸಿ ಅತ್ಯಂತ ನಿರ್ದಯವಾಗಿ ಹತ್ತಿಕ್ಕಲಾಯಿತು. ಜನರ ಪ್ರಜಾತಾಂತ್ರಿಕ ಅಭಿವ್ಯಕ್ತಿಯನ್ನು ಹೊಸಕಿಹಾಕಲು ಮಿಲಿಟರಿ ಶಕ್ತಿಯನ್ನು ಬಳಸಿಕೊಳ್ಳುವ ಮೂಲಕ ಪ್ರಭುತ್ವದ ಇನ್ನೊಂದು ಮುಖದ ನಗ್ನ ಪ್ರದರ್ಶನವೇ ಈ ಘಟನೆ ಆದಂತಾಯಿತು.

ಲಾಸ್ ಏಂಜೆಲಿಸ್‌ನ ವಿವಿಧ ಪ್ರತಿಭಟನಾ ಸ್ಥಳಗಳಲ್ಲಿ 4 ಸಾವಿರ ಕ್ಯಾಲಿಫೋರ್ನಿಯಾ ನ್ಯಾಶನಲ್ ಗಾರ್ಡ್‌ಗಳನ್ನು ಮತ್ತು 700 ನೌಕಾ ಪಡೆಗಳನ್ನು ನಿಯೋಜಿಸಲಾಗಿತ್ತು. ತಾನು ಒಕ್ಕೂಟದ ಆಸ್ತಿಗಳನ್ನು ರಕ್ಷಿಸಲು ನಿಂತಿರುವುದಾಗಿ ಸೇನೆ ಹೇಳಿಕೊಂಡಿತ್ತು. ಆದರೆ, ವಾಸ್ತವವಾಗಿ ಅದರ ಉದ್ದೇಶ, ತನ್ನ ಸೇನಾ ಶಕ್ತಿಯನ್ನು ತೋರಿಸುವುದರ ಜೊತೆಗೆ ನ್ಯಾಯಯುತವಾದ ಹಕ್ಕುಗಳಿಗೆ ಹೋರಾಟ ನಡೆಸುತ್ತಿದ್ದವರ ಧ್ವನಿಗಳನ್ನು ಹತ್ತಿಕ್ಕುವುದೇ ಆಗಿತ್ತು. ಹಲವೆಡೆ ಕರ್ಫ್ಯೂಗಳನ್ನು ವಿಧಿಸಲಾಗಿತ್ತು. ಸಾವಿರಾರು ಜನರನ್ನು ಬಂಧಿಸಲಾಯಿತು. ಲ್ಯಾಟಿನ್ ಅಮೆರಿಕಾ ಸಮುದಾಯಗಳು ವಾಸಿಸುವ ನೆಲೆಗಳ ಮೇಲೆ ದಾಳಿ ನಡೆಸಲು ಸಜ್ಜಾಗಿದ್ದ ಐಸಿಇ ಗುಪ್ತಚರ ಏಜೆಂಟರೊಂದಿಗೆ ಕಾಣಿಸಿಕೊಂಡಿದ್ದ ಪಡೆಗಳು ಪ್ರತಿರೋಧವನ್ನು ಬಂದೂಕಿನ ನಳಿಕೆಯ ಮೂಲಕ ಹತ್ತಿಕ್ಕಲಾಗುವುದು ಎಂಬ ಒಂದೇ ಸಂದೇಶವನ್ನು ನೀಡುತ್ತಿದ್ದವು.

ಅಮೆರಿಕದ ಟ್ರಂಪ್ ನೇತೃತ್ವದ ಫ್ಯಾಸಿಸ್ಟ್ ಸರ್ಕಾರ ತಾನು ಕ್ರಿಮಿನಲ್‌ಗಳನ್ನು ಮಟ್ಟ ಹಾಕುವುದಾಗಿ ಹೇಳುತ್ತಿದೆ. ಆದರೆ, ಬಹಳ ನೋವಿನ ಸಂಗತಿ ಎಂದರೆ ಬಹುತೇಕವಾಗಿ ಬಡ ಕಾರ್ಮಿಕ ವರ್ಗದವರ ಮೇಲೆಯೇ ದಾಳಿಗಳು ನಡೆದಿವೆ. ಅತ್ಯಂತ ಕಠಿಣ ಪರಿಸ್ಥಿತಿಗಳಲ್ಲಿ, ಕಡಿಮೆ ವೇತನದಲ್ಲಿ ದುಡಿದು ಸಮಾಜಕ್ಕೆ ಬೇಕಾದ ಸಂಪನ್ಮೂಲವನ್ನು ಸೃಷ್ಟಿ ಮಾಡುತ್ತಿರುವ ಕಾರ್ಮಿಕರನ್ನು ಅವರು ಕೆಲಸ ಮಾಡುತ್ತಿರುವ ಕಾರ್ಖಾನೆಗಳಲ್ಲಿ, ಕಟ್ಟಡ ನಿರ್ಮಾಣದ ಸ್ಥಳಗಳಲ್ಲಿ ಮತ್ತು ಮನೆಗಳಲ್ಲಿಯೇ ಬಂಧಿಸಲಾಗಿದೆ.

### ಕಾನೂನು ಮತ್ತು ಸಂವಿಧಾನದ ಉಲ್ಲಂಘನೆ

ಹೋರಾಟಗಳನ್ನು ಹತ್ತಿಕ್ಕಲು ಟ್ರಂಪ್ ಆಡಳಿತವು ಮಿಲಿಟರಿ ಶಕ್ತಿಯನ್ನು ಬಳಕೆ ಮಾಡುವುದು ಸಂವಿಧಾನಬಾಹಿರ ಕ್ರಮ ಎಂದು ಅಲ್ಲಿನ ತಜ್ಞರು ಎಚ್ಚರಿಸಿದ್ದಾರೆ. ತಮ್ಮ ಅನುಮತಿಯಿಲ್ಲದೆ ಕ್ಯಾಲಿಫೋರ್ನಿಯಾದ ನ್ಯಾಶನಲ್ ಗಾರ್ಡ್‌ಗಳನ್ನು ಟ್ರಂಪ್ ಬಳಸಿದ್ದನ್ನು ಅಲ್ಲಿಯ ರಾಜ್ಯಪಾಲರು ವಿರೋಧಿಸಿದ್ದು, ಈ ಕುರಿತು ನ್ಯಾಯಾಲಯದಲ್ಲಿ ಪ್ರಕರಣವನ್ನೂ ದಾಖಲಿಸಿದ್ದಾರೆ. ನಾಗರಿಕ ಕಾನೂನನ್ನು ಜಾರಿಗೊಳಿಸಲು ಮಿಲಿಟರಿಯನ್ನು ಬಳಸುವಂತಿಲ್ಲ ಎಂದು ಅಮೆರಿಕಾದ ಕಾನೂನು ಸ್ಪಷ್ಟವಾಗಿ ಹೇಳುತ್ತದೆ. ಆದರೂ, ಟ್ರಂಪ್, ಕಾಯ್ದೆಯ ಯಾವುದೋ ಒಂದು ಕಲಂನ ಆಶ್ರಯ ಪಡೆದು ಮಿಲಿಟರಿ ಪಡೆಗಳನ್ನು ಹೋರಾಟದ ಸ್ಥಳದಲ್ಲಿ ನಿಯೋಜಿಸಿರುವುದು ಕೆಟ್ಟ ಪರಂಪರೆಗೆ ನಾಂದಿ ಹಾಡುತ್ತದೆ ಎಂದು ಅಲ್ಲಿನ ನಾಗರಿಕ ಹಕ್ಕುಗಳ ಹೋರಾಟಗಾರರು ಕಳವಳ ವ್ಯಕ್ತಪಡಿಸಿದ್ದಾರೆ. ಅಲ್ಲದೇ, ಮುಂಬರುವ ಅಧ್ಯಕ್ಷರೂ ಇದೇ ಮಾದರಿಯನ್ನು ಅನುಸರಿಸುವ ಅಪಾಯವಿದೆ ಎಂದೂ ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ದೇಶಭಕ್ತಿಯ ಹೆಸರಿನಲ್ಲಿ ಟ್ರಂಪ್, ದೇಶದ ಜನರ ಮೇಲೆಯೇ ಮಿಲಿಟರಿ ದಾಳಿ ನಡೆಸುತ್ತಿದ್ದಾರೆ. ಆ ಮೂಲಕ ದೇಶದ ಬಂಡವಾಳಶಾಹಿ–ಸಾಮ್ರಾಜ್ಯಶಾಹಿ ಹಿತಾಸಕ್ತಿಯನ್ನು ರಕ್ಷಿಸುವುದೇ ತಮ್ಮ ಆದ್ಯ ಕರ್ತವ್ಯ ಎಂಬುದನ್ನು ಜಗಜ್ಜಾಹೀರುಗೊಳಿಸಿದ್ದಾರೆ. ಇಲ್ಲಿ ಸ್ಪಷ್ಟಪಡಿಸಬೇಕಾಗಿರುವುದೆಂದರೆ, ಲಾಸ್ ಏಂಜೆಲಿಸ್‌ನಲ್ಲಿ ನಡೆದ ಬಹುತೇಕ ಪ್ರತಿಭಟನೆಗಳು ಶಾಂತಿಯುತವಾಗಿದ್ದವು. ಸಮುದಾಯದ ಮುಖಂಡರು, ಸಂಬಂಧಪಟ್ಟ ನಾಗರಿಕರು ತಮ್ಮ ಪ್ರತಿಭಟನೆ ಶಾಂತಿಯುತವಾಗಿರಲಿದೆ ಎಂದು ಘೋಷಿಸಿದ್ದರು. ಅಷ್ಟಾಗಿಯೂ ಟ್ರಂಪ್ ಅವರು ಮಿಲಿಟರಿಯನ್ನು ಹಿಂದಕ್ಕೆ ಕರೆಸಿಕೊಳ್ಳಲಿಲ್ಲ.




ಸದಾ ಸನ್ನದ್ಧ ಸ್ಥಿತಿಯಲ್ಲಿ ಗಸ್ತು ತಿರುಗುತ್ತಿರುವ ಸೇನಾ ಪೋಷಾಕಿನಲ್ಲಿಯ ನೌಕಾ ಪಡೆಯ ಯೋಧರು, ಆಕಾಶದಲ್ಲಿ ಸುತ್ತು ಹೊಡೆಯುತ್ತಿರುವ ಹೆಲಿಕಾಪ್ಟರ್‌ಗಳು, ರಬ್ಬರ್ ಬುಲೆಟ್‌ನೊಂದಿಗಿನ ಪೊಲೀಸರು, ಇವೆಲ್ಲವೂ ಜನರನ್ನು ಬೆದರಿಸುವ ತಂತ್ರಗಳಲ್ಲದೆ ಇನ್ನೇನು!

### ಕುಸಿದ ಮಿಲಿಟರಿಯ ನೈತಿಕತೆ!

ತಮ್ಮದೇ ನಾಗರಿಕರ ವಿರುದ್ಧ ನಿಯೋಜನೆಗೊಂಡಿರುವುದು ಸೈನಿಕರ ನೈತಿಕತೆಯನ್ನು ಕುಗ್ಗಿಸಿದೆ. ಅವರು, ಈ ಬಗ್ಗೆ ಖಾಸಗಿಯಾಗಿ ತಮ್ಮ ಬೇಸರ, ಅಸಮಾಧಾನವನ್ನು ಹೊರಹಾಕುತ್ತಿದ್ದಾರೆ. ಕಾನೂನಾತ್ಮಕವಾಗಿ, ನೈತಿಕವಾಗಿ ಅವರದ್ದು ಒಂದು ಅಯೋಮಯವಾದ ಪರಿಸ್ಥಿತಿ. ತಾವು ದೇಶವನ್ನು ಕಾಯುತ್ತಿದ್ದೇವೆಯೋ ಅಥವಾ ಕೇವಲ ಅಧ್ಯಕ್ಷರ ಆದೇಶ ಪಾಲಿಸುತ್ತಿದ್ದೇವೆಯೋ? ತಾವು ದೇಶದ ಸಂಪತ್ತು ರಕ್ಷಿಸುತ್ತಿದ್ದೇವೆಯೋ ಅಥವಾ ರಾಜಕೀಯ ವಿರೋಧಿಗಳನ್ನು ನಿಗ್ರಹಿಸುತ್ತಿದ್ದೇವೆಯೋ ಎಂಬ ಗೊಂದಲಗಳು ಅವರನ್ನು ಕಾಡುತ್ತಿವೆ.

### ಪ್ರಜಾತಂತ್ರದ ಕುಸಿತ!

ಆಕ್ರೋಶದಿಂದ ರೇಡಿಯೊ ಭಾಷಣ ಮಾಡಿದ ಕ್ಯಾಲಿಫೋರ್ನಿಯಾದ ರಾಜ್ಯಪಾಲರಾದ ನ್ಯೂಸಮ್, 'ಪ್ರಜಾಪ್ರಭುತ್ವವು ದಾಳಿಗೊಳಗಾಗಿದೆ' ಎಂದಿದ್ದಾರೆ. ದೇಶದಾದ್ಯಂತ 'ರಾಜನಿಲ್ಲದ ದಿನ' (ನೋ ಕಿಂಗ್ಸ್ ಡೇ) ಎಂಬ ಫಲಕಗಳನ್ನು ಹಿಡಿದುಕೊಂಡು ಪ್ರತಿಭಟನೆಗಳು ಮೊಳಗಿದವು. ಆ ಮೂಲಕ ಅಮೆರಿಕದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ತಮ್ಮ ಹಿರಿಯರು ಹೇಗೆ ರಾಜಸತ್ತೆಯ ವಿರುದ್ಧ ಹೋರಾಟ ನಡೆಸಿದ್ದರು ಎಂಬುದನ್ನು ನೆನಪಿಸಿದರು. ಅದಕ್ಕವರು ಆಯ್ದುಕೊಂಡಿದ್ದು ಟ್ರಂಪ್‌ನ ಜನ್ಮದಿನವನ್ನು!

ಇಲ್ಲಿ ಈಗ ನಡೆಯುತ್ತಿರುವುದು ಪ್ರಜಾತಂತ್ರದ ಕುಸಿತದ ವಿರುದ್ಧದ ಪ್ರತಿಭಟನೆ. ಪ್ರತಿರೋಧವನ್ನು ಹತ್ತಿಕ್ಕಲು ಮಿಲಿಟರಿ ಬಳಕೆಯಾದಾಗ, ನ್ಯಾಯಾಧೀಶರ ತೀರ್ಪುಗಳನ್ನು ನಿರ್ಲಕ್ಷಿಸಿದಾಗ, ರಾಜ್ಯಪಾಲರಿಗೆ ಬಂಧನದ ಬೆದರಿಕೆ ಒಡ್ಡಿದಾಗ, ವಲಸೆಗಾರರನ್ನು ಬೇಟೆಯಾಡಿ ಅವರ ಬೆಂಬಲಿಗರನ್ನು ಬಂಧಿಸಿದಾಗ, ಪ್ರಜಾತಂತ್ರ ಉಳಿಯುವುದಾದರೂ ಹೇಗೆ?

ಒಂದು ಕಾಲದಲ್ಲಿ, ಜೆಫ್ಫರ್ಸನ್‌ರಿಂದ ಹಿಡಿದು ಲಿಂಕನ್‌ವರೆಗೂ ಪ್ರಜಾತಾಂತ್ರಿಕ ಮೌಲ್ಯಗಳನ್ನು ಬಲವಾಗಿ ಪ್ರತಿಪಾದಿಸಿದ್ದ, ಅವುಗಳ ಪ್ರತೀಕವಾಗಿದ್ದ ದೇಶ ಇಂದು ಅವನತಿಯತ್ತ ಸಾಗುತ್ತಿದೆ. ಪ್ರತಿ ನಿತ್ಯದ ಕರ್ಫ್ಯೂ, ಜನ ಸಾಮಾನ್ಯರ ಮೇಲೆ ಮಿಲಿಟರಿ ದಾಳಿ, ರಾಜ್ಯಪಾಲರು ಕೇಂದ್ರ ಸರ್ಕಾರದ ಮೇಲೆ ಮೊಕದ್ದಮೆ ಹೂಡುವಂತಹ ಪರಿಸ್ಥಿತಿ, ಬಂಧನಗಳ ಮೇಲೆ ಬಂಧನ, ಇಂತಹ ಪರಿಸ್ಥಿತಿಯಲ್ಲಿ ಪ್ರಜಾತಂತ್ರಕ್ಕೆ ನೆಲೆಯಾದರೂ ಎಲ್ಲಿದೆ?

ವಿಶ್ವದ ನೈತಿಕತೆಯ ರಕ್ಷಕ ತಾನೆಂದು ಪ್ರತಿಬಿಂಬಿಸಿಕೊಂಡಿದ್ದ ಅಮೆರಿಕಾ, ವಿಶ್ವದಾದ್ಯಂತ ಬಂಡವಾಳಶಾಹಿ ದೇಶಗಳ ಆಳ್ವಿಕರು ತಮ್ಮ ದೇಶಗಳಲ್ಲಿನ ಪ್ರಜಾತಾಂತ್ರಿಕ ಹೋರಾಟಗಳನ್ನು ದಮನ ಮಾಡುತ್ತಿರುವಾಗ ಕುರುಡುಗಣ್ಣಾಗಿದೆ. ಅದೇ ದಮನಕಾರಿ ಯಂತ್ರ ಇದೀಗ ಅಮೆರಿಕಾದಲ್ಲಿಯೇ ದಾಂಗುಡಿ ಇಡುತ್ತಿದೆ. ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳಲ್ಲಿ ಪ್ರತಿರೋಧ ತೋರಿಸಿದ ಬೋಧಕರು ಹಾಗೂ ವಿದ್ಯಾರ್ಥಿಗಳನ್ನು ಬೆದರಿಸಲಾಗುತ್ತಿದೆ, ಗಾಜಾ ವಿರುದ್ಧದ ಪ್ರತಿರೋಧದ ಧ್ವನಿಗಳನ್ನು ಅಡಗಿಸಲಾಗುತ್ತಿದೆ.

ಮರಣಾಸನ್ನ ಬಂಡವಾಳಶಾಹಿ ವ್ಯವಸ್ಥೆಯು ಹೆಚ್ಚು ಹೆಚ್ಚು ಫ್ಯಾಸಿಸ್ಟ್ ಲಕ್ಷಣಗಳನ್ನು ಮೈಗೂಡಿಸಿಕೊಳ್ಳುತ್ತಾ, ಪ್ರಜಾತಾಂತ್ರಿಕ ಮೌಲ್ಯಗಳು, ರೂಢಿಗಳು, ಆಚರಣೆಗಳು, ನಿಯಮಗಳನ್ನು ಗಾಳಿಗೆ ತೂರುತ್ತಿರುವುದು ಇಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಇಂದಿನ ಅಮೆರಿಕಾ, ಎರ್ಡೋಗನ್ ನೇತೃತ್ವದ ಟರ್ಕಿ, ನರೇಂದ್ರ ಮೋದಿ ನೇತೃತ್ವದ ಭಾರತ, ಇಮ್ಯಾನುವೆಲ್ ಮ್ಯಾಕ್ರಾನ್ ನೇತೃತ್ವದ ಫ್ರಾನ್ಸ್, ಬೆಂಜಮಿನ್ ನೇತನ್ಯಾಹು ಆಳ್ವಿಕೆಯ ಇಸ್ರೇಲ್ ತರಹವೇ ಪ್ರಜಾತಂತ್ರದ ಹೊರಕವಚವನ್ನು ಮಾತ್ರ ಉಳಿಸಿಕೊಂಡಿರುವ ಫ್ಯಾಸಿಸ್ಟ್ ಆಳ್ವಿಕೆಯಾಗಿದೆ. ಒಂದೊಮ್ಮೆ ಪ್ರಜಾಸತ್ತೆಯ ಮುಕುಟವಾಗಿದ್ದ ಅಮೆರಿಕಾದಲ್ಲಿನ ಈ ಪರಿಸ್ಥಿತಿಯ ಅಪಾಯವೇನೆಂದರೆ, ಪ್ರಜಾತಂತ್ರ ಅಷ್ಟು ಬಲವಾಗಿ ನೆಲೆಯೂರದೆ ಇದ್ದ ದೇಶಗಳೂ ಇದನ್ನೇ ಮಾದರಿಯಾಗಿ ಅನುಸರಿಸಿದರೆ ಎಂಬ ಆತಂಕ!

### ಕೊನೆಯ ಪ್ರಶ್ನೆ

ಇತಿಹಾಸ ಈ ಕ್ಷಣವನ್ನು ಹೇಗೆ ದಾಖಲಿಸಬಹುದು? ಪ್ರಭುತ್ವಕ್ಕೆ ಮಣಿಯದೇ ನ್ಯಾಯಾಲಯಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ತಮ್ಮ ಸ್ವಾಯತ್ತತೆಯನ್ನು ಉಳಿಸಿಕೊಳ್ಳುತ್ತವೆಯೇ? ಮಿಲಿಟರಿ ತನ್ನ ಸಂವಿಧಾನಾತ್ಮಕ ಗಡಿಯನ್ನು ಎತ್ತಿ ಹಿಡಿಯುತ್ತದೆಯೇ? ಸಾಮ್ರಾಜ್ಯಶಾಹಿ ದೇಶವೊಂದರ ಬಗ್ಗೆ ಇಂತಹ ನಿರೀಕ್ಷೆಗಳನ್ನು ಇಟ್ಟುಕೊಳ್ಳಬಹುದೇ? ಅಂತಿಮವಾಗಿ, ಪ್ರಜಾತಾಂತ್ರಿಕ ಹಕ್ಕುಗಳನ್ನು ಉಳಿಸಿಕೊಳ್ಳುವ ಹೊಣೆಗಾರಿಕೆ ಇರುವುದು ಅಮೆರಿಕದ ಜನತೆಯ ಮೇಲೆ. ಅದನ್ನು ಪ್ರಬಲ ಪ್ರಜಾತಾಂತ್ರಿಕ ಹೋರಾಟಗಳ ಮೂಲಕವೇ ಸಾಧಿಸಬೇಕಾಗುತ್ತದೆ.

'ಕಾರ್ಮಿಕ ದೃಷ್ಟಿಕೋನ – ಮಾಸಿಕ ಪತ್ರಿಕೆ'ಯನ್ನು ಫೇಸ್‌ಬುಕ್‌ನಲ್ಲಿ ಓದಲು ಈ QR ಕೋಡ್ ಅನ್ನು ಬಳಸಿ.

## ಹಿಟ್ಲರನ ಫ್ಯಾಸೀವಾದದ ವಿರುದ್ಧ ವಿಜಯ

2ನೇ ಪುಟದಿಂದ

ಮಾಡಲು ಒತ್ತಡವಿಲ್ಲ" ಎಂದು ಹೇಳಿದರು. (ಅವರ್ ಗ್ರೇಟ್ ಪೇಟ್ರಿಯಾಟಿಕ್ ವಾರ್ ಕೃತಿಯಲ್ಲಿ)

### ಸ್ಟಾಲಿನ್‌ಗ್ರಾಡ್ ಕದನ ಮತ್ತು ನಾಜಿ ಜರ್ಮನಿಯ ಅಂತಿಮ ಸೋಲು

ನಂತರ, ಜಗತ್ತು ಕಂಡ ಅತ್ಯಂತ ಉಗ್ರ ಸಮರವಾದ ಸ್ಟಾಲಿನ್‌ಗ್ರಾಡ್ ಸಮರ ಪ್ರಾರಂಭವಾಯಿತು. "3,30,000 ಸೈನಿಕರ ಜರ್ಮನ್ ಸೈನ್ಯದ ಸುತ್ತುವರಿಯುವಿಕೆಯನ್ನು ಎದುರಿಸುವ ಅದ್ಭುತ ಕಾರ್ಯಾಚರಣೆಯನ್ನು ಕೈಗೊಳ್ಳಲು ಕೆಂಪು ಸೇನೆಯ ನಾಯಕತ್ವದ ಸರಿಯಾದ ತಂತ್ರ ಮತ್ತು ನಮ್ಮ ಸೇನಾ ಕಮಾಂಡರ್‌ಗಳ ಉತ್ತಮ ಕಾರ್ಯತಂತ್ರಗಳಿಂದ ಮಾತ್ರವೇ ಸಾಧ್ಯವಾಯಿತು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ... ಜರ್ಮನ್ನರು ಖಾರ್ಕೊವ್ ಪ್ರದೇಶದಲ್ಲಿ ಸೋವಿಯತ್ ಸೈನ್ಯವನ್ನು ಸುತ್ತುವರಿಯಲು ಹಾಗೂ ತಮಗೆ ಅಲ್ಲಿ "ಜರ್ಮನ್ ಸ್ಟಾಲಿನ್‌ಗ್ರಾಡ್" ಅನ್ನು ಸ್ಥಾಪಿಸಲು ಸಾಧ್ಯವಾಗುತ್ತದೆ ಎಂದು ನಿರೀಕ್ಷಿಸಿದ್ದರು. ...... ಸ್ಟಾಲಿನ್‌ಗ್ರಾಡ್ ಕದನವು ಜರ್ಮನ್ ಫ್ಯಾಸೀವಾದಿ ಸೈನ್ಯದ ಅವನತಿಯನ್ನು ಮುನ್ಸೂಚಿಸಿದರೆ, ಕುರ್ಸ್ಕ್ ಕದನವು ಅದನ್ನು ವಿನಾಶದ ಅಂಚಿಗೆ ತಂದು ನಿಲ್ಲಿಸಿತು... ನಮ್ಮ ಸೈನ್ಯವು ವಿದೇಶಿ ದರೋಡೆಕೋರರ ಗುಂಪುಗಳನ್ನು ತಡೆದು ನಿಲ್ಲಿಸಿ, ನಂತರ, ಸ್ಟಾಲಿನ್‌ಗ್ರಾಡ್‌ನಲ್ಲಿ ಅವರನ್ನು ಸೋಲಿಸಿ, ಅವರನ್ನು ಪಶ್ಚಿಮಕ್ಕೆ ಹಿಂದೆ ತಳ್ಳಿತು.....ನಮ್ಮ ಈ ಮಹಾನ್ ದೇಶಪ್ರೇಮಿ ಯುದ್ಧವು ಸೋವಿಯತ್ ಜನರು ಪವಾಡಗಳನ್ನು ಮಾಡಲು ಮತ್ತು ಕಠಿಣವಾದ ಪರೀಕ್ಷೆಗಳಿಂದ ವಿಜಯಶಾಲಿಯಾಗಿ ಹೊರಹೊಮ್ಮಲು ಸಮರ್ಥರಾಗಿದ್ದಾರೆ ಎಂಬುದನ್ನು ತೋರಿಸಿದೆ. ಕಾರ್ಮಿಕರು, ರೈತರು ಮತ್ತು ಸೋವಿಯತ್ ಬುದ್ಧಿಜೀವಿಗಳು, ಇಡೀ ಸೋವಿಯತ್ ಜನರು, ಶತ್ರುಗಳ ಸೋಲನ್ನು ತ್ವರಿತಗೊಳಿಸಲು, ಫ್ಯಾಸೀವಾದಿಗಳು ನಾಶಪಡಿಸಿದ ನಮ್ಮ ಆರ್ಥಿಕತೆಯನ್ನು ಸಂಪೂರ್ಣವಾಗಿ ಪುನಃಸ್ಥಾಪಿಸಲು, ನಮ್ಮ ದೇಶವನ್ನು ಎಂದಿಗಿಂತಲೂ ಹೆಚ್ಚು ಶಕ್ತಿಶಾಲಿ ಮತ್ತು ಸಮೃದ್ಧಗೊಳಿಸಲು ದೃಢಸಂಕಲ್ಪವನ್ನು ಹೊಂದಿದ್ದಾರೆ. ಕೆಂಪು ಸೇನೆಯ ಹೊಡೆತಗಳಿಂದಾಗಿ ಫ್ಯಾಸೀವಾದಿ ರಾಷ್ಟ್ರಗಳ ಬಣವು ಛಿದ್ರವಾಗುತ್ತಿದೆ, ತುಂಡು ತುಂಡಾಗಿ ಕುಸಿಯುತ್ತಿದೆ.....ಜರ್ಮನಿಯು ಯುದ್ಧದಲ್ಲಿ ಸೋತಿದೆ ಎಂಬುದನ್ನು ಈಗ ಕಾಣದೆ ಇರಲು ಸಾಧ್ಯವಿಲ್ಲ" ಎಂದು ಅದನ್ನು ಸ್ಟಾಲಿನ್ ವಿವರಿಸಿದರು.(ಅವರ್ ಗ್ರೇಟ್ ಪೇಟ್ರಿಯಾಟಿಕ್ ವಾರ್ ಕೃತಿಯಲ್ಲಿ)

**ಸಶೇಷ**

(ಮುಂದಿನ ಹಾಗೂ ಕೊನೆಯ ಭಾಗ ನವೆಂಬರ್ ಸಂಚಿಕೆಯಲ್ಲಿ)

# ಗಿಗ್ ಆರ್ಥಿಕತೆ

## ಬಂಡವಾಳಶಾಹಿ ವ್ಯವಸ್ಥೆಯ ಹೊಸ ವೇತನ ಗುಲಾಮಗಿರಿ!

ಇವತ್ತಿನ ಪ್ರಪಂಚದಲ್ಲಿ, ಶಾಶ್ವತ ಉದ್ಯೋಗ, ಕೆಲಸದ ಭದ್ರತೆ, ಸಮಯಕ್ಕೆ ಸರಿಯಾಗಿ ಸಂಬಳ, ದಿನಕ್ಕೆ 8 ಗಂಟೆಗಳ ಕೆಲಸ, ಆರೋಗ್ಯ ವಿಮೆ ಮತ್ತು ನಿವೃತ್ತಿ ಪ್ರಯೋಜನ – ಇವೆಲ್ಲವೂ ಗತಕಾಲದ ವಿಷಯಗಳಾಗಿವೆ. ಈ ಹಿಂದೆ, ಕಡೇಪಕ್ಷ ಕಾನೂನಿನ ಪ್ರಕಾರವಾದರೂ, ಮ್ಯಾನೇಜ್‌ಮೆಂಟ್ ಅವರ ವಿಚಿತ್ರ ವರ್ತನೆಗಳ ವಿರುದ್ಧ ಕಾರ್ಮಿಕರ/ನೌಕರರ ಹಿತಾಸಕ್ತಿಗಳನ್ನು ರಕ್ಷಿಸುವ ಕೆಲವು ಟ್ರೇಡ್ ಯೂನಿಯನ್ ಹಕ್ಕುಗಳಿದ್ದವು. ಆದರೆ ಬಂಡವಾಳಶಾಹಿ ಜಾಗತೀಕರಣ ಶುರುವಾದ ನಂತರ, ಕಾರ್ಮಿಕರ ಸ್ಥಿತಿಯು ವಿನಾಶದ ಅಂಚಿಗೆ ತಲುಪಿದೆ. ವರ್ಷಪೂರ್ತಿ ನಿರಂತರವಾಗಿ ಕೆಲಸಗಳು ನಡೆಯುವ ವೃತ್ತಿಕ್ಷೇತ್ರಗಳಲ್ಲೂ, ಮಾಲೀಕರು ಒಪ್ಪಂದದ ಆಧಾರದ ಮೇಲೆ, ದಿನಗೂಲಿ ಆಧಾರದಲ್ಲಿ ಅಥವಾ ಗಂಟೆಗಳ ಆಧಾರದ ಮೇಲೆ ಸ್ವಲ್ಪವೇ ಕೆಲಸಕ್ಕೆ ಪಾವತಿಸುವ ಮೂಲಕ ಕೆಲಸಗಾರರನ್ನು ನೇಮಿಸಿಕೊಳ್ಳುತ್ತಿದ್ದಾರೆ. ಯೋಗ್ಯಮಟ್ಟದ ಜೀವನಾಂಶ ಕಲ್ಪಿಸುವುದು ಹಾಗಿರಲಿ, ನಮ್ಮ ದೇಶದ ವಿಶಾಲವಾದ ಅಸಂಘಟಿತ ವಲಯದಲ್ಲಿ ಕೆಲಸ ಮಾಡುವ ಲಕ್ಷಾಂತರ ಜನರಿಗೆ ಕನಿಷ್ಠ ವೇತನ ಸಿಗುವುದೂ ಖಚಿತವಾಗಿಲ್ಲ. ಅಂಗನವಾಡಿ, ಆಶಾ, ಬಿಸಿಯೂಟ ಕಾರ್ಯಕರ್ತರು, ಕಟ್ಟಡ ನಿರ್ಮಾಣ ಕಾರ್ಮಿಕರು, ನಿರ್ಗತಿಕ ವಲಸೆ ಕಾರ್ಮಿಕರು ಮತ್ತು ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡುವ ತಾತ್ಕಾಲಿಕ ಕಾರ್ಮಿಕರು–ಇವರೆಲ್ಲರೂ ಒಂದೇ ವರ್ಗಕ್ಕೆ ಸೇರಿದ್ದಾರೆ ಹಾಗೂ ಅತ್ಯಂತ ಹೀನಾಯವಾದ ವೇತನ–ಗುಲಾಮಗಿರಿಯ ಬಲಿಪಶುಗಳಾಗಿದ್ದಾರೆ. ಇತ್ತೀಚೆಗೆ ಜಾರಿಯಾದ ನಾಲ್ಕು ಕರಾಳ ಕಾರ್ಮಿಕ ಸಂಹಿತೆಗಳು ಈ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿವೆ. ಡಿಜಿಟಲ್ ಯುಗವು ಶುರುವಾದ ಮೇಲೆ ಆನ್‌ಲೈನ್ ವ್ಯಾಪಾರ ಚಟುವಟಿಕೆಗಳು ಆರಂಭಗೊಂಡು, ಝೊಮ್ಯಾಟೊ, ಸ್ವಿಗ್ಗಿ, ಊಬರ್, ಓಲಾ, ಪೋರ್ಟರ್, ಜೆಪ್ಟೋ ಇತ್ಯಾದಿ ಡಿಜಿಟಲ್ ವೇದಿಕೆಗಳಿಂದಾಗಿ ಗಿಗ್ ನೌಕರ ಎಂಬ ಹೊಸ ವರ್ಗವು ಈ ಪಟ್ಟಿಗೆ ಸೇರ್ಪಡೆಯಾಗಿದೆ. ಇಲ್ಲಿನ ಉದ್ಯೋಗದ ಸ್ವರೂಪವು "ನೇಮಕ ಮತ್ತು ವಜಾ" (ಹೈರ್ ಅಂಡ್ ಫೈರ್) ಎಂಬ ನೀತಿಯಿಂದ ನಿಯಂತ್ರಿಸಲ್ಪಡುತ್ತದೆ. ನೀತಿ ಆಯೋಗದ ವರದಿಯ ಪ್ರಕಾರ, ಡೆಲಿವರಿ ಸೇವೆಗಳು, ಆನ್‌ಲೈನ್ ಆರ್ಡರ್ ಸರಬರಾಜು ಅಥವಾ ಕ್ಯಾಬ್ ಡ್ರೈವರ್‌ಗಳು, ಬೈಕ್ ಸವಾರರು ಮತ್ತು ಸ್ವತಂತ್ರ ಉದ್ಯೋಗಿ (ಫ್ರೀಲ್ಯಾನ್ಸರ್) ಆಗಿ ಕೆಲಸ ಮಾಡುವ ಗಿಗ್ ನೌಕರರ ಸಂಖ್ಯೆ 2029–30 ರ ವೇಳೆಗೆ 23.5 ಮಿಲಿಯನ್ (2.35 ಕೋಟಿ) ತಲುಪುವ ನಿರೀಕ್ಷೆಯಿದೆ. ಆಕ್ಸ್‌ಫರ್ಡ್ ಇಂಟರ್ನೆಟ್ ಇನ್‌ಸ್ಟಿಟ್ಯೂಟ್‌ನ ಆನ್‌ಲೈನ್ ಲೇಬರ್ ಇಂಡೆಕ್ಸ್ ಪ್ರಕಾರ, ವಿಶ್ವದ ಒಟ್ಟು ಆನ್‌ಲೈನ್ ಹೊರಗುತ್ತಿಗೆ ಕೆಲಸದ 24% ಭಾಗವನ್ನು ಭಾರತದ ಜನರೇ ನಿರ್ವಹಿಸುತ್ತಿದ್ದಾರೆ. ಆ ಮೂಲಕ, ಈ ವಲಯದಲ್ಲಿ ವಿಶ್ವದ ಅತಿದೊಡ್ಡ ಪೂರೈಕೆದಾರ ದೇಶವಾಗಿದೆ.

### ಗಿಗ್ ನೌಕರರ ಸಂಖ್ಯೆ ಹೆಚ್ಚುತ್ತಿದೆ–ಏಕೆ?

ಸಾಧ್ಯವಾದಷ್ಟು ಹೆಚ್ಚು ಲಾಭ ಗಳಿಸುವ ಉದ್ದೇಶದಿಂದ, ಬಂಡವಾಳಶಾಹಿ ಆರ್ಥಿಕತೆಯು ಕಾರ್ಮಿಕ ವರ್ಗವನ್ನು ಬಡತನಕ್ಕೆ ದೂಡುತ್ತದೆ ಮತ್ತು ಅವರ ಕೊಳ್ಳುವ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ. ಹಾಗಾಗಿ, ಮಾರುಕಟ್ಟೆಯಲ್ಲಿನ ನಿರಂತರ ಕುಸಿತದಿಂದ ಬಾಧಿತರಾದ ಆಡಳಿತಾರೂಢ ಹಣಕಾಸು ದೊರೆಗಳು, ಶಾಶ್ವತ ಕಾರ್ಯಪಡೆಯನ್ನು ಕಡಿಮೆ ಮಾಡುವ ಮೂಲಕ ಮತ್ತು ಸುಧಾರಿತ ತಂತ್ರಜ್ಞಾನವನ್ನು ಬಳಸುವ ಮೂಲಕ ಉತ್ಪಾದನಾ ವೆಚ್ಚವನ್ನು ಕಡಿತಗೊಳಿಸುತ್ತಿದ್ದಾರೆ. ಆದರೂ, ಸ್ವಲ್ಪ ದೈಹಿಕ ಶ್ರಮದ ಅವಶ್ಯಕತೆ ಇನ್ನೂ ಇದೆ ಮತ್ತು ಈ ಅವಶ್ಯಕತೆಯನ್ನು ಬಿಡಿಗಾಸಿನ ಸಂಬಳದ ಮೂಲಕ ಮತ್ತು ಯಾವುದೇ ಸೇವಾ ಷರತ್ತುಗಳಿಲ್ಲದ ಗುತ್ತಿಗೆ ಅಥವಾ ತಾತ್ಕಾಲಿಕ ಕೆಲಸಗಾರರ ಮೂಲಕ ಪೂರೈಸಲಾಗುತ್ತಿದೆ. ಅವರಿಗೆ ಸೇವೆಯ ಅವಧಿ, ಕೆಲಸದ ಸಮಯ, ಸಾಮಾಜಿಕ ಸೌಲಭ್ಯಗಳು, ಇತ್ಯಾದಿಗಳನ್ನು ನಿರ್ದಿಷ್ಟಪಡಿಸುವುದಿಲ್ಲ. ಇದಲ್ಲದೇ, ಡೆಲಿವರಿ ಸ್ಥಳಕ್ಕೆ ಅವರು ಯಾವಾಗ ಬರುತ್ತಾರೆ, ಯಾವಾಗ ಹೊರಡುತ್ತಾರೆ, ಅವರ ಡೆಲಿವರಿ ಹೇಗೆ ಆಯಿತು, ಇತ್ಯಾದಿಗಳನ್ನು ಗಮನಿಸುವ ಮೂಲಕ – ಬೇರೆ ರೀತಿಯಲ್ಲಿ ಹೇಳುವುದಾದರೆ ಅವರ ಚಲನವಲನದ ಟ್ರ್ಯಾಕಿಂಗ್ ಮಾಡುವ ಮೂಲಕ, ಅವರು ಡಿಜಿಟಲ್ ಪ್ರಕ್ರಿಯೆಯ ನಿರಂತರ ಕಣ್ಗಾವಲಿನಲ್ಲಿ ಇರುತ್ತಾರೆ. ತಾವು ಅಂದುಕೊಂಡಂತೆ ಕೆಲಸ ಆಗಲೇಬೇಕೆಂದು ಖಾತ್ರಿಪಡಿಸಿಕೊಳ್ಳಲು ತಮ್ಮದೇ ಕೆಲಸಗಾರರ ಮೇಲೆ ಗೂಢಚಾರಿಕೆ ನಡೆಸುತ್ತಾರೆ! ನಿರುದ್ಯೋಗದ ಸಮಸ್ಯೆ ಹೆಚ್ಚುತ್ತಾ ಹೋದಂತೆ, ನಿರುದ್ಯೋಗಿಗಳು ತಾವು ಮತ್ತು ತಮ್ಮ ಕುಟುಂಬದವರು ಹೊಟ್ಟೆ ಹೊರೆಯಲು ಸಾಕಾಗುವಷ್ಟು ಸಂಬಳ ಸಿಗುವ ಯಾವುದೇ ರೀತಿಯ ಕೆಲಸವನ್ನು ವಿಧಿಯಿಲ್ಲದೇ ಒಪ್ಪಿಕೊಳ್ಳಲು ತಯಾರಿರುತ್ತಾರೆ ಎಂದು ಬಂಡವಾಳಶಾಹಿ ವರ್ಗಕ್ಕೆ ಗೊತ್ತು. ಹಾಗಾಗಿ, ನಿರ್ದಯ ಶೋಷಣೆ ಮಾಡಲು ಅವರಿಗೆ ಈಗಂತೂ ಸಾಕಷ್ಟು ಅವಕಾಶಗಳಿವೆ. ಆಕ್ಸ್‌ಫರ್ಡ್ ಇಂಟರ್ನೆಟ್ ಇನ್‌ಸ್ಟಿಟ್ಯೂಟ್‌ನ ಫೇರ್ ವರ್ಕ್ ರಿಸರ್ಚ್ ಪ್ರಾಜೆಕ್ಟ್–2022, ಇಂತಹ 11 ಭಾರತೀಯ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳನ್ನು ಅಧ್ಯಯನ ಮಾಡಿದೆ ಮತ್ತು ಅದರಲ್ಲಿ ಒಂದೇ ಒಂದು ಪ್ಲಾಟ್‌ಫಾರ್ಮ್ ಕೂಡಾ ತಮ್ಮ ಗಿಗ್ ನೌಕರರಿಗೆ ಕನಿಷ್ಠ ವೇತನ ಅಥವಾ ಸ್ಥಳೀಯ ಜೀವನ ನಿರ್ವಹಣಾ ವೇತನವನ್ನು ಒದಗಿಸುವುದಿಲ್ಲ ಎಂದು ತೀರ್ಮಾನಿಸಿದೆ. ಇದಲ್ಲದೆ, ಇನ್ನೊಂದಿಷ್ಟು ಹೆಚ್ಚಿನ ದುಡ್ಡು ಕೊಡುತ್ತೇವೆ ಎಂಬ ಆಮಿಷ ಒಡ್ಡಿದರೆ, ಈ ಗಿಗ್ ನೌಕರರು ಹೆಚ್ಚು ಸಮಯ ಕೆಲಸ ಮಾಡುವಂತೆ ಪುಸಲಾಯಿಸಬಹುದು ಎಂಬುದೂ ಸಹ ಆಡಳಿತ ವರ್ಗಕ್ಕೆ ಗೊತ್ತು. 'ಜಾಸ್ತಿ ಡೆಲಿವರಿ ಮಾಡಿ, ಜಾಸ್ತಿ ದುಡ್ಡು ಮಾಡಿ' ಎಂಬ ರಂಗುರಂಗಾದ ಆಶ್ವಾಸನೆಯಿಂದಾಗಿ, ಆರೋಗ್ಯಕ್ಕೆ ಆಗುವ ತೊಂದರೆಗಳು, ಪ್ರತಿಕೂಲ ಹವಾಮಾನ ಮತ್ತು ಇತರ ತಾಪತ್ರಯಗಳನ್ನು ಕಡೆಗಣಿಸಿ ಗಿಗ್ ನೌಕರರು ಜಾಸ್ತಿ ಹೊತ್ತು ಕೆಲಸ ಮಾಡಬೇಕಾದ ಪರಿಸ್ಥಿತಿ ಬರುತ್ತದೆ.

ಅಷ್ಟೇ ಅಲ್ಲ, ತಮ್ಮ ದುರುದ್ದೇಶವನ್ನು ಮರೆಮಾಚಲು, ಮಾಲೀಕರು ಈ ಗಿಗ್ ನೌಕರರನ್ನು ಪಾಲುದಾರರು, ಸಹವರ್ತಿಗಳು, ಏಜೆಂಟ್‌ಗಳು, ಸ್ವತಂತ್ರ ಗುತ್ತಿಗೆದಾರರು, ಟೆಕ್ ಅಗ್ರಿಗೇಟರ್‌ಗಳು, ಸಹಾಯಕರು, ಡಿಜಿಟಲ್ ಮಧ್ಯವರ್ತಿಗಳು, ಮುಂತಾದ ಬಣ್ಣಬಣ್ಣದ ಪದಗಳಿಂದ ಉಲ್ಲೇಖಿಸುತ್ತಾರೆ. ಈಗಾಗಲೇ ಇರುವ ಕಾನೂನುಗಳಿಂದ ಗಿಗ್ ನೌಕರರಿಗೆ ಯಾವುದೇ ಹಕ್ಕುಗಳು ಅಥವಾ ರಕ್ಷಣೆಗಳು ಸಿಗದಂತೆ ಮಾಡುವುದೇ ಇದರ ಹಿಂದಿನ ಹುನ್ನಾರವಾಗಿದೆ. ಬಹಳಷ್ಟು ಸಂದರ್ಭಗಳಲ್ಲಿ, ಗಿಗ್ ನೌಕರರಿಗೆ ಅವರು ನಿರ್ವಹಿಸುವ ಕೆಲಸಗಳು/ಡೆಲಿವರಿಗಳು/ರೈಡ್‌ಗಳ ಸಂಖ್ಯೆಯನ್ನು ಆಧರಿಸಿ ವೇತನ ಪಾವತಿಸುವುದರಿಂದ, ಕನಿಷ್ಠ ವೇತನಕ್ಕೆ ಸಂಬಂಧಿಸಿದ ಕಾನೂನು ಅವರಿಗೆ ಅನ್ವಯಿಸುವುದಿಲ್ಲ.

### ಉದ್ಯೋಗದ ಫ್ಲೆಕ್ಸಿಬಿಲಿಟಿ – ಕೇವಲ ಒಂದು ಹಗಲುಗನಸು

ಸುಳ್ಳು–ಆಶ್ವಾಸನೆ ಕೊಡುವುದರಲ್ಲಿ ಗುಳ್ಳೇನರಿಗಳು ಎತ್ತಿದ ಕೈ ಎನ್ನುವ ಹಾಗೆ, "ಗಿಗ್ ನೌಕರರು ಯಾವ ಕಂಪನಿಯಲ್ಲಿ ಬೇಕಾದರೂ, ಯಾವ ಕೆಲಸವನ್ನಾದರೂ ಮಾಡುವ ಫ್ಲೆಕ್ಸಿಬಿಲಿಟಿ ಹೊಂದಿದ್ದಾರೆ. ಅವರು ಪ್ರತಿದಿನ ನಿಗದಿತ ಸಮಯದಲ್ಲಿ ಕಚೇರಿ ಅಥವಾ ಕೆಲಸದ ಸ್ಥಳಕ್ಕೆ ಹೋಗಬೇಕಾಗಿಲ್ಲ, ಅದರ ಬದಲು, ಅವರಿಗೆ ಯಾವಾಗ ಸಾಧ್ಯವೋ ಆವಾಗ ದೂರದಿಂದಲೇ ಕೆಲಸ ಮಾಡಬಹುದು. ಇದಲ್ಲದೆ, ಅವರು ಒಂದೇ ಸಮಯದಲ್ಲಿ ಅನೇಕ ಕಂಪನಿಗಳಿಗೆ ಕೆಲಸ ಮಾಡಬಹುದು ಮತ್ತು ಹೆಚ್ಚುವರಿ ಆದಾಯ ಗಳಿಸಬಹುದು ಅಥವಾ ಇದನ್ನು ಅರೆಕಾಲಿಕ ಕೆಲಸ ಎಂದುಕೊಳ್ಳಬಹುದು." ಎಂಬ ಅಭಿಪ್ರಾಯವನ್ನು ಆಡಳಿತಾರೂಢ ಬಂಡವಾಳಶಾಹಿ ವರ್ಗವು ತೇಲಿಬಿಟ್ಟಿದೆ.

ಮೇಲ್ನೋಟಕ್ಕೆ, ಈ ವಾದಗಳು ಬಹಳ ಸರಿಯಾಗಿವೆ ಎನಿಸುತ್ತದೆ. ಆದರೆ ವಾಸ್ತವವೆಂದರೆ, 88% ಗಿಗ್ ನೌಕರರಿಗೆ ಇದು ಹೆಚ್ಚುವರಿ ಕೆಲಸವಲ್ಲ, ಬದಲಾಗಿ ಇದು ಆದಾಯದ ಪ್ರಮುಖ ಮೂಲವಾಗಿದೆ! ಅವರಿಗೆ ಬೇರೆ ಯಾವುದೇ ಸೂಕ್ತ ಉದ್ಯೋಗ ಸಿಗುತ್ತಿಲ್ಲ ಎಂಬ ಕಾರಣಕ್ಕೆ, ಅವರು ಇಂತಹ ತಾತ್ಕಾಲಿಕ ಕೆಲಸಗಳನ್ನು ಮಾಡಲೇಬೇಕಾಗಿದೆ. 'ಇಂಡಿಯಾ ರೇಟಿಂಗ್ಸ್' ಎಂಬ ಕ್ರೆಡಿಟ್ ಮಾರುಕಟ್ಟೆ ರೇಟಿಂಗ್ ಏಜೆನ್ಸಿ ನಡೆಸಿದ ಅಧ್ಯಯನದ ಪ್ರಕಾರ, ನೋಟು ಅಮಾನ್ಯೀಕರಣ, ಜಿಎಸ್‌ಟಿ ಅಳವಡಿಕೆ ಮತ್ತು ಕೋವಿಡ್–19 ಸಾಂಕ್ರಾಮಿಕದ ಕಾರಣದಿಂದಾಗಿ 2015–16 ಮತ್ತು 2022–23ರ ನಡುವೆ ದೇಶದಲ್ಲಿ 63 ಲಕ್ಷ ಅಸಂಘಟಿತ ವಲಯದ ಉದ್ಯಮಗಳು ಮುಚ್ಚಲ್ಪಟ್ಟಿದ್ದು, ಇದರಿಂದಾಗಿ 1.6 ಕೋಟಿ ಉದ್ಯೋಗಗಳು ನಷ್ಟವಾಗಿವೆ. ಇದು ಈಗಾಗಲೇ ಹೆಚ್ಚುತ್ತಿರುವ ನಿರುದ್ಯೋಗಿಗಳ ಸಂಖ್ಯೆಗೆ ಹೊಸ ಸೇರ್ಪಡೆಯಾಗಿದೆ! ಆದ್ದರಿಂದ, ನಮ್ಮ ದೇಶದಲ್ಲಿ ನಿರುದ್ಯೋಗಿ ಯುವಕರು ಎಲ್ಲಾದರೂ ಕೆಲಸ ಸಿಕ್ಕೀತೆಂಬ ಧಾವಂತದಲ್ಲಿ ಪರಸ್ಪರ ಪೈಪೋಟಿಗೆ ಇಳಿದಿರುವಾಗ, ಇಲ್ಲಿ ಫ್ಲೆಕ್ಸಿಬಿಲಿಟಿಯ ಪ್ರಶ್ನೆಯೇ ಬರುವುದಿಲ್ಲ. ಬದಲಾಗಿ, ಇದು ಹೊಟ್ಟೆ ಹೊರೆಯಲು ಮಾಡುತ್ತಿರುವ ಅನಿವಾರ್ಯ ಕೆಲಸ ಎಂದೇ ಪರಿಗಣಿಸಬೇಕು.



### ಅತ್ಯಧಿಕ ಶೋಷಣೆ

ಒಟ್ಟಾರೆಯಾಗಿ, ಬಂಡವಾಳಶಾಹಿ ಮಾಲೀಕರು ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳಿಂದ ಕಾರ್ಮಿಕರನ್ನು ಶೋಷಣೆ ಮಾಡಲು ಗಿಗ್ ಆರ್ಥಿಕತೆಯು ಸುಲಭ ಮಾರ್ಗಗಳನ್ನು ಒದಗಿಸುತ್ತದೆ. ಆನ್‌ಲೈನ್ ಗಿಗ್ ಪ್ಲಾಟ್‌ಫಾರ್ಮ್‌ಗಳು ಬಂದಮೇಲೆ ಮಧ್ಯವರ್ತಿಗಳ ಹಾವಳಿ ತಪ್ಪುತ್ತದೆ ಎಂದು ಸಾಕಷ್ಟು ಪ್ರಚಾರ ಮಾಡಲಾಗುತ್ತದೆ. ಆದರೆ ನಿಜ ಏನೆಂದರೆ, ಪ್ರತಿ ಡೆಲಿವರಿ ಅಥವಾ ಸವಾರಿಗಾಗಿ 15 ರಿಂದ 25% ಕಮಿಷನ್ ವಿಧಿಸುವ ಮೂಲಕ, ಈ ವ್ಯವಹಾರದಲ್ಲಿ ತೊಡಗಿರುವ ತಂತ್ರಜ್ಞಾನ ಕಂಪನಿಗಳೇ ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸುತ್ತಿವೆ. ಕೆಲಸ ಮುಗಿಸಿಕೊಂಡು ಮನೆಗೆ ಹೊರಡುವಾಗ, ಈಗ ಜೀವನ ನಡೆಸುವುದು ತುಂಬಾ ಕಷ್ಟವಾಗುತ್ತಿದೆ ಎಂದು ಎಷ್ಟೋ ಜನ ಗಿಗ್ ನೌಕರರು ಕಂಡುಕೊಂಡಿದ್ದಾರೆ. ಅಂತಹ ಒಬ್ಬ ಗಿಗ್ ನೌಕರರು ಕಣ್ಣಾಲಿಗಳನ್ನು ತೇವ ಮಾಡಿಕೊಳ್ಳುತ್ತಾ ಹೀಗೆ ಹೇಳಿದ್ದಾರೆ: "ನಮ್ಮಲ್ಲಿ ಕೆಲವರು ದಿನಕ್ಕೆ 16 ಗಂಟೆ ಕೆಲಸ ಮಾಡುತ್ತೇವೆ, ಆದರೆ ಪ್ರತಿ ಆರ್ಡರ್‌ಗೆ ಕಮಿಷನ್ ಕಡಿತಗೊಳಿಸಿದಾಗ, ನಾವು ಗಳಿಸಿದ 50 ರೂಪಾಯಿಯಲ್ಲಿ ನಮ್ಮ ಪಾಲಿಗೆ ಬರುವುದು 20 ರೂಪಾಯಿ ಮಾತ್ರ, ಅಂದರೆ ಇಡೀ ದಿನದ ಸಂಪಾದನೆ ಸುಮಾರು 300 ರೂಪಾಯಿ ಆಗಬಹುದು. ಇಷ್ಟು ಸಂಪಾದನೆಯಲ್ಲಿ ಜೀವನ ನಡೆಸುವುದು ಕಷ್ಟ ಅನಿಸುತ್ತದೆ. ನಾವು ತಿಂಗಳಿಗೆ 9,000 ರೂಪಾಯಿ ಗಳಿಸಿದರೂ, ವಾಹನದ ಪೆಟ್ರೋಲ್ ಖರ್ಚು, ರಿಪೇರಿ, ಇತ್ಯಾದಿಗೆ 3,500 ರೂಪಾಯಿ ಖರ್ಚಾದ ನಂತರ ನಮ್ಮ ಬಳಿ ಉಳಿಯುವುದು ತಿಂಗಳಿಗೆ 6,500 ರೂಪಾಯಿ ಮಾತ್ರ. ಈ ಹಣದಿಂದ ನಮ್ಮ ಇಡೀ ಕುಟುಂಬವನ್ನು ಸಾಕುವುದು ಹಾಗಿರಲಿ, ನಮ್ಮ ದಿನನಿತ್ಯದ ಊಟ–ತಿಂಡಿಗೂ ಇದು ಸಾಕಾಗುವುದಿಲ್ಲ." ಗಿಗ್ ಆರ್ಥಿಕತೆಯ ಅಮಾನವೀಯ ಶೋಷಣೆ ಹೇಗಿರುತ್ತದೆ ಎಂಬುದನ್ನು ಈ ಮಾತುಗಳೇ ಹೇಳುತ್ತಿವೆ.

### ಗಿಗ್ ನೌಕರರಿಗೆ ಇರುವ ಅಪಾಯಗಳು

ಇತ್ತೀಚೆಗೆ ಹೈದರಾಬಾದ್‌ನಲ್ಲಿ ನಡೆದ ಒಂದು ಘಟನೆಯು, ಝೊಮ್ಯಾಟೊ ಕಂಪನಿಯ ಮ್ಯಾನೇಜ್‌ಮೆಂಟ್‌ನ ವರ್ತನೆ ಹಾಗೂ ಗಿಗ್ ನೌಕರರ ಕೆಲಸದಲ್ಲಿನ ಅಪಾಯಗಳ ಮೇಲೆ ಬೆಳಕು ಚೆಲ್ಲಿದೆ. ಒಂದು ಆರ್ಡರ್ ಡೆಲಿವರಿ ಮಾಡಲು ಹೊರಟಿದ್ದ ಒಬ್ಬ ಡೆಲಿವರಿ ನೌಕರ, ಭಾರೀ ಮಳೆ ಸುರಿಯುತ್ತಿದ್ದಾಗ ಅಚಾನಕ್ಕಾಗಿ ಚರಂಡಿಗೆ ಬಿದ್ದರು. ಪ್ರವಾಹದ ನೀರಿನಲ್ಲಿ ಅವರ ಬೈಕ್ ಮತ್ತು ಮೊಬೈಲ್ ಫೋನ್ ಕೊಚ್ಚಿಕೊಂಡು ಹೋದವು. ಅದೃಷ್ಟವಶಾತ್, ಅವರ ಜೀವ ಉಳಿಯಿತು. ಆದರೆ ಝೊಮ್ಯಾಟೊ ಕಂಪನಿಯು ಆ ನೌಕರನ ಪುನರ್ವಸತಿಯ ಯಾವುದೇ ಜವಾಬ್ದಾರಿ ತೆಗೆದುಕೊಳ್ಳಲು ನಿರಾಕರಿಸಿತು. ಇದಕ್ಕೆ ಪ್ರತಿಕ್ರಿಯಿಸಿದ ತೆಲಂಗಾಣ ಗಿಗ್ ಮತ್ತು ಪ್ಲಾಟ್‌ಫಾರ್ಮ್ ವರ್ಕರ್ಸ್ ಯೂನಿಯನ್‌ನ ಸ್ಥಾಪಕ ಅಧ್ಯಕ್ಷರಾದ ಶೇಖ್ ಸಲಾವುದ್ದೀನ್ ಅವರು, "ಇದು ಒಂದು ಅಪಘಾತವಲ್ಲ – ಕೆಲಸಗಾರರ ಸುರಕ್ಷತೆಗಿಂತ ತಮ್ಮ ಲಾಭಕ್ಕೆ ಆದ್ಯತೆ ನೀಡುವ ಪ್ಲಾಟ್‌ಫಾರ್ಮ್‌ಗಳಿಂದ ಆಗುವ ನೇರ ಪರಿಣಾಮ" ಎಂದು ಹೇಳಿದರು. ಮತ್ತೊಂದು ಘಟನೆಯಲ್ಲಿ, ಒಬ್ಬ ಸ್ವಿಗ್ಗಿ ಡೆಲಿವರಿ ಹುಡುಗ ಅಪಾರ್ಟ್‌ಮೆಂಟ್‌ನಲ್ಲಿ ಡೆಲಿವರಿ ಮಾಡುವಾಗ ಸಾಕು ನಾಯಿಯು ಆತನ ಮೇಲೆ ದಾಳಿ ಮಾಡಿತು. ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ, ಆತನು ಮೂರನೇ ಮಹಡಿಯಿಂದ ಜಿಗಿದು ಆಸ್ಪತ್ರೆಯಲ್ಲಿ ಮರಣ ಹೊಂದಿದನು. ಈ ಸಂದರ್ಭದಲ್ಲಿ, ಆರ್ಡರ್ ಮಾಡಿದ್ದ ಗ್ರಾಹಕರು ನ್ಯಾಯಾಲಯದ ಹೊರಗೆ ಇತ್ಯರ್ಥ ಮಾಡಿಕೊಳ್ಳುವ ಸಲುವಾಗಿ 5 ಲಕ್ಷ ರೂಪಾಯಿ ಪರಿಹಾರ ಒದಗಿಸಿದರು, ಆದರೆ ಸ್ವಿಗ್ಗಿ ಕಂಪನಿಯು ನಯಾಪೈಸೆ ಪರಿಹಾರವನ್ನೂ ಪಾವತಿಸಲಿಲ್ಲ. ಇನ್ನು ನಮ್ಮ ಜನಪ್ರತಿನಿಧಿಗಳು, ಗಿಗ್ ಆರ್ಥಿಕತೆಯ ಬಂಪರ್ ಬೆಳವಣಿಗೆಯ ಬಗ್ಗೆ ಬೊಬ್ಬೆ ಹೊಡೆಯುತ್ತಾರೆಯೇ ಹೊರತು, ಈ ಬಡಪಾಯಿ ಕೆಲಸಗಾರರ ದುಃಖಗಳ ಕಡೆಗೆ ಗಮನವನ್ನೇ ಕೊಡುತ್ತಿಲ್ಲ.

### ಹೋರಾಟದ ಹಾದಿಯಲ್ಲಿ ಗಿಗ್ ನೌಕರರು!

ಆದರೆ ಸಮಾಧಾನಕರ ಸಂಗತಿ ಏನೆಂದರೆ, ಗಿಗ್ ನೌಕರರು ಕೈ ಕಟ್ಟಿ ಕೂತಿಲ್ಲ. ಅವರು ನಿಧಾನವಾಗಿ ಒಟ್ಟುಗೂಡುತ್ತಿದ್ದಾರೆ ಮತ್ತು ಹಲವಾರು ರಾಜ್ಯಗಳಲ್ಲಿ ತಮ್ಮ ಆಕ್ರೋಶದ ಧ್ವನಿ ಎತ್ತುತ್ತಿದ್ದಾರೆ. ಕರ್ನಾಟಕ, ತೆಲಂಗಾಣ, ಉತ್ತರ ಪ್ರದೇಶ ಮತ್ತು ಇತರ ರಾಜ್ಯಗಳಲ್ಲಿ, ಗಿಗ್ ಮತ್ತು ಡಿಜಿಟಲ್ ಪ್ಲಾಟ್‌ಫಾರ್ಮ್ ಕೆಲಸಗಾರರು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸುತ್ತಾ ಧರಣಿಗಳು, ಮುಷ್ಕರಗಳು ಮತ್ತು ಪ್ರತಿಭಟನೆಗಳನ್ನು ನಡೆಸಿದ್ದಾರೆ. ಕಳೆದ ಏಪ್ರಿಲ್‌ನಲ್ಲಿ, ಸುಮಾರು 150 ಬ್ಲಿಂಕಿಟ್ ಗಿಗ್ ನೌಕರರು ವಾರಣಾಸಿಯಲ್ಲಿ ನ್ಯಾಯಯುತ ವೇತನ, ಉತ್ತಮ ಕೆಲಸದ ಪರಿಸ್ಥಿತಿಗಳು ಮತ್ತು ಹತ್ತಿ ಸಮವಸ್ತ್ರಕ್ಕಾಗಿ ಮುಷ್ಕರ ನಡೆಸಿದರು. ಝೊಮ್ಯಾಟೊ ಮಾಲೀಕತ್ವದ ದಿನಸಿ ವಿತರಣಾ ಪ್ಲಾಟ್‌ಫಾರ್ಮ್ ಆಗಿರುವ ಈ ಬ್ಲಿಂಕಿಟ್‌ನ ಆಡಳಿತ ಮಂಡಳಿಯು ಈ ಮುಷ್ಕರವನ್ನು ಕಾರಣವಾಗಿ ನೀಡಿ, 150 ಕೆಲಸಗಾರರ ಐಡಿಗಳನ್ನು ಬ್ಲಾಕ್ ಮಾಡಿತು. ಮುಷ್ಕರನಿರತ ಕೆಲಸಗಾರರಿಗೆ ಪೊಲೀಸ್ ಕ್ರಮದ ಬೆದರಿಕೆಯನ್ನೂ ಹಾಕಿತು. ಆದರೆ, ನೌಕರರು ತಮ್ಮ ಬೇಡಿಕೆಗಳಲ್ಲಿ ರಾಜಿ ಮಾಡಿಕೊಳ್ಳಲಿಲ್ಲ. ಕೊನೆಯದಾಗಿ,

6ನೇ ಪುಟಕ್ಕೆ

## 130ನೇ ಸಂವಿಧಾನ ತಿದ್ದುಪಡಿ ಮಸೂದೆಯನ್ನು ತಕ್ಷಣವೇ ಹಿಂಪಡೆಯಿರಿ : ಎಸ್‌ಯುಸಿಐ(ಸಿ) ಆಗ್ರಹ!

### ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್ ನೀಡಿರುವ ಪತ್ರಿಕಾ ಹೇಳಿಕೆ:



"ಸಂಸತ್ತಿನಲ್ಲಿ ಮಂಡಿಸಲಾದ 130ನೇ ಸಂವಿಧಾನ ತಿದ್ದುಪಡಿ ಮಸೂದೆಯು, ಮುಖ್ಯಮಂತ್ರಿಗಳು ಮತ್ತು ಪ್ರಧಾನ ಮಂತ್ರಿ ಸೇರಿದಂತೆ ಯಾವುದೇ ಸಚಿವರನ್ನು ಐದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಜೈಲು ಶಿಕ್ಷೆಗೆ ಅರ್ಹವಾದ ಅಪರಾಧಕ್ಕಾಗಿ ಬಂಧಿಸಿ ಸತತ 30 ದಿನಗಳ ಕಾಲ ಕಸ್ಟಡಿಯಲ್ಲಿ ಇರಿಸಿದರೆ, ಅವರು ರಾಜೀನಾಮೆ ನೀಡಬೇಕು ಅಥವಾ ತಮ್ಮ ಹುದ್ದೆಯನ್ನು ಕಳೆದುಕೊಳ್ಳಬೇಕು ಎಂದು ಹೇಳುತ್ತದೆ. ಮೇಲ್ನೋಟಕ್ಕೆ, ಇದು ಭ್ರಷ್ಟಾಚಾರದ ವಿರುದ್ಧದ ಹೋರಾಟದಂತೆ ಕಾಣುತ್ತದೆ. ಆದರೆ ಈ ಪ್ರಸ್ತಾವಿತ ಶಾಸನದ ಹಿಂಬದಿಯ ಉದ್ದೇಶವೇನೆಂದರೆ, ಸಿಬಿಐ, ಇಡಿ ಮತ್ತು ಎನ್‌ಐಎ (NIA) ಗಳಂತಹ ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ಒಂದು ಅಸ್ತ್ರವಾಗಿ ಬಳಸಿ, ವಿರೋಧ ಪಕ್ಷಗಳ ಯಾವುದೇ ಸಚಿವರನ್ನು ಸಿಲುಕಿಸಲು ಕೇಂದ್ರದಲ್ಲಿ ಆಡಳಿತ ನಡೆಸುವ ಸಂಸ್ಥೆಗಳಿಗೆ ಅನಿಯಂತ್ರಿತ ಅಧಿಕಾರವನ್ನು ನೀಡುವುದಾಗಿದೆ.

ಸಂವಿಧಾನದ 'ಪ್ರಜಾ ಪ್ರತಿನಿಧಿ ಕಾಯ್ದೆ, 1951' ಅನ್ನು ಉಲ್ಲಂಘಿಸುವ ಮತ್ತು ಸುಸ್ಥಾಪಿತವಾದ 'ದೋಷ ಸಾಬೀತಾಗುವವರೆಗೆ ನಿರಪರಾಧಿ' ಎಂಬ ತತ್ವವನ್ನು ಬುಡಮೇಲು ಮಾಡುವ ಈ ಕಠಿಣ ಮಸೂದೆಯನ್ನು ನಾವು ಬಲವಾಗಿ ವಿರೋಧಿಸುತ್ತೇವೆ ಮತ್ತು ಈ ಶಾಸನವನ್ನು ಸಂಪೂರ್ಣವಾಗಿ ಹಿಂಪಡೆಯಬೇಕು ಎಂದು ಆಗ್ರಹಿಸುತ್ತೇವೆ."

## ಗಿಗ್ ಆರ್ಥಿಕತೆ

5ನೇ ಪುಟದಿಂದ ಸಾರ್ವಜನಿಕ ಒತ್ತಡ ಮತ್ತು ನೌಕರರ ಹೋರಾಟದ ಒಗ್ಗಟ್ಟಿಗೆ ಸೋಲೊಪ್ಪಿಕೊಂಡು, ಕಂಪನಿಯು ಅವರ ಐಡಿಗಳನ್ನು ಮತ್ತೆ ಸಕ್ರಿಯಗೊಳಿಸಬೇಕಾಯಿತು. ಅದೇ ರೀತಿ, ಮೇ 2025 ರಲ್ಲಿ, ಹೈದರಾಬಾದ್‌ನ ನೂರಾರು ಜೆಪ್ಟೋ ಡೆಲಿವರಿ ನೌಕರರು, ತೆಲಂಗಾಣ ಗಿಗ್ ಮತ್ತು ಪ್ಲಾಟ್‌ಫಾರ್ಮ್ ವರ್ಕರ್ಸ್ ಯೂನಿಯನ್ ನೇತೃತ್ವದಲ್ಲಿ, ಅನ್ಯಾಯಯುತ ವೇತನ ಮತ್ತು ಕಂಪನಿಯ ಶೋಷಣಾತ್ಮಕ ನಡವಳಿಕೆ ವಿರುದ್ಧ ಅನಿರ್ದಿಷ್ಟಾವಧಿ ಮುಷ್ಕರ ನಡೆಸಿದರು. ಕಾರ್ಮಿಕ ಇಲಾಖೆಗೆ ಸಲ್ಲಿಸಿದ ಮನವಿ ಪತ್ರದಲ್ಲಿ, "ಬೇಗ ಡೆಲಿವರಿ ಆದರೆ ಪ್ರತಿಫಲವಂತೆ, ಆದರೆ ಸುರಕ್ಷತೆ ಬಗ್ಗೆ ಚಿಂತೆ ಇಲ್ಲವಂತೆ" ಎಂದು ಆ ಯೂನಿಯನ್ ಆರೋಪಿಸಿತು. ಗ್ರಾಹಕರ ರೇಟಿಂಗ್‌ಗಳ ಆಧಾರದ ಮೇಲೆ ಏಕಪಕ್ಷೀಯ ದಂಡಗಳು, ಖಾತೆ ಅಮಾನತು ಮಾಡುವುದರಲ್ಲಿ ಪಾರದರ್ಶಕತೆಯ ಕೊರತೆ, ಇಎಸ್‌ಐ ಮತ್ತು ಪಿಎಫ್ ಕವರೇಜ್ ಇಲ್ಲದಿರುವುದು, ಮತ್ತು ದೀರ್ಘಾವಧಿಯ ಪಾಳಿಗಳಲ್ಲಿ ವಿಶ್ರಾಂತಿ ಕೊಠಡಿಗಳು ಇಲ್ಲದಿರುವುದು, ಇಂತಹ ಹಲವಾರು ನೋವುಗಳನ್ನು ಅವರು ತೋಡಿಕೊಂಡಿದ್ದಾರೆ.

ದೇಶದ ವಿವಿಧ ಭಾಗಗಳಲ್ಲಿ ಗಿಗ್ ನೌಕರರ ನಿರಂತರ ಹೋರಾಟದಿಂದಾಗಿ, ರಾಜಸ್ಥಾನ ಮತ್ತು ಕರ್ನಾಟಕದಂತಹ ರಾಜ್ಯ ಸರ್ಕಾರಗಳು ಗಿಗ್ ನೌಕರರಿಗೆ ಸಾಮಾಜಿಕ ಭದ್ರತೆ, ಔದ್ಯೋಗಿಕ ಆರೋಗ್ಯ ಮತ್ತು ಸುರಕ್ಷತೆ ಹಾಗೂ ವಿವಾದ ಪರಿಹಾರ ಕ್ರಮಗಳನ್ನು ಒದಗಿಸಲು ಕೆಲವು ಕಾನೂನುಗಳನ್ನು ಅಳವಡಿಸಿಕೊಂಡಿವೆ. ತೆಲಂಗಾಣ ರಾಜ್ಯ ಸರ್ಕಾರವು ವಿಧಾನಸಭೆಯಲ್ಲಿ ಮಂಡಿಸಲು ಒಂದು ಮಸೂದೆಯನ್ನು ಸಿದ್ಧಪಡಿಸಿದೆ. ಆದರೆ, ಈ ಎಲ್ಲಾ ಶಾಸನಗಳಲ್ಲಿರುವ ನಿಬಂಧನೆಗಳು ಕಾಗದದ ಮೇಲಷ್ಟೇ ಉಳಿದಿವೆ. ರಾಷ್ಟ್ರೀಯ ಶಾಸನಸಭೆ ಮಟ್ಟದಲ್ಲಿಯೂ, ಗಿಗ್ ನೌಕರರನ್ನು ಒಂದು ಪ್ರತ್ಯೇಕ ಪ್ರಕಾರದ ನೌಕರರೆಂದು ಭಾರತೀಯ ಸಾಮಾಜಿಕ ಭದ್ರತಾ ಸಂಹಿತೆ–2020 ಗುರುತಿಸುತ್ತದೆ, ಆದರೆ "ಪ್ಲಾಟ್‌ಫಾರ್ಮ್ ನೌಕರರು" "ಸಾಂಪ್ರದಾಯಿಕ ಉದ್ಯೋಗದಾತ–ಉದ್ಯೋಗಿ ಸಂಬಂಧದ ಹೊರಗಿನವರು" ಎಂದು ವ್ಯಾಖ್ಯಾನಿಸುತ್ತದೆ. ಕಾನೂನಾತ್ಮಕ ಆದೇಶಗಳು, ಸಾರ್ವತ್ರಿಕ ವ್ಯಾಪ್ತಿ ಮತ್ತು ಹೊಣೆಗಾರಿಕೆಯ ಕ್ರಮಗಳ ಕೊರತೆಯಿಂದಾಗಿ ಈ ಕಾನೂನು ಸಾಕಷ್ಟು ಟೀಕೆಗೆ ಒಳಗಾಗಿದೆ.

ಹಾಗಾಗಿ, ಗಿಗ್ ನೌಕರರ ಎಲ್ಲ ಸಮಸ್ಯೆಗಳು ಮತ್ತು ಸವಾಲುಗಳನ್ನು ಪರಿಹರಿಸಲು ಒಂದು ಬಲಿಷ್ಠ ಮತ್ತು ಸಮಗ್ರ ಶಾಸನವನ್ನು ತಕ್ಷಣವೇ ಜಾರಿಗೊಳಿಸಬೇಕಾಗಿರುವುದು ಅತ್ಯವಶ್ಯಕ. ಅದೇ ಸಮಯದಲ್ಲಿ, ಜನಸಾಮಾನ್ಯರಾದ ನಾವೆಲ್ಲರೂ ಗಿಗ್ ನೌಕರರ ಪರವಾಗಿ ನಿಲ್ಲುವುದು ನಮ್ಮ ಕರ್ತವ್ಯ. ಅವರ ಜೀವನದಲ್ಲಿ ನೂರೆಂಟು ಕಷ್ಟಗಳಿದ್ದರೂ, ಸುರಿಮಳೆ–ತೀವ್ರ ಚಳಿ–ಬಿರುಬಿಸಿಲು ಏನೇ ಇದ್ದರೂ, ಅವರು ನಮ್ಮ ಆರ್ಡರ್ ಡೆಲಿವರಿ ಮಾಡಲು ನಮ್ಮ ಮನೆಯ ಬಾಗಿಲು ಬಡಿಯುತ್ತಾರೆ. ಅಂತಿಮವಾಗಿ, ಗಿಗ್ ನೌಕರರು ತಮ್ಮ ನ್ಯಾಯಯುತ ಚಳುವಳಿಯಲ್ಲಿ ಯಶಸ್ಸು ಸಾಧಿಸಲು ಸರಿಯಾದ ಕ್ರಾಂತಿಕಾರಿ ನಾಯಕತ್ವದ ಅಡಿಯಲ್ಲಿ ತಮ್ಮ ಹೋರಾಟದ ಒಗ್ಗಟ್ಟನ್ನು ಇನ್ನಷ್ಟು ಗಟ್ಟಿಗೊಳಿಸಬೇಕು.

## ಮಹಿಳೆಯರ ಮೇಲಿನ ದೌರ್ಜನ್ಯ, ಅಶ್ಲೀಲತೆ, ಮದ್ಯಪಾನ ಹಾವಳಿ ವಿರುದ್ಧ ಎಐಎಂಎಸ್‌ಎಸ್‌ನಿಂದ ದೇಶವ್ಯಾಪಿ ಪ್ರತಿಭಟನಾ ಸಪ್ತಾಹ

# ರಾಜ್ಯಾದ್ಯಂತ ಹೋರಾಟದ ಕಣಕ್ಕಿಳಿದ ಮಹಿಳಾ ಸಮುದಾಯ

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ(ಎಐಎಂಎಸ್‌ಎಸ್)ಯು ಅಖಿಲ ಭಾರತ ಸಮಿತಿಯು ಸೆಪ್ಟೆಂಬರ್ 1ರಿಂದ – 7ರವರೆಗೆ ಮಹಿಳೆಯರ ಮೇಲಿನ ದೌರ್ಜನ್ಯ, ಅಶ್ಲೀಲತೆ, ಮದ್ಯಪಾನ ಹಾವಳಿಯ ವಿರುದ್ಧ ದೇಶವ್ಯಾಪಿ ಪ್ರತಿಭಟನಾ ಸಪ್ತಾಹಕ್ಕೆ ಕರೆ ನೀಡಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ದೌರ್ಜನ್ಯ, ಅಶ್ಲೀಲತೆ, ಮದ್ಯಪಾನದ ವಿರುದ್ಧ ಪ್ರತಿಭಟನಾ ಪ್ರದರ್ಶನ, ಘಟಕಗಳಲ್ಲಿ ಸಂವಾದ, ಮುಖ್ಯಮಂತ್ರಿಗಳಿಗೆ ಜಿಲ್ಲಾಧಿಕಾರಿಗಳ ಮುಖೇನ ಮನವಿ ಪತ್ರ ಸಲ್ಲಿಕೆ ಹೀಗೆ ಹಲವಾರು ಕಾರ್ಯಕ್ರಮಗಳನ್ನು










ಎಐಎಂಎಸ್‌ಎಸ್‌ನ ರಾಜ್ಯ ಹಾಗೂ ಹಲವಾರು ಜಿಲ್ಲಾ ಸಮಿತಿಗಳು ಆಯೋಜಿಸಿದ್ದವು.

### ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ

ಮಹಿಳೆಯರು ಮತ್ತು ಮಕ್ಕಳ ಮೇಲೆ ದೇಶಾದ್ಯಂತ ನಡೆಯುತ್ತಿರುವ ಘೋರ ಅತ್ಯಾಚಾರ, ಗುಂಪು ಅತ್ಯಾಚಾರ ಮತ್ತು ಕೊಲೆಗಳು ದಿನ ದಿನಕ್ಕೂ ವಿಕೃತ ರೂಪವನ್ನು ಪಡೆದುಕೊಳ್ಳುತ್ತಿವೆ. ಇಂತಹ ಪ್ರಕರಣಗಳ ವಿಚಾರಣೆ ತಾರ್ಕಿಕ ಹಂತಕ್ಕೆ ತಲುಪಿ ಪಾತಕಿಗಳಿಗೆ ಶಿಕ್ಷೆಯಾಗುವುದಕ್ಕೆ ದೀರ್ಘಕಾಲ ತೆಗೆದುಕೊಳ್ಳುವುದು, ಪ್ರಭಾವೀ ಆರೋಪಿಗಳು ಖುಲಾಸೆಯಾಗುವುದು, ಇದು ಸಾರ್ವಜನಿಕರಲ್ಲಿ ಆಕ್ರೋಶ ಮಡುಗಟ್ಟುವಂತೆ ಮಾಡಿದೆ.

ಇಂದಿನ ಸಾಮಾಜಿಕ ವಾತಾವರಣ ಸಂಪೂರ್ಣವಾಗಿ ಕಲುಷಿತಗೊಂಡಿದೆ. ಒಂದೆಡೆ, ಹಳೆಯ ಊಳಿಗಮಾನ್ಯ ವ್ಯವಸ್ಥೆಯ ಪುರುಷ ಪ್ರಧಾನ ಮೌಲ್ಯಗಳು ಇನ್ನೂ ಮುಂದುವರೆಯುತ್ತಿದ್ದು, ಇದು ಮಹಿಳೆಯರ ಮೇಲಿನ ದಬ್ಬಾಳಿಕೆಗೆ ಎಡೆ ಮಾಡಿಕೊಡುತ್ತಿದೆ. ಇದರ ಜೊತೆಗೆ ಬಂಡವಾಳಿಗರು, ತಮ್ಮ ಶೋಷಣೆಯ ವಿರುದ್ಧ ಯುವಜನತೆ ಸಿಡಿದೇಳದೆ ಇರಲಿ ಎಂಬ ಕಾರಣದಿಂದ ಅವರ ನೈತಿಕ ಬೆನ್ನೆಲುಬನ್ನು ಮುರಿಯುವ ಉದ್ದೇಶದಿಂದ ಪ್ರಸಾರ ಮಾಡುತ್ತಿರುವ, ಹೆಣ್ಣು ಭೋಗದ ವಸ್ತು ಎಂಬಂತೆ ಬಿತ್ತರಿಸುವ ಅಶ್ಲೀಲ ಸಿನಿಮಾ ಸಾಹಿತ್ಯ, ಜಾಹಿರಾತುಗಳು, ಪೋರ್ನ್ ವೆಬ್ ಸೈಟ್‌ಗಳು ಯುವಜನತೆಯನ್ನು ಲೈಂಗಿಕ ದಾಸ್ಯದೆಡೆಗೆ ನೂಕುತ್ತಿವೆ. ಸುಲಭವಾಗಿ ಲಭ್ಯವಿರುವ ಮದ್ಯ–ಮಾದಕ ವಸ್ತುಗಳು ಅವರನ್ನು ಅವುಗಳ ಚಟಕ್ಕೆ ಹಚ್ಚಿ, ಅವರಲ್ಲಿನ ವಿವೇಚನಾ ಶಕ್ತಿಯನ್ನು ಹರಣ ಮಾಡುತ್ತಿವೆ. ಇವುಗಳಿಗೆ ಬಲಿಬಿದ್ದ ಯುವಜನತೆ ತಮ್ಮ ನೈತಿಕತೆಯನ್ನು ಕಳೆದುಕೊಂಡು ಅಪರಾಧಗಳಲ್ಲಿ, ಅದರಲ್ಲೂ ಹೆಣ್ಣುಮಕ್ಕಳ ಮೇಲಿನ ಅಪರಾಧಗಳಲ್ಲಿ ತೊಡಗುವಂತಹ ಪರಿಸ್ಥಿತಿ ಉಂಟಾಗಿದೆ.

ಹೆಣ್ಣನ್ನು ಎರಡನೇ ದರ್ಜೆಯ ನಾಗರಿಕಳಾಗಿ ಕಾಣುತ್ತಿರುವ ಈ ಸಮಾಜದಲ್ಲಿ ಅವಳ ಜನ್ಮವನ್ನೇ ನಿರಾಕರಿಸುವಂತಹ ಸ್ತ್ರೀಭ್ರೂಣ ಹತ್ಯೆ ಅವ್ಯಾಹತವಾಗಿ ನಡೆಯುತ್ತಿದೆ. ಅವಳನ್ನು ಜ್ಞಾನ ನೀಡುವ ಶಿಕ್ಷಣದಿಂದ ವಂಚಿತಳನ್ನಾಗಿಸಿ ಎಳೆಯ ವಯಸ್ಸಿನಲ್ಲೇ ಮದುವೆ ಮಾಡುವ ಕಾನೂನುಬಾಹಿರ ಕೃತ್ಯಗಳು ನಡೆಯುತ್ತಿದ್ದು, ಸ್ವತ: ಇನ್ನೂ ತಮ್ಮ ಬಾಲ್ಯವನ್ನೇ ಕಳೆದಿರದ ಬಾಲಕಿಯರು ಮಕ್ಕಳಿಗೆ ಜನ್ಮ ನೀಡುವಂತಹ ಶೋಚನೀಯ ಪರಿಸ್ಥಿತಿ ಇದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸರ್ಕಾರವು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಎಐಎಂಎಸ್‌ಎಸ್ ರಾಜ್ಯ ಸಮಿತಿಯು ಒತ್ತಾಯಿಸಿತು; ವಿವಿಧ ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಈ ಕೆಳಕಂಡ ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರಗಳನ್ನು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಯಿತು.

**ಹಕ್ಕೊತ್ತಾಯಗಳು**

1. ಮಹಿಳೆಯರ ಮತ್ತು ಮಕ್ಕಳ ಭದ್ರತೆಗೆ ಸೂಕ್ತ ಕ್ರಮ ಕೈಗೊಳ್ಳಿ.
2. ಸ್ತ್ರೀಭ್ರೂಣ ಹತ್ಯೆ ಕಾಯ್ದೆಯನ್ನು (ಪಿಸಿ & ಪಿಎನ್‌ಡಿಟಿ) ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಿ.
3. ಅಶ್ಲೀಲ ಸಿನಿಮಾ – ಸಾಹಿತ್ಯ – ಪೋರ್ನ್, ಜಾಹಿರಾತುಗಳನ್ನು, ಮದ್ಯ – ಮಾದಕ ವಸ್ತುಗಳನ್ನು ನಿಷೇಧಿಸಿ.
4. ಬಾಲ್ಯ ವಿವಾಹ, ಅಪ್ರಾಪ್ತ ವಯಸ್ಸಿನಲ್ಲಿಯ ಗರ್ಭಧಾರಣೆ ತಡೆಗಟ್ಟಲು ಕಠಿಣ ಕ್ರಮ ಕೈಗೊಳ್ಳಿ.
5. ಮಹಿಳೆಯರ ಮತ್ತು ಮಕ್ಕಳ ಮಾನವ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಿ.
6. ಫಾಸ್ಟ್ ಟ್ರ್ಯಾಕ್ ನ್ಯಾಯಾಲಯಗಳ ಸಂಖ್ಯೆಗಳನ್ನು ಹೆಚ್ಚಿಸಿ, ಅವುಗಳ ಸರಿಯಾದ ಕಾರ್ಯನಿರ್ವಹಣೆಯನ್ನು ಖಾತ್ರಿಪಡಿಸಿ.
7. ಶಾಲಾ–ಕಾಲೇಜು ಮತ್ತು ಕಚೇರಿಗಳಲ್ಲಿ 'ನಮ್ಮ ಕ್ಲಿನಿಕ್' ಪ್ರಾರಂಭಿಸಿ.
8. ಸಾಮಾಜಿಕ ಮಾಧ್ಯಮಗಳಲ್ಲಿನ (ಶಾರ್ಟ್ಸ್, ರೀಲ್ಸ್, ಇನ್ಸ್ಟಾಗ್ರಾಮ್, ಇತ್ಯಾದಿ) ಅನುಚಿತ ವಿಷಯಗಳಿಗೆ ತಡೆಹಾಕಿ.
9. ಅತ್ಯಾಚಾರಿಗಳಿಗೆ ನಿದರ್ಶನೀಯ ಶಿಕ್ಷೆ ನೀಡಿ.
10. ಯುವತಿಯರಿಗಾಗಿ ಜೂಡೋ–ಕರಾಟೆಯಂತಹ ಆತ್ಮ ರಕ್ಷಣಾ ಕೋರ್ಸ್‌ಗಳನ್ನು ಶಾಲಾ–ಕಾಲೇಜುಗಳಲ್ಲಿ ಕಡ್ಡಾಯಗೊಳಿಸಿ.
11. ಆಂತರಿಕ ದೂರು ಸಮಿತಿಗಳನ್ನು (ICC) ಶಾಲೆ, ಕಾಲೇಜು ಹಾಗೂ ಉದ್ಯೋಗದ ಸ್ಥಳಗಳಲ್ಲಿ ಸ್ಥಾಪಿಸಿ, ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಿ.
12. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಿ.
13. ಶಿಕ್ಷಣ–ಆರೋಗ್ಯದ ವ್ಯಾಪಾರೀಕರಣವನ್ನು ತಡೆಗಟ್ಟಿ.
14. ಜಸ್ಟಿಸ್ ವರ್ಮಾ ಸಮಿತಿಯ ವರದಿಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಿ.

**ರಾಜಧಾನಿಯಲ್ಲಿ ಪ್ರತಿಭಟನೆ:**

**ಸೆಪ್ಟೆಂಬರ್ 1, 2025ರಂದು ಎಐಎಂಎಸ್‌ಎಸ್‌ನ ಕರ್ನಾಟಕ ರಾಜ್ಯಸಮಿತಿಯು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯದಾದ್ಯಂತದ ಪ್ರತಿಭಟನಾ ಸಪ್ತಾಹಕ್ಕೆ ಚಾಲನೆ ನೀಡಿತು. ಮುಖ್ಯ ಭಾಷಣಕಾರರಾಗಿ ಎಐಎಂಎಸ್‌ಎಸ್‌ನ ರಾಜ್ಯ ಕಾರ್ಯದರ್ಶಿಗಳಾದ ಕಾ. ಶೋಭಾ ಎಸ್. ಮಾತನಾಡುತ್ತಾ, "ಇಂದು ಹೆಣ್ಣು ಮಕ್ಕಳಿಗೆ ಸಮಾಜದಲ್ಲಿ ಯಾವುದೇ ಭದ್ರತೆಯು ಇಲ್ಲವಾಗಿದೆ. ಸ್ತ್ರೀಭ್ರೂಣ ಹತ್ಯೆ, ಬಾಲ್ಯ ವಿವಾಹ, ಮುಂತಾದ ಪ್ರಕರಣಗಳು ಹೆಚ್ಚಾಗುತ್ತಿವೆ, ಸರ್ಕಾರಗಳು ಹೆಣ್ಣುಮಕ್ಕಳ ಪರವಾಗಿ ಹಲವಾರು ಯೋಜನೆಗಳನ್ನು ತಂದು ಸ್ತ್ರೀ ಪರ ಎಂಬಂತೆ ಮೇಲ್ನೋಟಕ್ಕೆ ಪ್ರದರ್ಶಿಸುತ್ತಿವೆ. ವಾಸ್ತವದಲ್ಲಿ ಯಾವುದೇ ಕಾಳಜಿ ಇಲ್ಲದಿರುವುದಕ್ಕೆ ಇತ್ತೀಚೆಗೆ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಅಪರಾಧಗಳೇ ಸಾಕ್ಷಿಯಾಗಿವೆ. ರಾಜ್ಯದಲ್ಲಿ ಇಂದಿಗೂ ಕದ್ದು ಮುಚ್ಚಿ ನಡೆಯುತ್ತಿರುವ ಸ್ತ್ರೀಭ್ರೂಣ ಹತ್ಯೆಯ ಘಟನೆಗಳು ಸಮಾಜದಲ್ಲಿ ಇನ್ನೂ ಉಳಿದಿರುವ ಹಳೆಯ ಮಹಿಳಾ ವಿರೋಧಿ ಧೋರಣೆಗೆ ಕನ್ನಡಿ ಹಿಡಿಯುತ್ತವೆ. 2024–25ರ ಅವಧಿಯಲ್ಲಿ 700ಕ್ಕೂ ಹೆಚ್ಚು ಬಾಲ್ಯ ವಿವಾಹಗಳು ವರದಿಯಾಗಿದ್ದು, ಕಳೆದ ಮೂರು ವರ್ಷಗಳಲ್ಲಿ (2023–ಜುಲೈ 2025) 80,813 ಬಾಲ ಗರ್ಭಿಣಿ ಪ್ರಕರಣಗಳು (ಆರ್‌ಸಿಎಚ್ ಪೋರ್ಟಲ್) ಪತ್ತೆಯಾಗಿರುವುದು ಆತಂಕವನ್ನು ಮೂಡಿಸಿದೆ. ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಎಲ್ಲಾ ಮಹಿಳೆಯರು ಒಂದಾಗಿ ಹೋರಾಡುವುದೊಂದೇ ನಮ್ಮೆದುರಿಗಿರುವ ದಾರಿ" ಎಂದರು. ಪ್ರತಿಭಟನೆಯ ಅಧ್ಯಕ್ಷತೆಯನ್ನು ರಾಜ್ಯ ಸೆಕ್ರೆಟರಿಯೇಟ್ ಸದಸ್ಯರಾದ ಕಾ. ಮಧುಲತಾ ವಹಿಸಿಕೊಂಡಿದ್ದರು.**

## ಎಐಯುಟಿಯುಸಿ ಸಂಘಟಿತ ಅಖಿಲ ಭಾರತ ಕಾರ್ಮಿಕ ಪ್ರತಿಭಟನೆ :

# ಕಾರ್ಮಿಕ ಹಕ್ಕುಗಳ ಮೇಲಿನ ದಾಳಿಯನ್ನು ಹಿಮ್ಮೆಟ್ಟಿಸಲು ಬಲಿಷ್ಠ ಹೋರಾಟಕ್ಕೆ ಕರೆ!

ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ)ನ, ಅಖಿಲ ಭಾರತ ಸಮಿತಿಯು ಕೇಂದ್ರ ಬಿಜೆಪಿ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ 4 ಸೆಪ್ಟೆಂಬರ್, 2025 ರಂದು ನವದೆಹಲಿಯ ಜಂತರ್‌ಮಂತರ್‌ನಲ್ಲಿ 'ಅಖಿಲ ಭಾರತ ಕಾರ್ಮಿಕರ ಪ್ರತಿಭಟನೆ'ಯನ್ನು ಅತ್ಯಂತ ಯಶಸ್ವಿಯಾಗಿ ಸಂಘಟಿಸಿತು. ಉತ್ತರ ಭಾರತದ ರಾಜ್ಯಗಳಲ್ಲಿ ನಿರಂತರ ಮಳೆಯಿಂದಾಗಿ ಪ್ರವಾಹ ಪರಿಸ್ಥಿತಿ ಉಂಟಾದ ಸಂದರ್ಭದಲ್ಲಿಯೂ ವಿವಿಧ ವಲಯಗಳ ಬೃಹತ್ ಸಂಖ್ಯೆಯ ಕಾರ್ಮಿಕರು ಈ ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಈ ಪ್ರತಿಭಟನೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಎಐಯುಟಿಯುಸಿಯ ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ಕೆ. ರಾಧಾಕೃಷ್ಣ ಅವರು, 'ಪ್ರಪಂಚದಲ್ಲಿ ಬಂಡವಾಳಶಾಹಿ ವರ್ಗವು ಮೊದಮೊದಲು ಅಧಿಕಾರಕ್ಕೆ ಬಂದಾಗ ಪ್ರಜಾಪ್ರಭುತ್ವದ ಆಶಯ–ಮೌಲ್ಯಗಳನ್ನು ಎತ್ತಿಹಿಡಿದಿತ್ತು. ಕಾಲಾಂತರದಲ್ಲಿ ಸಾಮ್ರಾಜ್ಯಶಾಹಿ ಧೋರಣೆ ತಳೆದ ಈ ವ್ಯವಸ್ಥೆ ತಾನೇ ಎತ್ತಿಹಿಡಿದ ಮೌಲ್ಯಗಳನ್ನು ಹೊಸಕಿ ಹಾಕಲು ಪ್ರಾರಂಭಿಸಿತು. ಆದರೆ ಈ ಪ್ರಯತ್ನಕ್ಕೆ ತಡೆಗೋಡೆಯಾಗಿ ಕಾರ್ಮಿಕ ವರ್ಗದ ನಾಯಕತ್ವದಲ್ಲಿದ್ದ ಬಲಿಷ್ಠ ಸಮಾಜವಾದಿ ರಷ್ಯಾ ಅಸ್ತಿತ್ವದಲ್ಲಿತ್ತು. ಆದರೆ ಸೋವಿಯತ್ ರಷ್ಯಾದ ಪತನದ ನಂತರ ಈ ಬಂಡವಾಳಶಾಹಿ–ಸಾಮ್ರಾಜ್ಯಶಾಹಿ ದೇಶಗಳು ತಮ್ಮದೇ ನಾಗರಿಕರ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿವೆ. ಅಷ್ಟೇ ಅಲ್ಲದೇ ಬೇರೆ ದೇಶಗಳ ಮೇಲೆ ಕ್ರೂರ ದಾಳಿ ನಡೆಸುತ್ತಿವೆ. ಭಾರತ ಕೂಡ ಇದಕ್ಕೆ ಹೊರತಾಗಿಲ್ಲ. ಒಂದೆಡೆ ಲಾಭಕೋರ ಅದಾನಿ, ಅಂಬಾನಿ, ಟಾಟಾ, ಬಿರ್ಲಾಗಳಂತಹ ಬಂಡವಾಳಶಾಹಿ ವರ್ಗದ ಕೃಪೆಯಿಂದ ಅಧಿಕಾರಕ್ಕೆ ಬರುವ ಕೇಂದ್ರ–ರಾಜ್ಯ ಸರ್ಕಾರಗಳು ಪ್ರಜಾಪ್ರಭುತ್ವದ ಮೂಲಭೂತ ನೀತಿ–ಮೌಲ್ಯಗಳನ್ನೇ ಗಾಳಿಗೆ ತೂರಿ, ನಾಗರಿಕ ಹಕ್ಕುಗಳ ಮೇಲೆ ಫ್ಯಾಸಿಸ್ಟ್ ದಾಳಿ ನಡೆಸುತ್ತಿವೆ. ಇದೀಗ ಚುನಾವಣಾ ಆಯೋಗವು ಎಸ್‌ಐಆರ್ ಮೂಲಕ ಜನತೆಯ ನಾಗರಿಕ ಹಕ್ಕುಗಳನ್ನೇ ಕಿತ್ತುಕೊಳ್ಳಲು ಹೊರಟಿದೆ. ಇದರಿಂದ ಬುಡಕಟ್ಟು ಜನತೆ, ವಲಸೆ ಕಾರ್ಮಿಕರು, ಅಲ್ಪಸಂಖ್ಯಾತರು, ಮಹಿಳೆಯರೂ ಸೇರಿದಂತೆ ಜನಸಂಖ್ಯೆಯ ಬಹುದೊಡ್ಡ ಭಾಗವು ಪೌರತ್ವದ ಹಕ್ಕನ್ನು ಕಳೆದುಕೊಂಡು ತನ್ನ ತಾಯ್ನೆಲದಲ್ಲಿಯೇ ಅನಾಥರೂ–ನಿರಾಶ್ರಿತರೂ ಆಗುವ ಭೀತಿಯಲ್ಲಿದ್ದಾರೆ. ಮತ್ತೊಂದೆಡೆ ಕಾರ್ಮಿಕ ಹಕ್ಕುಗಳ ಮೇಲಿನ ದಾಳಿಯು ಎಂದಿಗಿಂತಲೂ ಇದೀಗ ದಮನಕಾರಿ ಸ್ವರೂಪ ಪಡೆದುಕೊಂಡಿದೆ. ಬಂಡವಾಳಶಾಹಿಗಳು ಅಪರಿಮಿತ ಲಾಭಗಳಿಸಲು ಅನುಕೂಲವಾಗುವಂತೆ ಕಾರ್ಮಿಕರ ಹಕ್ಕುಗಳನ್ನೇ ನಾಶಮಾಡಿ ಶೋಷಣೆಯನ್ನು ನೂರು ಪಟ್ಟು ಹೆಚ್ಚಿಸಲಾಗುತ್ತಿದೆ. ತ್ಯಾಗ ಬಲಿದಾನಗಳಿಂದ ಪಡೆದ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಿ ಹಲ್ಲಿಲ್ಲದ ಹಾವಿನಂತಿರುವ 4 ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತರಲಾಗುತ್ತಿದೆ' ಎಂದರು.

ಮುಂದುವರೆದು ಮಾತನಾಡಿದ ಅವರು, 'ಭಾರತದ ಕಾರ್ಮಿಕ ವರ್ಗವು ಈ ಎಲ್ಲ ಸಮಸ್ಯೆಗಳಿಗೆ ಮೂಲ ಕಾರಣವಾದ, ಶೋಷಣೆಯೇ ಆಧಾರವಾಗಿಸಿಕೊಂಡಿರುವ ಬಂಡವಾಳಶಾಹಿ ವ್ಯವಸ್ಥೆಯನ್ನೇ ಬದಲಾವಣೆ ಮಾಡುವ ಹೋರಾಟಕ್ಕೆ ಮುಂದಡಿ ಇಡಬೇಕಾಗಿದೆ. ನಮ್ಮ ಯೂನಿಯನ್‌ನ ಮಾಜಿ ಅಧ್ಯಕ್ಷರು, ಓರ್ವ ಮಾರ್ಕ್ಸ್‌ವಾದಿ ಚಿಂತಕರೂ, ಕಾರ್ಮಿಕ ವರ್ಗದ ಮಹಾನ್ ನಾಯಕರೂ ಆದ ಕಾಮ್ರೇಡ್ ಶಿವದಾಸ್ ಘೋಷ್ ಅವರು ಹೇಳಿದಂತೆ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಚಳುವಳಿಗಳನ್ನು ಕಟ್ಟುತ್ತಲೇ ಶೋಷಣಾರಹಿತ, ಸಮಾಜವಾದಿ ಭಾರತವನ್ನು ಕಟ್ಟುವ ನಿಟ್ಟಿನಲ್ಲಿ ಹೋರಾಟ ಕೈಗೆತ್ತಿಕೊಳ್ಳಬೇಕು. ಮಾನವನಿಂದ ಮಾನವನ ಶೋಷಣೆ ಇಲ್ಲದ ಸಮಾಜವನ್ನು ರೂಪಿಸಲು ರಾಜಿರಹಿತ ಹೋರಾಟ ಬೆಳೆಸಲು ಮುಂದೆ ಬರಬೇಕು' ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಶಂಕರದಾಸ್‌ಗುಪ್ತ ಅವರು ಮಾತನಾಡಿ, ಇಂದು ಕಾರ್ಮಿಕ ಹಕ್ಕುಗಳ ಮೇಲಿನ ದಾಳಿಯನ್ನು ಎದುರಿಸಲು ವೈಚಾರಿಕವಾಗಿ, ಸಂಘಟನಾತ್ಮಕವಾಗಿ ಸಜ್ಜಾಗಬೇಕಾಗಿದೆ. ಎಐಯುಟಿಯುಸಿ ಈ ನೆಲದ ಏಕೈಕ ನೈಜ ಕ್ರಾಂತಿಕಾರಿ ವೈಚಾರಿಕತೆಯನ್ನು ಹೊಂದಿರುವ ಸಂಘಟನೆಯಾಗಿದ್ದು, ಕಾರ್ಮಿಕರ ಅಸ್ತ್ರವಾದ ಸಂಘಟನೆಯನ್ನು ಬಲಪಡಿಸಲು ಎಲ್ಲ ಹಂತಗಳಲ್ಲೂ ಕಾರ್ಮಿಕರು ಜವಾಬ್ದಾರಿ ತೆಗೆದುಕೊಳ್ಳಬೇಕು ಎಂದು ಕರೆ ನೀಡಿದರು.



ಎಐಯುಟಿಯುಸಿಯ ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ಕೆ. ರಾಧಾಕೃಷ್ಣ

ಅಖಿಲ ಭಾರತ ಉಪಾಧ್ಯಕ್ಷರು ಹಾಗೂ ಕರ್ನಾಟಕದ ರಾಜ್ಯಾಧ್ಯಕ್ಷರಾದ ಕಾಮ್ರೇಡ್ ಕೆ.ಸೋಮಶೇಖರ್ ಅವರೂ ಸಹ ಮಾತನಾಡಿ, ಇಂದು ಗುತ್ತಿಗೆ ಪದ್ಧತಿ ಸರ್ವವ್ಯಾಪಿಯಾಗಿದೆ. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಸುಪ್ರೀಂ ಕೋರ್ಟ್ ಹೇಳಿದ್ದರೂ ಸಮಾನ ವೇತನ ಮರೀಚಿಕೆಯಾಗಿದೆ. ಇಎಸ್‌ಐ–ಪಿಎಫ್‌ಗಳ ವೇತನ ಮಿತಿಯನ್ನು ಹೆಚ್ಚಿಸಬೇಕಿದೆ. ಗಿಗ್ ಮತ್ತು ಪ್ಲಾಟ್‌ಫಾರ್ಮ್ ಕಾರ್ಮಿಕರು ತೀವ್ರ ಶೋಷಣೆಗೆ ಒಳಗಾಗುತ್ತಿದ್ದಾರೆ. 40 ಕೋಟಿಯಷ್ಟಿರುವ ದೇಶದ ಪ್ರತಿಯೊಬ್ಬ ಯುವಕರಿಗೂ ಉದ್ಯೋಗ ನೀಡಬೇಕು ಅಥವಾ ನಿರುದ್ಯೋಗ ಭತ್ಯೆ ನೀಡಬೇಕು. ಇದಕ್ಕಾಗಿ ಕೆಲಸದ ಹಕ್ಕನ್ನು ಸಾಂವಿಧಾನಿಕ ಹಕ್ಕಾಗಿ ಘೋಷಿಸುವ ಹೋರಾಟ ಕಟ್ಟಬೇಕಿದೆ. ಕರ್ನಾಟಕದಲ್ಲಿ 40,000 ಆಶಾ ಕಾರ್ಯಕರ್ತೆಯರು ಕನಿಷ್ಠ 15,000 ಪ್ರೋತ್ಸಾಹ ಧನಕ್ಕಾಗಿ ಆಗ್ರಹಿಸಿ ಕಳೆದ ಜನವರಿಯಲ್ಲಿ ಬೃಹತ್ ಹೋರಾಟ ಕಟ್ಟಿದ್ದರು. ಆ ಸಂದರ್ಭದಲ್ಲಿ ಕನಿಷ್ಠ 10,000 ಪ್ರೋತ್ಸಾಹ ಧನ ನಿಗದಿ ಮಾಡುವುದಾಗಿ ಮಾತು ಕೊಟ್ಟಿದ್ದ ಸರ್ಕಾರ ಮುಂದಿನ ದಿನಗಳಲ್ಲಿ ಕೊಟ್ಟ ಮಾತನ್ನು ನಡೆಸದೇ ಹೋದಾಗ ಮೂರು ದಿನಗಳ ಕಾಲ ಹಗಲು ರಾತ್ರಿ ಹೋರಾಟ ಕಟ್ಟಿದ್ದು ಅಭೂತಪೂರ್ವ ಇತಿಹಾಸ. ಈ ಅಖಿಲ ಭಾರತ ಪ್ರತಿಭಟನೆಯು ರಾಜಿರಹಿತ ಹೋರಾಟ ಕಟ್ಟಲು ಕಾರ್ಮಿಕರಲ್ಲಿ ನವಚೈತನ್ಯ ತುಂಬಲಿ ಎಂದು ಆಶಿಸಿದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಅಖಿಲ ಭಾರತ ಉಪಾಧ್ಯಕ್ಷರಾದ ಕಾಮ್ರೇಡ್ ಸ್ವಪನ್ ಘೋಷ್, ಕಾಮ್ರೇಡ್ ಅರುಣ್ ಕುಮಾರ್ ಸಿಂಗ್, ಖಜಾಂಚಿಗಳಾದ ಕಾಮ್ರೇಡ್ ದೀಪಕ್ ದೇವ್ ಅವರು ಮಾತನಾಡಿದರು. ಕರ್ನಾಟಕ ರಾಜ್ಯ ಕಾರ್ಯದರ್ಶಿಗಳೂ, ಅಖಿಲ ಭಾರತ ಸಮಿತಿ ಸೆಕ್ರೆಟರಿಯೇಟ್ ಸದಸ್ಯರೂ ಆದ ಕಾಮ್ರೇಡ್ ಕೆ.ಸೋಮಶೇಖರ ಯಾದಗಿರಿ ಅವರೂ ಸೇರಿದಂತೆ ಇತರೆ ರಾಜ್ಯಗಳ ಅಖಿಲ ಭಾರತ ನಾಯಕರು ವೇದಿಕೆ ಮೇಲಿದ್ದರು.

ನಂತರ ಮನವಿ ಪತ್ರವನ್ನು ಕೇಂದ್ರದ ಕಾರ್ಮಿಕ ಮತ್ತು ಉದ್ಯೋಗ ಖಾತೆ ಸಚಿವರಿಗೆ ನೀಡಲಾಯಿತು. ಮುಗಿಲು ಮುಟ್ಟುವ ಘೋಷಣೆಗಳನ್ನು ಕೂಗುವ ಮೂಲಕ ಪ್ರತಿಭಟನೆ ಕೊನೆಗೊಳಿಸಲಾಯಿತು.

# ಎಐಡಿಎಸ್‌ಓ ನೇತೃತ್ವದಲ್ಲಿ ನಡೆದ ವಿದ್ಯಾರ್ಥಿಗಳ ಹೋರಾಟಕ್ಕೆ ಜಯ!

## ಅತಿಥಿ ಉಪನ್ಯಾಸಕರ ನೇಮಕಾತಿಗೆ ಅಸ್ತು; ಶೈಕ್ಷಣಿಕ ಅವಧಿ ವಿಸ್ತರಣೆ

ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ರಾಜ್ಯ ಸರ್ಕಾರದ ವಿಳಂಬ ನೀತಿಯಿಂದಾಗಿ ಕರ್ನಾಟಕದ ಸರ್ಕಾರಿ ಪದವಿ ವಿದ್ಯಾರ್ಥಿಗಳು ಅಪಾರ ಅನ್ಯಾಯಕ್ಕೆ ಒಳಗಾಗಿದ್ದರು. ಕರ್ನಾಟಕದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಶೇ. 80ಕ್ಕೂ ಅಧಿಕ ಬೋಧನಾ ಕಾರ್ಯವನ್ನು ಅತಿಥಿ ಉಪನ್ಯಾಸಕರೇ ನಿರ್ವಹಿಸುತ್ತಾರೆ. ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣ ಮತ್ತು ಯುಜಿಸಿ ನಿಯಮಾವಳಿಗಳನ್ನು ಉಲ್ಲೇಖಿಸಿ ರಾಜ್ಯ ಸರ್ಕಾರವು ಈ ಮಹತ್ವದ ನೇಮಕಾತಿಯನ್ನು ಪದೇ ಪದೇ ಮುಂದೂಡಿತ್ತು.

### ಸಾರ್ವಜನಿಕ ಶಿಕ್ಷಣದಲ್ಲಿ ಬಿಕ್ಕಟ್ಟು

ಈ ವಿಳಂಬವು ವಿದ್ಯಾರ್ಥಿಗಳ ನಡುವೆ ತೀವ್ರ ತಾರತಮ್ಯದ ಪರಿಸ್ಥಿತಿಯನ್ನು ಸೃಷ್ಟಿಸಿತು. ಖಾಸಗಿ ಪದವಿ ಕಾಲೇಜುಗಳಲ್ಲಿ ಪಠ್ಯಕ್ರಮ ಮುಕ್ತಾಯದ ಹಂತ ತಲುಪಿ ಸೆಮಿಸ್ಟರ್ ಪರೀಕ್ಷೆಗಳಿಗೆ ಸಿದ್ಧತೆ ನಡೆದಿತ್ತು. ಆದರೆ, ಸರ್ಕಾರಿ ಪದವಿ ಕಾಲೇಜುಗಳ ಬಹುಪಾಲು ವಿದ್ಯಾರ್ಥಿಗಳಿಗೆ ತರಗತಿಗಳು ಪ್ರಾರಂಭವಾಗಿ ಎರಡು ತಿಂಗಳಾಗಿದ್ದರೂ ಬಹುತೇಕ ವಿಷಯಗಳಿಗೆ ಒಂದು ತರಗತಿಯೂ ನಡೆದಿರಲಿಲ್ಲ.

ಈ ಬಿಕ್ಕಟ್ಟು ಕರ್ನಾಟಕದಾದ್ಯಂತ ವಿದ್ಯಾರ್ಥಿ ಪ್ರತಿಭಟನೆಗಳ ಬೃಹತ್ ಸ್ಫೋಟಕ್ಕೆ ಕಾರಣವಾಯಿತು.

### ಬಲಗೊಂಡ ಹೋರಾಟ

ಎಐಡಿಎಸ್‌ಓ ಕರ್ನಾಟಕ ರಾಜ್ಯ ಸಮಿತಿಯ ನೇತೃತ್ವದಲ್ಲಿ ನಡೆದ ಈ ಹೋರಾಟವು ಹಲವು ಹಂತಗಳಲ್ಲಿ ಬೆಳೆಯಿತು. ಒಂದು ತಿಂಗಳ ಹಿಂದೆ, ಕರ್ನಾಟಕದ 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಬೃಹತ್ ಪ್ರತಿಭಟನೆಗಳನ್ನು ನಡೆಸಲಾಯಿತು. ಈ ಪ್ರತಿಭಟನೆಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಹಕ್ಕಿಗಾಗಿ ಧ್ವನಿಯೆತ್ತಿ ಬೀದಿಗಿಳಿದರು. ಸರ್ಕಾರವು ಸಮಸ್ಯೆ ಬಗೆಹರಿಸದಿದ್ದಾಗ, ಹೋರಾಟದ ಮುಂದಿನ ಹಂತವಾಗಿ, ಸೆಪ್ಟೆಂಬರ್ 27ರಂದು ಎಐಡಿಎಸ್‌ಓ ರಾಜ್ಯವ್ಯಾಪಿ ತರಗತಿ ಬಹಿಷ್ಕಾರಕ್ಕೆ ಕರೆ ನೀಡಿತು. ಇದು ಅಪಾರ ಯಶಸ್ಸನ್ನು ಸಾಧಿಸಿತು, ಒಂದು ಲಕ್ಷಕ್ಕೂ ಅಧಿಕ ಸರ್ಕಾರಿ ಪದವಿ ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ತಮ್ಮ ತರಗತಿಗಳನ್ನು ಬಹಿಷ್ಕರಿಸಿದರು. ವಿದ್ಯಾರ್ಥಿಗಳ ಈ ನ್ಯಾಯಯುತ ಹೋರಾಟಕ್ಕೆ ಇಡೀ ಬೋಧಕ ಸಮುದಾಯವು ಅಚಲ ಬೆಂಬಲವನ್ನು ನೀಡಿತು.

### ಪರೀಕ್ಷೆಗಳ ಘೋಷಣೆಯಿಂದ ತೀವ್ರಗೊಂಡ ಆಕ್ರೋಶ:

ಸರ್ಕಾರಿ ಕಾಲೇಜು ವಿದ್ಯಾರ್ಥಿಗಳು ತರಗತಿಗಳಿಂದ ವಂಚಿತರಾಗಿರುವುದು ತಿಳಿದಿದ್ದರೂ ಕೂಡ, ರಾಜ್ಯದ ಹಲವು ಸರ್ಕಾರಿ ವಿಶ್ವವಿದ್ಯಾಲಯಗಳು ಸೆಮಿಸ್ಟರ್ ಪರೀಕ್ಷೆಗಳನ್ನು ಘೋಷಿಸಿದವು. ಇದು ಹೋರಾಟ ಮುಂದುವರಿದು ತೀವ್ರಗೊಳ್ಳಲು ಕಾರಣವಾಯಿತು.

ಆದರಿಂದ ಸೆಪ್ಟೆಂಬರ್ 29 ರಿಂದ ಅನಿರ್ದಿಷ್ಟಾವಧಿ ತರಗತಿ ಬಹಿಷ್ಕಾರದ ನಿರ್ಧಾರ ಕೈಗೊಳ್ಳಲಾಯಿತು.

### ಹೋರಾಟಕ್ಕೆ ಮಣಿದ ಸರ್ಕಾರ

ಸೆಪ್ಟೆಂಬರ್ 29ರಂದು ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ತುರ್ತು ಸಭೆಯ ನಂತರ, ಸರ್ಕಾರವು ಕ್ರಮ ತೆಗೆದುಕೊಳ್ಳಬೇಕಾಯಿತು. ಈ ಸೆಮಿಸ್ಟರ್‌ನಲ್ಲಿ ತರಗತಿಗಳನ್ನು ಪೂರ್ಣಗೊಳಿಸಲು ಹಿಂದಿನ ವರ್ಷದ ಅತಿಥಿ ಉಪನ್ಯಾಸಕರ ನೇಮಕಾತಿಯನ್ನೇ ಮುಂದುವರಿಸುವುದಾಗಿ ರಾಜ್ಯ ಸರ್ಕಾರವು ಘೋಷಿಸಿತು. ಮೂಲ ಕಾನೂನು ಸಮಸ್ಯೆ ಇನ್ನೂ ನ್ಯಾಯಾಲಯದ ಮುಂದಿದ್ದರೂ, ವಿದ್ಯಾರ್ಥಿಗಳ ನಿರಂತರ ಮತ್ತು ಅವಿಶ್ರಾಂತ ಹೋರಾಟದಿಂದಾಗಿ ರಾಜ್ಯ ಸರ್ಕಾರವು ಈ ಕ್ರಮವನ್ನು ಕೈಗೊಳ್ಳಲು ಒತ್ತಾಯಿಸಲ್ಪಟ್ಟಿತು. ಸೆಪ್ಟೆಂಬರ್ 30ರಂದು ಇನ್ನೊಂದು ಆದೇಶ ಹೊರಡಿಸಿರುವ ಉನ್ನತ ಶಿಕ್ಷಣ ಇಲಾಖೆಯ ಎಲ್ಲಾ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಅವಧಿಯನ್ನು ಒಂದು ತಿಂಗಳು ವಿಸ್ತರಿಸಿದೆ. ಜಿಲ್ಲಾ ಕೇಂದ್ರಗಳು ಮತ್ತು ಕಾಲೇಜು ಆವರಣಗಳಲ್ಲಿ ಒಂದು ತಿಂಗಳಿಗೂ ಹೆಚ್ಚು ಕಾಲ ನಡೆದ ನಿರಂತರ ಹೋರಾಟದ ಮೂಲಕ ಸಾಧಿಸಿದ ಈ ವಿಜಯವು, ಎಐಡಿಎಸ್‌ಓ ರಾಜ್ಯ ಸಮಿತಿಯ ನಾಯಕತ್ವದಲ್ಲಿ ಕರ್ನಾಟಕದ ವಿದ್ಯಾರ್ಥಿಗಳು ಸಾಧಿಸಿದ ಮಹತ್ವದ ವಿಜಯವಾಗಿದೆ.




ಕರ್ನಾಟಕದ ಇಡೀ ಶಿಕ್ಷಣಪ್ರೇಮಿ ಸಮುದಾಯವು ಈ ಚಳುವಳಿಯನ್ನು ಮನಃಪೂರ್ವಕವಾಗಿ ಬೆಂಬಲಿಸಿತು, ಇದು 'ಸಾರ್ವಜನಿಕ ಶಿಕ್ಷಣವನ್ನು ಉಳಿಸಿ' ಎಂಬ ಮಹತ್ವದ ಕರೆಯನ್ನು ಬಲಪಡಿಸಿತು ಮತ್ತು ಸಾರ್ವಜನಿಕ ಸಂಸ್ಥೆಗಳ ವಿದ್ಯಾರ್ಥಿಗಳ ಬಗೆಗಿನ ತನ್ನ ಜವಾಬ್ದಾರಿಗೆ ಸರ್ಕಾರವು ಬದ್ಧವಾಗಿರಬೇಕು ಎಂಬುದನ್ನು ಮರುಸ್ಥಾಪಿಸಿತು.

# ಮಹಾನ್ ಮಾನವತಾವಾದಿ ಸಾಹಿತಿ ಶರತ್‌ಚಂದ್ರ ಚಟರ್ಜಿಯವರ

## 149ನೇ ಜನ್ಮ ವಾರ್ಷಿಕ ಆಚರಣೆ – ಎಐಎಂಎಸ್‌ಎಸ್

ಎಐಎಂಎಸ್‌ಎಸ್ ರಾಜ್ಯ ಸಮಿತಿಯು ಮಹಾನ್ ಮಾನವತಾವಾದಿ ಸಾಹಿತಿ ಶರತ್‌ಚಂದ್ರ ಚಟರ್ಜಿಯವರ 149ನೇ ಜನ್ಮ ವಾರ್ಷಿಕೋತ್ಸವವನ್ನು ರಾಜ್ಯದಾದ್ಯಂತ ಆಚರಿಸುತ್ತಿದೆ. ಇದರ ಭಾಗವಾಗಿ ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್‌ರವರಿಂದ ರಚನೆಯಾದ 'ಶರತ್‌ಚಂದ್ರ ಚಟ್ಟೋಪಾಧ್ಯಾಯರ ಕೃತಿಗಳ ಅಧ್ಯಯನ ಇಂದಿಗೂ ಏಕೆ ಪ್ರಸ್ತುತ' ಎಂಬ ಪುಸ್ತಕದ ಕುರಿತು ಒಂದು ದಿನದ ಅಧ್ಯಯನ ತರಗತಿಯನ್ನು ಬೆಂಗಳೂರಿನ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಆವರಣದಲ್ಲಿ ಹಮ್ಮಿಕೊಂಡಿತ್ತು.

ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾದ ಕಾಮ್ರೇಡ್ ಕೆ. ರಾಧಾಕೃಷ್ಣ ಅವರು ಈ ಅಧ್ಯಯನ ತರಗತಿಯನ್ನು ನಡೆಸಿಕೊಟ್ಟರು. ಅವರು ಮಾತನಾಡುತ್ತಾ, "ಇವತ್ತಿನ ಸಂದರ್ಭದಲ್ಲಿ ಈ ಪುಸ್ತಕದ ಕುರಿತಾದ ಚರ್ಚೆ ತುಂಬಾ ಸೂಕ್ತ ಮತ್ತು ಸಮಂಜಸವಾಗಿದೆ. ಶರತ್‌ಚಂದ್ರರ ಸಾಹಿತ್ಯ ಇಂದಿಗೂ ಏಕೆ ಪ್ರಸ್ತುತ ಎನ್ನುವ ಮುಖ್ಯ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಮೊದಲು ನಮ್ಮ ಸಮಾಜದ ಇಂದಿನ ಪರಿಸ್ಥಿತಿಯನ್ನು ನಾವು ಅರ್ಥ ಮಾಡಿಕೊಳ್ಳೋಣ. ನಮ್ಮ ಸಮಾಜದಲ್ಲಿ ಏಕಕಾಲಕ್ಕೆ ಮೂರು ರೀತಿಯ ವಿಚಾರಧಾರೆಗಳಿವೆ. ಮೊದಲನೆಯದು ಊಳಿಗಮಾನ್ಯ ವ್ಯವಸ್ಥೆಯ ದೇವರು ಮತ್ತು ಧಾರ್ಮಿಕ ವಿಚಾರಗಳು, ಎರಡನೆಯದು ಬಂಡವಾಳಶಾಹಿ ವ್ಯವಸ್ಥೆಯ ಧರ್ಮನಿರಪೇಕ್ಷ ಮಾನವತಾವಾದ, ಮೂರನೆಯದು ಕಾರ್ಮಿಕ ವರ್ಗದ ಕಮ್ಯುನಿಸ್ಟ್ ವಿಚಾರಧಾರೆ. ಊಳಿಗಮಾನ್ಯ ವ್ಯವಸ್ಥೆ ಕೊನೆಯಾಗಿದ್ದರೂ ಅದರ ವಿಚಾರಗಳಿಗೆ ನಮ್ಮ ದೇಶದ ಆಳ್ವಿಕರು ಜೀವ ತುಂಬುತ್ತಾ ಅವುಗಳನ್ನು ಅವಶೇಷಗಳಾಗಿ ಉಳಿಸಿಕೊಂಡು ಬರುತ್ತಿದ್ದಾರೆ. ಹಾಗಾಗಿ ಇಂದಿಗೂ ಕೂಡ ಧಾರ್ಮಿಕ ವಿಚಾರಗಳ ಪ್ರಭಾವ ಸಮಾಜದಲ್ಲಿ ಪ್ರಬಲವಾಗಿದೆ. ಇಂತಹ ಹಳೆಯ ವಿಚಾರಗಳು ಹಾಗೂ ಸಂಪ್ರದಾಯವಾದದ ವಿರುದ್ಧ ಹೋರಾಡಿ ಮಾನವತಾವಾದದ ವಿಚಾರಗಳನ್ನು ಎತ್ತಿ ಹಿಡಿದವರು ಮಹಾನ್ ಸಾಹಿತಿ ಶರತ್‌ಚಂದ್ರ ಚಟರ್ಜಿ. ಅವರ ಕಥೆ, ಕಾದಂಬರಿಗಳು ವ್ಯವಸ್ಥೆಯ ಬಲಿಪಶುಗಳಾದ ಮಹಿಳೆಯರ, ಶೋಷಿತ ಜನತೆಯ ಧ್ವನಿಯಾಗಿವೆ. ಅವರು ತಮ್ಮ ಸಾಹಿತ್ಯದಲ್ಲಿ ಗಂಭೀರವಾದ, ಕ್ಲಿಷ್ಟಕರವಾದ, ಸಂಕೀರ್ಣ ವಿಷಯಗಳನ್ನು ಅತ್ಯಂತ ಸರಳವಾದ, ಸುಲಲಿತವಾದ ಪದಗಳ ಮೂಲಕ ವ್ಯಕ್ತಪಡಿಸುತ್ತಾ ಓದುಗರಲ್ಲಿ ಆಳವಾದ ಭಾವನೆಯನ್ನು ಉಂಟುಮಾಡುತ್ತಾರೆ. ಇದನ್ನೇ ರಸ ಸೃಷ್ಟಿ ಎನ್ನುತ್ತೇವೆ.

ನಮ್ಮ ನಾಯಕರದ ಕಾಮ್ರೇಡ್ ಶಿವದಾಸ್ ಘೋಷ್‌ರವರು ತೋರಿಸಿಕೊಟ್ಟಂತೆ ವಿಜ್ಞಾನದಿಂದ ನಮಗೆ ಸತ್ಯ ತಿಳಿಯುತ್ತದೆ. ಆದರೆ ಸತ್ಯವನ್ನು ಸಾಬೀತು ಮಾಡಲು ಕಲೆ ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕಲಾತ್ಮಕ ಶೈಲಿ, ಕೌಶಲ್ಯ ಹಾಗೂ ಸೌಂದರ್ಯಾಭಿರುಚಿಗಳಿಗೆ ಸಂಬಂಧಿಸಿದಂತೆ ಶರತ್‌ಚಂದ್ರರ ಕಥೆ, ಕಾದಂಬರಿಗಳು ವಿಶ್ವ ಸಾಹಿತ್ಯದಲ್ಲಿಯೇ ಅನುಪಮೇಯವಾಗಿದ್ದು, ಅತ್ಯುತ್ತಮವಾಗಿವೆ. ಅವರು ತಮ್ಮ ತಾತ್ವಿಕ ದೃಷ್ಟಿಕೋನದಲ್ಲಿ ಬಹುತೇಕವಾಗಿ ವಸ್ತುವಾದಿಯಾಗಿದ್ದರು.

ನಮ್ಮ ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಧಾರ್ಮಿಕ ವಿಚಾರಗಳ ವಿರುದ್ಧ ರಾಜಿರಹಿತ ಹೋರಾಟ ಮಾಡಿದ್ದು ಈಶ್ವರಚಂದ್ರ ವಿದ್ಯಾಸಾಗರ್‌ರವರು. ವೇದ, ಸಾಂಖ್ಯ, ಉಪನಿಷತ್ತುಗಳಲ್ಲಿ ಸತ್ಯವನ್ನು ಕಾಣಲು ಸಾಧ್ಯವಿಲ್ಲ; ಹಾಗಾಗಿ ಸತ್ಯಾನ್ವೇಷಣೆ, ವೈಜ್ಞಾನಿಕ ಮನೋಧರ್ಮ, ವಿಚಾರಶೀಲತೆಯುಳ್ಳ ಯುವ ಪೀಳಿಗೆ ಬೆಳೆಯಲು ವಿಜ್ಞಾನ, ಗಣಿತ, ಇಂಗ್ಲಿಷ್ ನಮ್ಮ ದೇಶಕ್ಕೆ ಅವಶ್ಯಕ ಎಂದು ಘೋಷಿಸಿದರು. ಅವರ ಈ ಹೋರಾಟವನ್ನು ತಮ್ಮ ಸಾಹಿತ್ಯದ ಮೂಲಕ ಶರತ್‌ಚಂದ್ರ ಚಟರ್ಜಿ, ರಾಜಕೀಯವಾಗಿ ಭಗತ್ ಸಿಂಗ್ ಮತ್ತು ನೇತಾಜಿ ಮುಂದುವರೆಸಿದರು. ವಿದ್ಯಾಸಾಗರರು ಬ್ರಿಟಿಷ್ ಸರ್ಕಾರದ ಮೇಲೆ ಒತ್ತಡ ಹೇರಿ ವಿಧವಾ ವಿವಾಹದ ಕಾನೂನನ್ನು ಅನುಷ್ಠಾನಕ್ಕೆ ತಂದಿದ್ದರೂ, ಶರತ್‌ಚಂದ್ರ ಚಟರ್ಜಿ ಅವರು ತಮ್ಮ ಕಾದಂಬರಿಗಳಲ್ಲಿ ಏಕೆ ವಿಧವೆಯರ ವಿವಾಹವನ್ನು ಮಾಡಿಸಲಿಲ್ಲ ಎಂಬ ಪ್ರಶ್ನೆ ಬರುತ್ತದೆ. ಹಿಂದೂ ಧರ್ಮದ ಪ್ರಕಾರ ಹೆಣ್ಣಿಗೆ ಗಂಡ ಬದುಕಿರುವವರೆಗೆ ಮಾತ್ರ ಬೆಲೆ. ವಿಧವೆಯಾದ ಮೇಲೆ ಅವಳ ವ್ಯಕ್ತಿತ್ವಕ್ಕೆ ಯಾವುದೇ ಬೆಲೆ ಇಲ್ಲ. ಕೇವಲ ಭಾರತ ಮಾತ್ರವಲ್ಲ ಇಡೀ ಪ್ರಪಂಚದಲ್ಲಿ ನಾಗರಿಕತೆ ಬಂದಾಗಿನಿಂದ ಹೆಣ್ಣು ಮಕ್ಕಳಿಗೆ ಸಿಕ್ಕಿದ್ದು ಎರಡನೇ ದರ್ಜೆ ಸ್ಥಾನಮಾನವೇ. ಈಗ ವಿಜ್ಞಾನ ಬೆಳೆದಿದೆ, ಸಮಾಜದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾಗಿದೆ. ಆದರೆ ನಮ್ಮ ದೇಶದಲ್ಲಿ ಸಾಂಸ್ಕೃತಿಕ ಕ್ರಾಂತಿಯಾಗದ ಕಾರಣ ಆ ಹೊಸ ಪರಿಕಲ್ಪನೆಗಳು ಮತ್ತು ಕಾನೂನುಗಳು ಕೇವಲ ಬಾಯಿ ಮಾತಾಗಿ ಉಳಿದಿವೆ. ಹೀಗಾಗಿ ಭಾವನೆಗಳಲ್ಲಿ ಬದಲಾವಣೆ ಬರದ ಹೊರತು ಕೇವಲ ಕಾನೂನುಗಳು ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯವಿಲ್ಲ ಎಂಬುದು ಶರತ್‌ಚಂದ್ರರ ಅಭಿಪ್ರಾಯವಾಗಿತ್ತು. ಹಾಗಾಗಿ ಅವರು ತಮ್ಮ ಕಾದಂಬರಿ 'ಹಳ್ಳಿಯ ಸಮಾಜ'ದಲ್ಲಿ ಉನ್ನತ ವ್ಯಕ್ತಿತ್ವ ಹೊಂದಿರುವ ವಿಧವೆ ರಮಾ ಮತ್ತು ರಮೇಶರ ನಡುವೆ ಒಂದು ಸೂಕ್ಷ್ಮವಾದ ಪ್ರೀತಿಯ ಭಾವನೆಯನ್ನು ಬೆಳೆಸುತ್ತಾ ಹೋಗುತ್ತಾರೆ. ಆದರೆ ಕೊನೆಯಲ್ಲಿ ಮದುವೆ ಮಾಡಿಸುವುದಿಲ್ಲ. ಓದುಗರಲ್ಲಿ ಅವರಿಬ್ಬರೂ ಒಂದಾಗಬೇಕಿತ್ತು ಎಂಬ ಆಳವಾದ ತಳಮಳ, ತುಡಿತವನ್ನು ಉಂಟು ಮಾಡುತ್ತಾರೆ. ಈ ರೀತಿ ಓದುಗರ ಮನಸ್ಸಿನಲ್ಲಿ ಬದಲಾವಣೆ ತರುವ ಸಾಮಾಜಿಕ–ಸಾಂಸ್ಕೃತಿಕ ಕ್ರಾಂತಿಯೇ ಶರತ್ ಸಾಹಿತ್ಯದ ಆಶಯ ಮತ್ತು ಉದ್ದೇಶ.

ಮದುವೆಯನ್ನು ಹಳೆಯ ಧಾರ್ಮಿಕ ವಿಧಿ ವಿಧಾನಗಳ ಪ್ರಕಾರ ನೋಡುವುದರ ವಿರುದ್ಧ ಹೋರಾಡಿದ ಶರತ್‌ಚಂದ್ರರು, ಮದುವೆ ಎಂದರೆ ಎರಡು ಮನಸ್ಸುಗಳ ಮಿಲನ; ಅದೂ ಕೂಡ ಉನ್ನತ ನೀತಿ, ಸಂಸ್ಕೃತಿಯ ಆಧಾರದ ಮೇಲೆ ಎನ್ನುವುದನ್ನು ಎತ್ತಿ ಹಿಡಿಯುತ್ತಾರೆ. ವಿದ್ಯಾಸಾಗರರ ಆಶಯವು ಇದೇ ಆಗಿತ್ತು. ಜೊತೆಗೆ ಹೆಣ್ಣಿಗೆ ಸತೀತ್ವ ಅಥವಾ ಪಾತಿವ್ರತ್ಯವೇ ಜೀವನದ ಪರಮ ಗುರಿ ಎನ್ನುವ ಹಳೆಯ ವಿಚಾರದ ವಿರುದ್ಧ ನಾರೀತ್ವದ ಪರಿಕಲ್ಪನೆಯನ್ನು ತಂದರು. ಹೆಣ್ಣು ಮಕ್ಕಳಿಗೂ ಕೂಡ ಒಂದು ಮನಸ್ಸು, ವ್ಯಕ್ತಿತ್ವವಿದೆ; ಅವರೂ ಕೂಡ ಸಮಾಜಕ್ಕೆ ಕೊಡುಗೆ ನೀಡಬಲ್ಲರು ಎಂಬ ನಾರೀತ್ವದ ಪರಿಕಲ್ಪನೆಯ ಆಧಾರದ ಮೇಲೆ ತಮ್ಮ 'ಶೇಷಪ್ರಶ್ನೆ' ಕಾದಂಬರಿಯಲ್ಲಿ ಕಮಲೆಯನ್ನು ಒಬ್ಬ ಪರಿಪೂರ್ಣ ಮಹಿಳೆಯಾಗಿ ಸೃಷ್ಟಿಸಿದ್ದಾರೆ. ಒಂದೆಡೆ ಸಂಕೀರ್ಣವಾದ ತತ್ವಶಾಸ್ತ್ರದ ಸಿದ್ಧಾಂತಗಳನ್ನು ಚರ್ಚಿಸುತ್ತಾ ಅದೇ ಸಂದರ್ಭದಲ್ಲಿ ಸಾಹಿತ್ಯಿಕ ಸೌಂದರ್ಯವನ್ನು ಉಳಿಸಿಕೊಳ್ಳುವ ಇಂತಹ ಕಾದಂಬರಿಯು ಪ್ರಾಯಶಃ ವಿಶ್ವ ಸಾಹಿತ್ಯದಲ್ಲೇ ಇಲ್ಲ. ಕಮಲೆ ಔಪಚಾರಿಕ ಶಿಕ್ಷಣದಿಂದ ವಂಚಿತಳಾಗಿದ್ದರೂ ಸಾಕಷ್ಟು ಶಿಕ್ಷಿತಳು, ವಿಚಾರಶೀಲಳೂ, ವಸ್ತುವಾದಿಯೂ ಆಗಿದ್ದು ವೈಜ್ಞಾನಿಕ ಚಿಂತನಾ ಪ್ರಕ್ರಿಯೆಯಲ್ಲಿ ನಂಬಿಕೆ ಇರಿಸಿದ್ದಾಳೆ. ಆಳವಾದ ಆತ್ಮಗೌರವವನ್ನು ಹೊಂದಿರುವ ಅವಳಿಗೆ ಸಂಪ್ರದಾಯವಾದದಲ್ಲಿ ಮತ್ತು ಪರಮ ಸತ್ಯದಲ್ಲಿ ನಂಬಿಕೆ ಇಲ್ಲ. ಹಳೆಯ ವಿಚಾರಗಳ ವಿರುದ್ಧ ರಾಜಿ ಇಲ್ಲದೆ ಹೋರಾಡುವ ಕಮಲೆಯನ್ನು ಹೊಸಯುಗದ ಪ್ರತಿನಿಧಿಯಾಗಿ ಮಹಿಳಾ ಸಮಯದಾಯದ ಮುಂದಿಟ್ಟಿದ್ದಾರೆ ಶರತ್‌ಚಂದ್ರರು.




ಮಾತನಾಡುತ್ತಿರುವವರು: ಕಾ. ಕೆ.ರಾಧಾಕೃಷ್ಣ. ವೇದಿಕೆಯಲ್ಲಿ ಎಡದಿಂದ: ಸೀಮಾ, ಶೋಭಾ ಎಸ್., ಎಮ್. ಎನ್. ಮಂಜುಳ, ಡಾ. ಸುಧಾ ಕಾಮತ್, ಹರಿಣಿ ಆಚಾರ್ಯ

ನಮ್ಮ ದೇಶದ ಅಂದಿನ ಕ್ರಾಂತಿಕಾರಿ ಚಳುವಳಿಗೆ ಸರಿಯಾದ ಧೋರಣೆಯನ್ನು ಪರಿಚಯಿಸಲು ಶರತ್‌ಚಂದ್ರರು 'ಪಥೇರ್ ದಾಬಿ' (ಹಾದಿಯ ಆಗ್ರಹ) ಎಂಬ ಕಾದಂಬರಿಯನ್ನು ಬರೆದರು. ಕ್ರಾಂತಿಕಾರಿ ಚಳುವಳಿ ಧಾರ್ಮಿಕ ಪ್ರಭಾವಗಳಿಂದ ಮುಕ್ತವಾಗಿರದ ಕಾರಣ ಮಹಿಳೆಯರೂ ಕ್ರಾಂತಿಕಾರಿಗಳಾಗಬಹುದು ಎಂಬುದನ್ನು ಬಹುತೇಕರು ಒಪ್ಪಲಿಲ್ಲ. ಈ ಕಾದಂಬರಿಯಲ್ಲಿ ಸುಮಿತ್ರ ಎಂಬ ಪಾತ್ರವನ್ನು ಸೃಷ್ಟಿಸುವುದರ ಮೂಲಕ ಪ್ರಥಮ ಬಾರಿಗೆ ಕ್ರಾಂತಿಕಾರಿ ಮಹಿಳೆಯ ಚಾರಿತ್ರ್ಯ ಹೇಗಿರಬೇಕು ಎಂಬುದನ್ನು ತೋರಿಸಿಕೊಟ್ಟರು. ಜೊತೆಗೆ ಅದೇ ಕಾದಂಬರಿಯಲ್ಲಿ ಬರುವ ಸವ್ಯಸಾಚಿ ಪಾತ್ರ ಇಂದಿಗೂ ಕ್ರಾಂತಿಕಾರಿಗಳಿಗೆ ಆದರ್ಶವಾಗಿದೆ.

ಕೊಳೆತ ವಿಚಾರಗಳು ತುಂಬಿರುವ ಸಮಾಜದಲ್ಲಿ ಯಾವುದೋ ಕಾರಣಕ್ಕೆ ವೇಶ್ಯಾವೃತ್ತಿಗೆ ತಳ್ಳಲ್ಪಟ್ಟ ಮಹಿಳೆಯರ ಬಗ್ಗೆ ಶರತ್‌ಚಂದ್ರರು ನೋವನ್ನು ವ್ಯಕ್ತಪಡಿಸುತ್ತಾ ತಮ್ಮ ಕಾದಂಬರಿಗಳಲ್ಲಿ ವೇಶ್ಯೆಯರಲ್ಲೂ ಕೂಡ ಮೌಲ್ಯಗಳಿವೆ; ಅವರೂ ಕೂಡ ಸರಿಯಾದ ಅವಕಾಶಗಳು ಸಿಕ್ಕರೆ ಬದಲಾಗುತ್ತಾರೆ ಎಂಬುದನ್ನು ತೋರಿಸಿದ್ದಾರೆ. 'ದೇವದಾಸ' ಕಾದಂಬರಿಯ ಚಂದ್ರಮುಖಿ ಪಾತ್ರ ಇದಕ್ಕೆ ಉದಾಹರಣೆ.

ಒಟ್ಟಾರೆಯಾಗಿ ನೈತಿಕ ಮೌಲ್ಯಗಳು ಕಣ್ಮರೆಯಾಗುತ್ತಿರುವ ಇವತ್ತಿನ ಸಂದರ್ಭದಲ್ಲಿ ಅವರ ಸಾಹಿತ್ಯ ಕೃಷಿಯ ಅವಶ್ಯಕತೆ ನಮ್ಮ ಮುಂದಿದೆ. ಇವತ್ತಿಗೂ ಅವರ ಕಥೆ, ಕಾದಂಬರಿಗಳ ಸಂದೇಶ ಪ್ರಸ್ತುತವಾಗಿದೆ. ಸಾಂಸ್ಕೃತಿಕ ಬಿಕ್ಕಟ್ಟು ತೀವ್ರವಾಗಿರುವ ಹಿನ್ನೆಲೆಯಲ್ಲಿ ಇಂದು ವಿದ್ಯಾರ್ಥಿ, ಯುವಕರು ಜೀವನ ಮೌಲ್ಯಗಳ ಕೊರತೆಯಿಂದ ಬಳಲುತ್ತಿದ್ದಾರೆ. ಮಹಿಳೆಯರ ನೈಜ ಘನತೆ–ಗೌರವ ತಾತ್ಸಾರಕ್ಕೆ ಒಳಪಟ್ಟಿವೆ. ನೈಜ ಪ್ರಜಾತಾಂತ್ರಿಕ ಮೌಲ್ಯಗಳು ಸಮಾಜದಲ್ಲಿ ಸ್ಥಾಪಿತವಾಗಿಲ್ಲ. ಹಳೆಯ ಮೌಲ್ಯಗಳನ್ನು ಬುಡಸಮೇತ ಕಿತ್ತೊಗೆದು, ಹೊಸ ವಿಚಾರ, ನೀತಿ–ನೈತಿಕ ಮೌಲ್ಯಗಳನ್ನು ಎತ್ತಿಹಿಡಿಯಬೇಕೆಂದರೆ ಶರತ್ ಸಾಹಿತ್ಯ ಒಂದು ಅಸ್ತ್ರವಾಗಿದೆ. ನಿಸ್ವಾರ್ಥ ಮಾತೃತ್ವ, ವಿಧವಾ ವಿವಾಹ, ನಾರೀತ್ವದ ಪರಿಕಲ್ಪನೆ, ಮೌಲ್ಯಾಧಾರಿತ ಪ್ರೀತಿ–ವಿವಾಹ, ಕ್ರಾಂತಿಕಾರಿ ಚಳುವಳಿಯಲ್ಲಿ ಮಹಿಳೆಯರ ಪಾತ್ರ, ಕ್ರೂರ ಬಂಡವಾಳಶಾಹಿ ವ್ಯವಸ್ಥೆಯ ಶೋಷಣೆಯ ಕುರಿತಾಗಿ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಪಥೇರ್ ದಾಬಿ, ಶೇಷಪ್ರಶ್ನೆ, ದೇವದಾಸ, ಚರಿತ್ರಹೀನ, ಹೆಣ್ಣಿನ ಸ್ಥಾನಮಾನ ಮೊದಲಾದವು ಅವರ ಅದ್ಭುತ ಕೃತಿಗಳಾಗಿವೆ. ಭಾರತದ ಬಹುತೇಕ ಪ್ರಾಂತೀಯ ಹಾಗೂ ಅನೇಕ ವಿದೇಶಿ ಭಾಷೆಗಳಿಗೂ ಅವು ಅನುವಾದಿತವಾಗಿವೆ. ಅಷ್ಟೇ ಅಲ್ಲ ಅವುಗಳು ಆ ನೆಲದ ಭಾವನೆಗಳ ಪ್ರತೀಕವಾಗಿವೆ. ಶರತ್‌ಚಂದ್ರರು ವಸ್ತುವಾದಿ ಹಾಗೂ ಧರ್ಮನಿರಪೇಕ್ಷ ಮಾನವತಾವಾದಿಯಾಗಿದ್ದರು. ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ರಾಜಿರಹಿತ ಪಂಥದ ಪ್ರತಿನಿಧಿಯಾಗಿದ್ದರು. ಜೀವನದ ಸೂಕ್ಷ್ಮ ಅಂಶಗಳ ಕುರಿತು ವೈಜ್ಞಾನಿಕ ದೃಷ್ಟಿಕೋನದಿಂದ ಸರಿಯಾದ ಪರಿಕಲ್ಪನೆ ನೀಡಿದವರು. ಪ್ರತಿಯೊಬ್ಬರೂ ಅವರ ಸಾಹಿತ್ಯವನ್ನು ಓದುವ ಅಭ್ಯಾಸವನ್ನು ರೂಢಿಸಿಕೊಳ್ಳಿ" ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಐಎಂಎಸ್‌ಎಸ್‌ನ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ಎಂ.ಎನ್. ಮಂಜುಳಾ ಮಾತನಾಡುತ್ತಾ "ಇಂದಿಗೂ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವ ಮಹಿಳೆಯರಿಗೆ ಜೀವನದ ಸವಾಲುಗಳನ್ನು ಎದುರಿಸಲು ಸ್ಪಷ್ಟ ಪರಿಕಲ್ಪನೆಗಳು ಬೇಕೆಂದರೆ ಶರತ್ ಸಾಹಿತ್ಯದ ಅಧ್ಯಯನ ಅವಶ್ಯಕ. ಈ ಚರ್ಚೆಯು ಆ ಕೆಲಸವನ್ನು ಮಾಡಲು ಸ್ಫೂರ್ತಿ ನೀಡಿದೆ" ಎಂದರು.

ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಎಐಎಂಎಸ್‌ಎಸ್‌ನ ಅಖಿಲ ಭಾರತ ಉಪಾಧ್ಯಕ್ಷರಲ್ಲಿ ಒಬ್ಬರಾದ ಡಾ. ಸುಧಾ ಕಾಮತ್, ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಶೋಭಾ ಎಸ್., ರಾಜ್ಯ ಉಪಾಧ್ಯಕ್ಷರುಗಳಾದ ಕಾಮ್ರೇಡ್ ಸೀಮಾ, ಕಾಮ್ರೇಡ್ ಹರಿಣಿ ಆಚಾರ್ಯ ಉಪಸ್ಥಿತರಿದ್ದರು.

ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು.

# ಕರ್ನಾಟಕದಲ್ಲಿ ವಿದೇಶಿ ವಿವಿ ಸ್ಥಾಪನೆ

## - ರಾಜ್ಯದ ಉನ್ನತ ಶಿಕ್ಷಣದ ಸಂಪೂರ್ಣ ವ್ಯಾಪಾರೀಕರಣ!

**ಎಐಡಿಎಸ್‌ಓ ಹೇಳಿಕೆ**

ಇತ್ತೀಚೆಗೆ ಲಂಡನ್ ಪ್ರವಾಸ ಕೈಗೊಂಡ ಕರ್ನಾಟಕ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಸಚಿವರು ರಾಜ್ಯದಲ್ಲಿ ವಿದೇಶಿ ವಿಶ್ವವಿದ್ಯಾಲಯಗಳಿಗೆ ಅವಕಾಶ ಕಲ್ಪಿಸುವುದಾಗಿ ಮತ್ತು ಇದರಿಂದ ರಾಜ್ಯದ ಶೈಕ್ಷಣಿಕ ಗುಣಮಟ್ಟ ವೃದ್ಧಿಸುವುದು ಎಂದು ಹೇಳಿದ್ದಾರೆ. ರಾಜ್ಯ ಸರ್ಕಾರಿ ವಿಶ್ವವಿದ್ಯಾಲಯಗಳು ಅಧ್ಯಾಪಕರು ಹಾಗೂ ಮೂಲಭೂತ ಸೌಕರ್ಯಗಳ ಕೊರತೆಯನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಸರ್ಕಾರದ ಈ ನಡೆಯು ಹಾಸ್ಯಾಸ್ಪದವಾಗಿದೆ. ಸರ್ಕಾರದ ಈ ನಡೆಯನ್ನು ಎಐಡಿಎಸ್‌ಓ ತೀವ್ರವಾಗಿ ಖಂಡಿಸುತ್ತದೆ.

ಪ್ರಸ್ತುತ ಸರ್ಕಾರಿ ಶುಲ್ಕಗಳನ್ನು ಭರಿಸಲು ಸಾಧ್ಯವಾಗದೆ ಗಣನೀಯ ಪ್ರಮಾಣದ ಬಡ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ದೂರ ತಳ್ಳಲ್ಪಡುತ್ತಿದ್ದಾರೆ. ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸಲು ಕರ್ನಾಟಕ ಸರ್ಕಾರವು ನೇಮಿಸಿದ್ದ ಎಸ್‌ಇಪಿ ಆಯೋಗವು ಕೂಡ ವಿದೇಶಿ ವಿಶ್ವವಿದ್ಯಾಲಯಗಳಿಗೆ ಅವಕಾಶ ನೀಡಬಾರದು ಎಂದು ತನ್ನ ವರದಿಯಲ್ಲಿ ತಿಳಿಸಿದೆ. ಆದ್ದಾಗ್ಯೂ ಸರ್ಕಾರವು ತನ್ನ ಅಜೆಂಡಾದೊಂದಿಗೆ ಮುಂದುವರೆಯುತ್ತಿರುವಾಗ, ಎಸ್‌ಇಪಿ ನಿಯೋಗವನ್ನು ಏಕೆ ರಚಿಸಲಾಯಿತು ಎಂಬ ಪ್ರಶ್ನೆ ಉದ್ಭವಿಸುತ್ತದೆ. ರಾಜ್ಯ ಸರ್ಕಾರವು ವಿದೇಶಿ ವಿಶ್ವವಿದ್ಯಾಲಯಗಳಿಗೆ ಮಣೆ ಹಾಕಿರುವುದು ನಾಡಿನ ಜನತೆಗೆ ಮಾಡುತ್ತಿರುವ ನಂಬಿಕೆದ್ರೋಹವಾಗಿದೆ. ಇದು ಶಿಕ್ಷಣದಲ್ಲಿ ಅನಾರೋಗ್ಯಕರ ಸ್ಪರ್ಧೆ ಮತ್ತು ಶಿಕ್ಷಣದ ಸಂಪೂರ್ಣ ವ್ಯಾಪಾರೀಕರಣಕ್ಕೆ ದಾರಿ ಮಾಡುತ್ತದೆ.

ಸರ್ಕಾರವು ವಿದೇಶಿ ವಿಶ್ವವಿದ್ಯಾಲಯಗಳಿಗೆ ಅವಕಾಶ ಕಲ್ಪಿಸುವ ತನ್ನ ನಿರ್ಧಾರವನ್ನು ಕೂಡಲೇ ಕೈಬಿಡಬೇಕು ಮತ್ತು ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು ಹಾಗೂ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಕರ್ನಾಟಕ ರಾಜ್ಯ ಸರ್ಕಾರವನ್ನು ಎಐಡಿಎಸ್‌ಓ ಆಗ್ರಹಿಸುತ್ತದೆ.

# ಬಂಗಾಲಿ ಭಾಷೆಯನ್ನಾಡುವ ಮುಸ್ಲಿಂ ವಲಸೆಗಾರರ ಮೇಲಿನ ಆಕ್ರಮಣ

## ಬಂಡವಾಳಶಾಹಿಗಳ ಷಡ್ಯಂತ್ರ

ಇತ್ತೀಚಿನ ದಿನಗಳಲ್ಲಿ ಒಡಿಶಾ, ಛತ್ತೀಸ್‌ಘರ್, ಮಹಾರಾಷ್ಟ್ರ, ದೆಹಲಿ, ಗುಜರಾತ್, ಮಧ್ಯಪ್ರದೇಶ ಮುಂತಾದೆಡೆಗಳಲ್ಲಿ ಬಂಗಾಲಿ ಮಾತೃಭಾಷೆಯ, ಭಾರತೀಯ ಮುಸ್ಲಿಂ ವಲಸೆಗಾರರನ್ನು ಬಾಂಗ್ಲಾ ದೇಶದಿಂದ ಬಂದಂತಹ ನುಸುಳುಕೋರರೆಂದು ಆಪಾದಿಸಿ ಅವರ ಮೇಲೆ ಅತ್ಯಂತ ಹೀನಾಯ ದೌರ್ಜನ್ಯಗಳನ್ನು ಎಸಗುತ್ತಿರುವುದು ಪತ್ರಿಕೆಗಳಲ್ಲಿ ವರದಿಯಾಗುತ್ತಿದೆ. ಅವರನ್ನು ಸಾಮೂಹಿಕವಾಗಿ ಸೆರೆ ಹಿಡಿದು ಯಾವುದೇ ವಿಚಾರಣೆಯಿಲ್ಲದೆ, ಅವರ ಗುರುತಿನ ಚೀಟಿಗಳಿಗೆ ಮಾನ್ಯತೆ ನೀಡದೆ ಕಿರುಕುಳ ಕೊಡುವುದಲ್ಲದೆ, ಕೆಲವೊಮ್ಮೆ ಅವರನ್ನು ಬಲವಂತವಾಗಿ ಬಾಂಗ್ಲಾ ದೇಶಕ್ಕೆ ಅಟ್ಟಲಾಗುತ್ತಿದೆ. ಇದು ಪ್ರಜ್ಞಾವಂತರಲ್ಲಿ ಆತಂಕವನ್ನು ಹುಟ್ಟಿಸಿದೆ.

ಭಾರತೀಯ ಮುಸ್ಲಿಮರನ್ನು ಹಿಂಸಿಸುವ ಈ ನೂತನ ವಿಧಾನ, ಚುನಾವಣಾ ಆಯೋಗ ಕೈಗೊಂಡಿರುವ ಎಸ್‌ಐಆರ್‌ನಲ್ಲೂ ಸಹ ಪ್ರತಿಬಿಂಬಿತವಾಗುತ್ತಿದೆ. ಚುನಾವಣಾ ಪಟ್ಟಿಯಿಂದ ನಕಲಿ ಮತದಾರರನ್ನು ಹೊರ ಹಾಕುವ ಹೆಸರಿನಲ್ಲಿ ಈ ನೈಜ ಮತದಾರರನ್ನು ಕೈಬಿಟ್ಟು, ಅವರಿಗೆ ಪೌರತ್ವವನ್ನೇ ನಿರಾಕರಿಸಲಾಗುತ್ತಿದೆ.

### ಭಾಷೆಯ ಆಧಾರದಲ್ಲಿ ನುಸುಳುಕೋರರ ಪತ್ತೆ!

ಪಶ್ಚಿಮ ಬಂಗಾಲದ ಹೊರಗಿರುವ ಯಾರೇ ಮುಸ್ಲಿಮರು, ಅವರು ಬಂಗಾಲಿ ಭಾಷೆ ಮಾತನಾಡುತ್ತಾರೆ ಎಂಬ ಒಂದೇ ಕಾರಣದಿಂದ, ಅವರನ್ನು ಬಾಂಗ್ಲಾದೇಶಿಗಳೆಂದು ಆರೋಪಿಸುವುದು ಮೂರ್ಖತನದ ಪರಾಕಾಷ್ಠೆಯಲ್ಲದೆ ಇನ್ನೇನು? ಭಾರತೀಯ ಹಿಂದುಗಳೋ, ಮುಸ್ಲಿಮರೋ, ಅವರ ಮಾತೃಭಾಷೆ ಬಂಗಾಲಿಯಾಗಿರುವುದು ಅಸಾಮಾನ್ಯವೇ? ದೆಹಲಿಯ ವಸಂತ್ ಕುಂಜ್ ಪ್ರದೇಶದ ಜೈಹಿಂದ್ ಕಾಲನಿ ನಿವಾಸಿಗಳಾದ ನೂರಾರು ಬಂಗಾಲಿ ವಲಸೆಗಾರರ ಮೇಲೆ ಆರ್‌ಎಸ್‌ಎಸ್–ಸಂಘ ಪರಿವಾರದವರು ಅತ್ಯಂತ ಬರ್ಬರ ದಾಳಿ ಎಸಗಿದ್ದಾರೆ: ವರದಿಯಾದಂತೆ, ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದ ಆದೇಶದ ಮೇರೆಗೆ ಅವರಿಗೆ ನೀರು ಸರಬರಾಜನ್ನು ನಿಲ್ಲಿಸಲಾಯಿತು, ಅವರ ವಿದ್ಯುತ್ ಮೀಟರ್‌ಗಳನ್ನು ವಶ ಪಡಿಸಿಕೊಳ್ಳಲಾಯಿತು, ಅವರಿಗೆ ವಿದ್ಯುತ್ ಕಡಿತ ಸಹ ಮಾಡಲಾಯಿತು! ಸ್ವತ: ಹಣ ಕೊಟ್ಟು ಖಾಸಗಿಯವರ ಮೂಲಕ ನೀರನ್ನು ತರಿಸಿಕೊಳ್ಳಲು ಸಹ ಪೋಲೀಸರು ಬಿಡಲಿಲ್ಲ ಎಂದು ಈ ಸಂತ್ರಸ್ತರು ಆರೋಪಿಸಿದ್ದಾರೆ. ಅಂದರೆ, ಬಂಗಾಲಿ ಮಾತನಾಡುವ ಭಾರತೀಯರನ್ನು ಅಪರಾಧಿಗಳೆಂದು ಪರಿಗಣಿಸಿದಂತಾಯಿತು. ಈಗ, ದೆಹಲಿ ನ್ಯಾಯಾಲಯ ಜೈಹಿಂದ್ ಕಾಲನಿಯಿಂದ ಅವರನ್ನು ಎತ್ತಂಗಡಿ ಮಾಡಿಸುವುದಕ್ಕೆ ತಾತ್ಕಾಲಿಕ ತಡೆ ನೀಡಿದೆ.

ರಾಜಸ್ಥಾನದಲ್ಲಿ ಪ.ಬಂಗಾಲದ 200 ವಲಸೆಗಾರರನ್ನು ಮತ್ತು ಅಸ್ಸಾಮಿನ ಬಂಗಾಲಿ ಮಾತೃಭಾಷೆಯ 200 ವಲಸೆಗಾರರನ್ನು ಬಂಧಿಸಲಾಯಿತು. ವರದಿಯಾದಂತೆ, ಮಧ್ಯರಾತ್ರಿಯಲ್ಲಿ ಅವರ ಮನೆಗಳಿಗೆ ನುಗ್ಗಿದ ಗುಜರಾತಿನ ಪೋಲೀಸರು, "ನೀವೆಲ್ಲಾ ಬಾಂಗ್ಲಾದೇಶಿಗಳು" ಎಂದು ಕಿರುಚುತ್ತಾ ಅವರನ್ನು ಕ್ರೂರವಾಗಿ ಹೊಡೆಯಲಾರಂಭಿಸಿದಾಗ, ತಮ್ಮ ತಪ್ಪೇನು ಎಂದು ಸಹ ಈ ಸಂತ್ರಸ್ತರಿಗೆ ಅರಿವಾಗಲಿಲ್ಲ. ಈ ಬಡ ಮುಸ್ಲಿಮರ ಮೇಲೆ ಇಂತಹ ದಾಳಿ ಏಕೆ? ತಮ್ಮ ಮೇಲಿನ ಅನ್ಯಾಯಗಳ ವಿರುದ್ಧ ಅವರು ಪ್ರತಿಭಟಿಸದೇ ಇರಲಿ ಎಂದೇ ಅವರ ಬಾಯಿ ಮುಚ್ಚಿಸಲು ಹೀಗೆ ಮಾಡಲಾಗುತ್ತಿದೆಯೇ ಎಂಬ ಅನುಮಾನ ಬಂದರೆ ತಪ್ಪೇ?

### ಬಂಗಾಲಿ ಭಾರತೀಯ ಭಾಷೆ ಅಲ್ಲವೇ?

ನವದೆಹಲಿಯಲ್ಲಿನ ಚಾಣಕ್ಯಪುರಿಯಲ್ಲಿರುವ ಬಾಂಗ್ಲಾ ಭವನಕ್ಕೆ ದೆಹಲಿಯ ಪೋಲೀಸರು ಕಳಿಸಿರುವ ಪತ್ರವೊಂದರಲ್ಲಿ ಬಂಗಾಲಿಯನ್ನು 'ಬಾಂಗ್ಲಾದೇಶದ ಭಾಷೆ' ಎಂದು ಉಲ್ಲೇಖಿಸಲಾಗಿದೆ. ಮತ್ತೆ, ಬಿಜೆಪಿಯ ಕುಖ್ಯಾತ ಐಟಿ ಸೆಲ್‌ನ ಮುಖ್ಯಸ್ಥರಾದ ಅಮಿತ್ ಮಾಳವೀಯ, 'ಬಂಗಾಲಿ'ಎಂಬ ಭಾಷೆಯೇ ಇಲ್ಲ ಎಂದು ಹೇಳಿದ್ದಾರೆ! ಭಾರತದ ಸಂವಿಧಾನ ಮಾನ್ಯತೆ ಕೊಟ್ಟಿರುವ 22 ಭಾಷೆಗಳಲ್ಲಿ ಬಂಗಾಲಿ ಸಹ ಒಂದಾಗಿದ್ದು, ಅದಕ್ಕೆ ಅಧಿಕೃತ ಸ್ಥಾನಮಾನವಿದೆ, ಮತ್ತದರ ಅಭಿವೃದ್ಧಿಗೆ ಒತ್ತು ಕೊಡಲಾಗಿದೆ. ಭಾರತದ ಅತಿ ಹೆಚ್ಚು ಜನ ಮಾತನಾಡುವ ಭಾಷೆಗಳಲ್ಲಿ ಬಂಗಾಲಿಗೆ ಎರಡನೇ ಸ್ಥಾನ. ಭಾರತದ ನವೋದಯದ ಅದ್ಭುತ ವ್ಯಕ್ತಿಗಳಾದ ರಾಜಾ ರಾಮ್‌ಮೋಹನ್ ರಾಯ್, ವಿದ್ಯಾಸಾಗರ್, ಬಂಕಿಮಚಂದ್ರ, ಮೈಕೆಲ್ ಮಧುಸೂದನ್ ದತ್ತಾ, ಶರತ್‌ಚಂದ್ರ, ನಜ್ರುಲ್ ಮುಂತಾದವರು ಹಾಗೂ ದೇಶದ ಸ್ವಾತಂತ್ರ್ಯ ಹೋರಾಟದ ಮಹಾನ್ ನಾಯಕರಾದ ದೇಶಬಂಧು ಚಿತ್ತರಂಜನ್ ದಾಸ್, ನೇತಾಜಿ, ಬಿಪಿನ್‌ಚಂದ್ರ ಪಾಲ್, ಮಾಸ್ಟರ್ ದಾ ಸೂರ್ಯಸೇನ್, ಇವರೆಲ್ಲರೂ ಬಂಗಾಲಿಗಳೇ. ಆದರವರು ತಮ್ಮನ್ನು ಕೇವಲ ಬಂಗಾಲಿಗಳೆಂದು ಭಾವಿಸದೆ ಹೆಮ್ಮೆಯ ಭಾರತೀಯರೆಂದುಕೊಂಡು ದೇಶದ ಉನ್ನತಿಗೆ ಶ್ರಮಿಸಿದರು. ಬ್ರಿಟಿಷ್ ಆಕ್ರಮಣಕಾರರು, ಭಾರತವನ್ನು ಬಂಗಾಳದ ಮೂಲಕ ಪ್ರವೇಶಿಸಿ, ತಮ್ಮ ಆಡಳಿತಕ್ಕಾಗಿ ಅಲ್ಲಿ ಇಂಗ್ಲಿಷ್ ಶಿಕ್ಷಣವನ್ನು ನೀಡಿದ್ದರಿಂದ ಭಾರತದ ನವೋದಯ ಅರಳಿದ್ದು ಅಲ್ಲಿಯೇ, ಹಾಗೆಯೇ ಅಲ್ಲಿ ಬಂಗಾಲಿ ಭಾಷೆಯೂ ಪ್ರಗತಿ ಕಂಡಿತು. ಈ ಇತಿಹಾಸವನ್ನು ನಿರಾಕರಿಸಲಾದೀತೇ?

ಆದರೀಗ, ಬಡ ಬಂಗಾಲಿ ಮುಸ್ಲಿಂ ವಲಸೆಗಾರರಿಗೆ 'ನುಸುಳುಕೋರ' ಎಂಬ ಹಣೆಪಟ್ಟಿ ಹಚ್ಚಿ ಅವರ ಮನೆಗಳನ್ನು ಧ್ವಂಸ ಮಾಡಲಾಗುತ್ತಿದೆ, ಅವರಲ್ಲಿ ಎಷ್ಟೋ ಜನರನ್ನು ಬಲವಂತವಾಗಿ ಬಾಂಗ್ಲಾದೇಶಕ್ಕೂ ತಳ್ಳಲಾಗುತ್ತಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಪಟ್ಟಭದ್ರ ಹಿತಾಸಕ್ತಿಯ 'ಎನ್‌ಆರ್‌ಸಿ' ಅಜೆಂಡಾವನ್ನು ಸಮರ್ಥಿಸಲು ಹಾಗೂ ಈ ಸಂತ್ರಸ್ತರ ಭೂಮಿಯನ್ನು ಕಿತ್ತುಕೊಂಡು, ಅದನ್ನು ಏಕಸ್ವಾಮ್ಯಾಧಿಪತಿಗಳ ಯೋಜನೆಗಳಿಗೆ ಹಸ್ತಾಂತರಿಸಲು ಸಹ ಹೀಗೆ ಮಾಡಲಾಗುತ್ತಿದೆ. ಜೊತೆಗೆ, ಬಾಂಗ್ಲಾದೇಶದಲ್ಲಿನ ಪ್ರಸಕ್ತ ನಾಯಕತ್ವದೊಂದಿಗೆ ಭಾರತದ ಸಂಬಂಧ ಹಳಸಿರುವುದರಿಂದ ಬಾಂಗ್ಲಾದೇಶ ವಿರೋಧಿ ಭಾವನೆಗಳನ್ನು ಬಡಿದೆಬ್ಬಿಸುವ ಕುಯುಕ್ತಿ ಸಹ ಇಲ್ಲಿದೆ.

### ಜನೈಕ್ಯತೆಯನ್ನು ಮುರಿಯುವ ಹುನ್ನಾರ

ಬಂಗಾಲಿ ಭಾಷೆಯ ವಿರುದ್ಧದ ಈ ಏಕಾಏಕಿ ಕಾರ್ಯಾಚರಣೆ, ಜನೈಕ್ಯತೆಯನ್ನು ಮುರಿಯುವ ಸಲುವಾಗಿ ಬಂಗಾಲಿಗಳನ್ನು ಬಂಗಾಲಿಯೇತರ ವಿರುದ್ಧ ಎತ್ತಿಕಟ್ಟುವ ಹುನ್ನಾರವೂ ಆಗಿದೆ. ಈ ಮೂಲಕ ಕೆಲ ವಿಧ್ವಂಸಕ ಶಕ್ತಿಗಳು ಬಂಗಾಲಿ ದುರಭಿಮಾನವನ್ನೂ ಪ್ರಚೋದಿಸುತ್ತಿವೆ; ಅಂತೆಯೇ ಕೋಮುವಾದ–ಭಾಷಾಂಧಾಭಿಮಾನಗಳಿಗೆ ಕುಮ್ಮಕ್ಕು ನೀಡಿ ಮತಗಳಿಸಲು ಪ್ರಯತ್ನಿಸುತ್ತಿವೆ. ಇಂತಹ ಪ್ರಯತ್ನ ಇತರ ರಾಜ್ಯ ಭಾಷೆಗಳಿಗೆ ಸಂಬಂಧ ಪಟ್ಟಂತೆಯೂ ನಡೆಯಬಹುದು. ಈ ಬಗ್ಗೆ ಎಚ್ಚರ ವಹಿಸುತ್ತಲೇ, ವಲಸೆಗಾರ ದುಡಿಯುವ ಜನತೆಯ ಬಗ್ಗೆ ಅಪಾರ ಸಹಾನುಭೂತಿಯನ್ನು ಹೊಂದುತ್ತಾ, ಒಂದು ಐಕ್ಯ ಕೋಮುವಾದ–ಭಾಷಾಂಧಾಭಿಮಾನ ವಿರೋಧಿ ಜನಾಂದೋಳನವನ್ನು ಹರಿಬಿಡುವುದು ಈ ಘಳಿಗೆಯ ಅವಶ್ಯಕತೆ.

# ಹುತಾತ್ಮ ಖುದಿರಾಂನನ್ನು ಹಠಾತ್ತಾಗಿ ಹೊಗಳಿದ ಪ್ರಧಾನಿ ಮೋದಿ

ಜುಲೈ 27 ರಂದು ನಡೆದ ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರು ಹುತಾತ್ಮ ಖುದಿರಾಂನ ಹೆಸರನ್ನು ಉಚ್ಚರಿಸಿದರು. ತನ್ನ 18ರ ಎಳೆ ವಯಸ್ಸಿನಲ್ಲೇ ಖುದಿರಾಮ್ ನಗುನಗುತ್ತ ಗಲ್ಲಿಗೇರಿದನು ಮತ್ತು ಇದು ಭಾರತೀಯರ ನಡುವೆ ಕೋಲಾಹಲವೆಬ್ಬಿಸಿತು. ಇಂತಹ ಹಲವಾರು ಬಲಿದಾನಗಳಿಂದ ನಮಗೆ ಬ್ರಿಟಿಷರ ದಾಸ್ಯದಿಂದ ಬಿಡುಗಡೆ ದೊರಕಿದೆ, ಎಂದು ಈ ಭಾಷಣದಲ್ಲಿ ಪ್ರಧಾನಿ ಹೇಳಿದರು. ಅವರು ಸರಿಯಾಗಿ ಮತ್ತು ಸತ್ಯವನ್ನೇ ಹೇಳಿದ್ದಾರೆ. ಇಲ್ಲಿ ಮೂಡುವ ಪ್ರಶ್ನೆ ಎಂದರೆ ಬ್ರಿಟಿಷರ ದಾಸ್ಯದಿಂದ ಸ್ವಾತಂತ್ರ್ಯ ದೊರೆತು ಇಷ್ಟು ವರ್ಷಗಳ ನಂತರ, ಬಹುಶಃ ಮೊಟ್ಟ ಮೊದಲ ಬಾರಿಗೆ ಖುದಿರಾಮ್ ಹೆಸರನ್ನು ಪ್ರಧಾನಮಂತ್ರಿಯವರು ಎತ್ತಿ ಹಿಡಿದಿದ್ದೇಕೆ? ವಾಸ್ತವದಲ್ಲಿ, ಬ್ರಿಟಿಷರನ್ನು ವಿರೋಧಿಸುವುದು ಮತ್ತು ರಾಷ್ಟ್ರವಾದ ಎರಡೂ ಒಂದೇ ಎಂದು ಭಾವಿಸಿದವರನ್ನು ಆರ್‌ಎಸ್‌ಎಸ್–ಸಂಘಪರಿವಾರ ಪ್ರತಿಗಾಮಿಗಳು ಮತ್ತು ದ್ರೋಹಿಗಳು ಎಂದು ಕರೆದರು. ಖುದಿರಾಮ್, ಭಗತ್ ಸಿಂಗ್, ಚಂದ್ರಶೇಖರ ಆಜಾದ್, ಸೂರ್ಯಸೇನ್, ಪ್ರೀತಿಲತಾ ಮುಂತಾದವರ ಮೇಲೆ ಅವರು ಈ ಆಪಾದನೆ ಹೊರಿಸಿದ್ದರು. 'ವಿ ಓರ್ ಅವರ ನೇಷನ್‌ಹುಡ್ ಡಿಫೈನ್ಡ್' (We or our nationhood defined) ಎಂಬ ಕೃತಿಯಲ್ಲಿ ಆರ್‌ಎಸ್‌ಎಸ್‌ನ ನೇತಾರ ಎಮ್. ಎಸ್. ಗೋಲ್ವಾಲ್ಕರ್ ಹೇಳಿರುವಂತೆ, "ಹಿಂದೂ ಜನಾಂಗ ಮತ್ತು ರಾಷ್ಟ್ರವನ್ನು ತಮ್ಮ ಹೃದಯದಲ್ಲಿ ಸ್ಥಾಪಿಸಿ ವಿಜೃಂಭಿಸುವವರು ಮಾತ್ರ ನಿಜವಾದ ರಾಷ್ಟ್ರಪ್ರೇಮಿಗಳು, ಇತರರೆಲ್ಲ ದ್ರೋಹಿಗಳು ಮತ್ತು ರಾಷ್ಟ್ರದ ಹಿತಾಸಕ್ತಿಯ ಶತ್ರುಗಳು." ಸ್ವಾತಂತ್ರ್ಯ ಚಳುವಳಿಯಲ್ಲಿ ಆರ್‌ಎಸ್‌ಎಸ್ ಹಾಗೂ ಹಿಂದೂ ಮಹಾಸಭಾದ ವಿಭಜಕ ಪಾತ್ರದ ಕುರಿತು ಯಾರಿಗೆ ತಾನೆ ತಿಳಿದಿಲ್ಲ? ಅವರು ಸ್ವಾತಂತ್ರ್ಯ ಚಳುವಳಿಯನ್ನು ದೂಷಿಸಿದ್ದಷ್ಟೇ ಅಲ್ಲದೇ, ಅದರಿಂದ ದೂರ ಉಳಿದರು ಮತ್ತು ಚಳುವಳಿಯನ್ನು ಮಟ್ಟಹಾಕಲು ಬ್ರಿಟಿಷರಿಗೆ ಸಹಾಯ ಮಾಡಿದರು. ಸ್ವತಃ ಮೋದಿಯವರು ಆರ್‌ಎಸ್‌ಎಸ್‌ನ ಪ್ರಚಾರಕರಾಗಿದ್ದರು. ಹೀಗಿದ್ದಾಗ ಒಮ್ಮೆಲೇ ಅವರಿಗೆ ಹೇಗೆ ಹೊಸ ಜ್ಞಾನೋದಯವಾಗಿ, ಆರ್‌ಎಸ್‌ಎಸ್‌ನ ವಿಚಾರಧಾರೆಯನ್ನು ವಿರೋಧಿಸಲು ಸಾಧ್ಯ? ಆರ್‌ಎಸ್‌ಎಸ್ ಮತ್ತು ಬಿಜೆಪಿ ಬ್ರಿಟಿಷ್ ವಿರೋಧಿ ಸ್ವಾತಂತ್ರ್ಯ ಚಳುವಳಿಯ ಹಾಗೂ ಹುತಾತ್ಮರ ಪಾತ್ರದ ಕುರಿತು ತಮ್ಮ ಅಭಿಪ್ರಾಯ ಮತ್ತು ಮೌಲ್ಯಮಾಪನವನ್ನು ಬದಲಿಸಿವೆಯೇ? ಯಾವ ಕಾರಣಕ್ಕೂ ಇದನ್ನು ನಂಬಲು ಸಾಧ್ಯವಿಲ್ಲ.



ಪ್ರತಿಬಾರಿಯೂ ಚುನಾವಣೆಗೆ ಮುನ್ನ ಅವರ ದೇಶಭಕ್ತಿಯು ಉಕ್ಕಿ ಹರಿಯುತ್ತದೆ. ಆದರೆ ದೇಶದ ಬೇರೆ ಬೇರೆ ಭಾಗಗಳಲ್ಲಿ ಅಲ್ಲಿನ ಜನಾಂಗೀಯತೆ, ಪ್ರಾದೇಶಿಕತೆ, ಭಾಷೆ ಮತ್ತು ಇತರೆ ಅಂಶಗಳಿಗನುಗುಣವಾಗಿ ಅದು ಬೇರೆ ಬೇರೆ ರೂಪದಲ್ಲಿ ಪ್ರಕಟಗೊಳ್ಳುತ್ತದೆ. ಆದ್ದರಿಂದ ಚುನಾವಣೆಗಳು ಬಾಗಿಲು ಬಡಿದಾಗಲೆಲ್ಲ ಆರ್‌ಎಸ್‌ಎಸ್–ಬಿಜೆಪಿಯು ಸ್ಥಳೀಯ ಭಾವನೆಗಳನ್ನು ಸೆಳೆಯುವ ರೀತಿ ಪ್ರಚಾರದ ತಾಳವನ್ನು ಸೂಕ್ಷ್ಮವಾಗಿ ಆಯ್ದುಕೊಳ್ಳುತ್ತವೆ. ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಗಳು ಸಮೀಪಿಸುತ್ತಿರುವುದರಿಂದ, ಬಂಗಾಳಿ ಮತದಾರರನ್ನು ಸೆಳೆಯಲು ಅಲ್ಲಿನ ಖ್ಯಾತ ಸ್ವಾತಂತ್ರ್ಯ ಹೋರಾಟಗಾರರ ಮತ್ತು ನವೋದಯ ಹರಿಕಾರರ ಕುರಿತು ಬಿಜೆಪಿ ನಾಯಕರು ಒಳ್ಳೆಯ ಮಾತುಗಳನ್ನಾಡುತ್ತಿದ್ದಾರೆ. ಈ ಉದ್ದೇಶದಿಂದಲೇ ಮೊನ್ನೆ ದುರ್ಗಾಪುರದಲ್ಲಿ ನಡೆದ ಸಭೆ ಒಂದರಲ್ಲಿ ಪ್ರಧಾನಿ ಮೋದಿಯವರು ಜೈ ಶ್ರೀ ರಾಮ್ ಘೋಷಣೆಯ ಬದಲಿಗೆ 'ಜೈ ಮಾ ದುರ್ಗಾ' ಮತ್ತು 'ಜೈ ಮಾ ಕಾಳಿ' ಎಂಬ ಘೋಷಣೆಗಳನ್ನು ಕೂಗಿದರು.

ಇನ್ನು ಕೆಲವೇ ತಿಂಗಳುಗಳಲ್ಲಿ ಬಿಹಾರ ವಿಧಾನಸಭಾ ಚುನಾವಣೆ ನಡೆಯಲಿದೆ. 1908ರ ಆಗಸ್ಟ್ 11ರಂದು ಮುಜಫರಪುರ ಜೈಲಿನಲ್ಲಿ ಖುದಿರಾಂ ಅವರನ್ನು ಗಲ್ಲಿಗೇರಿಸಲಾಯಿತು. ಬಿಹಾರದ ಅನೇಕ ಹಿರಿಯರು ಇಂದಿಗೂ ಖುದಿರಾಮ್ ಕುರಿತು ಅಪಾರ ಭಾವನೆಯನ್ನು ಹೊಂದಿದ್ದಾರೆ. ಈ ಕಾರಣಕ್ಕಾಗಿ ಪ್ರಧಾನಿ ಮೋದಿಯವರು ಖುದಿರಾಮ್‌ನ ಭಜನೆ ಮಾಡುತ್ತಿರುವುದು. ಆದರೆ ಜುಲೈ ಕೊನೆಯ ವಾರದಲ್ಲಿ ತಮಿಳುನಾಡಿಗೆ ಭೇಟಿ ನೀಡಿದ ಅವರು ರಾಜ ಚೋಳನ ಗೌರವಾರ್ಥವಾಗಿ ಒಂದು ಸ್ಮರಣ ನಾಣ್ಯವನ್ನು ಬಿಡುಗಡೆಗೊಳಿಸಿದರು. ತಮ್ಮ ಭಾಷಣದಲ್ಲಿ ಚೋಳ ರಾಜವಂಶವನ್ನು ಪುಂಖಾನು ಪುಂಖವಾಗಿ ಕೊಂಡಾಡಿದ ಪ್ರಧಾನಿ ಮೋದಿ, ರಾಜರಾಜ ಚೋಳ ಮತ್ತು ಅವನ ಮಗ ರಾಜೇಂದ್ರ ಚೋಳ ಅವರ ಬೃಹತ್ ವಿಗ್ರಹಗಳನ್ನು ಸ್ಥಾಪಿಸುವುದಾಗಿ ಘೋಷಿಸಿದರು. ಕಳೆದ ಮೇನಲ್ಲಿ ರಾಜಸ್ಥಾನಕ್ಕೆ ಭೇಟಿ ನೀಡಿ, ಭಾರತೀಯ ಸಶಸ್ತ್ರ ಪಡೆಗಳು ಕೈಗೊಂಡ ಆಪರೇಷನ್ ಸಿಂಧೂರ್ ಕುರಿತು ಭಾವೋದ್ವೇಗದಿಂದ ಹಾಡಿ ಹೊಗಳಿದರು ಮತ್ತು ಪವಿತ್ರ ಸಿಂಧೂರಕ್ಕೆ ಪಾಕಿಸ್ತಾನಿ ಭಯೋತ್ಪಾದಕರು ತಲೆಬಾಗಬೇಕಾಯಿತು ಎಂದು ಹೇಳಿಕೊಂಡರು. ತತ್ಪರಿಣಾಮ, ಹಿಂದಿ ಭಾಷಿಕ ನೆಲದಲ್ಲಿ ಹಿಂದುತ್ವ ಭಾವನೆ ತೀವ್ರಗೊಂಡಿತು. ಆರ್‌ಎಸ್‌ಎಸ್– ಬಿಜೆಪಿ–ಸಂಘ ಪರಿವಾರವು ಪ್ರತಿಪಾದಿಸುವ ಹಿಂದುತ್ವಕ್ಕೆ ಹಿಂದೂ ಧರ್ಮದ ಪ್ರಮಾಣವಿಲ್ಲ. ಅದು ಈಗ ಕೇವಲ ಧರ್ಮದ ಆಧಾರದಲ್ಲಿ ಜನರನ್ನು ಧ್ರುವೀಕರಿಸಿ ಅವರ ಹಿಂದೂ ಮತಬ್ಯಾಂಕನ್ನು ಬಲಪಡಿಸಿಕೊಳ್ಳುವ ಒಂದು ಅಸ್ತ್ರವಾಗಿದೆ ಅಷ್ಟೇ.

ಇದು ಅಧಿಕಾರಕ್ಕಾಗಿ ಬೇಕಾದ್ದನ್ನು ಮಾಡುವ ಬಿಜೆಪಿಯಂತಹ ಪಕ್ಷದ, ಚುನಾವಣೆಯಲ್ಲಿ ಲಾಭ ಪಡೆಯುವ ಒಂದು ತಂತ್ರವಷ್ಟೆ. ಧಾರ್ಮಿಕ ಮತಾಂಧತೆ ಮತ್ತು ಕೋಮುವಾದವನ್ನು ಜನರ ನಡುವೆ ಒಡಕನ್ನು ಸೃಷ್ಟಿಸಲು ಮತ್ತು ಈ ವಿಭಜಕ ವಿಚಾರಗಳನ್ನೇ ಚುನಾವಣಾ ಕಾಳಗದ ಮುಖ್ಯ ವಿಷಯವಾಗಿ ಮಾಡುವುದನ್ನು ಹೊರತುಪಡಿಸಿ ಅವರಿಗೆ ಯಾವುದೇ ಸೈದ್ಧಾಂತಿಕ ಬದ್ಧತೆ ಇಲ್ಲ. ಸರಿಯಾದ ರಾಜಕೀಯ ಪ್ರಜ್ಞಾವಂತಿಕೆಯ ಕೊರತೆಯಿಂದಾಗಿ ಮತ್ತು ಬೂರ್ಜ್ವಾ ಮಾಧ್ಯಮಗಳ ವ್ಯಾಪಕ ಪ್ರಚಾರಕ್ಕೆ ಬಲಿಯಾಗಿ ಜನಸಾಮಾನ್ಯರು ಬಿಜೆಪಿ, ಕಾಂಗ್ರೆಸ್ ಮುಂತಾದ ಬೂರ್ಜ್ವಾ ಪಕ್ಷಗಳನ್ನು ಬೆಂಬಲಿಸುತ್ತಿದ್ದಾರೆ.

ಆದ್ದರಿಂದ ಮೋದಿಯವರ 'ಮನ್ ಕೀ ಬಾತ್'ನಲ್ಲಿ ಹುತಾತ್ಮ ಖುದಿರಾಮ್ ಬೋಸ್ ಅವರಿಗೆ ವ್ಯಕ್ತಪಡಿಸಿರುವ ಗೌರವದ ಮಾತುಗಳು, ಅವರ ಹೃದಯಾಂತರಾಳದಿಂದ ಹೊರಹೊಮ್ಮಿವೆಯೇ? ಅಥವಾ ಚುನಾವಣಾ ದೃಷ್ಟಿಯಿಂದ ಪ್ರೇರೇಪಿಸಲ್ಪಟ್ಟಿವೆಯೇ? ಯಾರ ಹೆಸರು ಮಾತ್ರವೇ ಜನರಲ್ಲಿ ಅಪಾರ ಭಾವನೆಗಳನ್ನು ಹೊರಹೊಮ್ಮಿಸುವುದೋ, ಅಂತಹ ಸ್ವಾತಂತ್ರ್ಯ ಸಂಗ್ರಾಮದ ದಂತಕಥೆ ಖುದಿರಾಂನ ಹೆಸರನ್ನು ಬಳಸುತ್ತಿರುವ ಈ ಆಟವನ್ನು ದೇಶದ ಜನರು ಕ್ಷಮಿಸುವರೇ?

# ಮಾಲೆಗಾಂವ್ ತೀರ್ಪು : ಸತ್ತವರು ಹಲವರು, ಅಪರಾಧಿಗಳಿಲ್ಲ ಯಾರೂ......

2008ರ ಮಾಲೆಗಾಂವ್ ಸ್ಫೋಟ ಪ್ರಕರಣದ ಆರೋಪಿಗಳಾಗಿದ್ದ ಸಾಧ್ವಿ ಪ್ರಜ್ಞಾಸಿಂಗ್ ಠಾಕೂರ್ ಮತ್ತು ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಶ್ರೀಕಾಂತ್ ಪುರೋಹಿತ್ ಸೇರಿದಂತೆ ಎಲ್ಲಾ ಏಳು ಜನರನ್ನು ಖುಲಾಸೆಗೊಳಿಸಿರುವುದು, ಈ ಪ್ರಕರಣದ ವಿಚಾರಣೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದವರಿಗೆ ಏನೂ ಆಶ್ಚರ್ಯವನ್ನುಂಟು ಮಾಡಲಿಲ್ಲ. ಈ ಪ್ರಕರಣದ ತನಿಖೆ ಮತ್ತು ವಿಚಾರಣೆಗಳು ಆರಂಭದಿಂದಲೂ ಹಲವು ತಿರುವುಗಳನ್ನು ಕಂಡವು.

### ಘಟನೆಯ ಹಿನ್ನೆಲೆಯನ್ನು ನೆನಪಿಸಿಕೊಂಡರೆ. . .

ಸೆಪ್ಟೆಂಬರ್ 2008ರಲ್ಲಿ, ನವರಾತ್ರಿಯೊಂದಿಗೆ ರಂಜಾನ್ ತಿಂಗಳೂ ಜೊತೆಗೂಡಿ ಬಂದಿತ್ತು. ಆಗ ಮಹಾರಾಷ್ಟ್ರದ ಮಾಲೆಗಾಂವ್‌ನ ಭಿಕ್ಕು ಚೌಕಿನಲ್ಲಿ ಬಾಂಬ್ ಸ್ಫೋಟಗೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು. ನಮಾಜ್ ಸಮಯದಲ್ಲಿ ಕೋಮು ಸೌಹಾರ್ದತೆಯನ್ನು ಕದಡಲು ಎಲ್‌ಎಂಎಲ್ ಫ್ರೀಡಂ ಮೋಟಾರ್ ಸೈಕಲ್‌ನಲ್ಲಿ ಸುಧಾರಿತ ಸ್ಫೋಟಕ ಸಾಧನ(ಐಇಡಿ)ವನ್ನು ಇರಿಸಲಾಗಿತ್ತು ಎಂದು ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ದೃಢಪಡಿಸಿತ್ತು. ಈ ಸ್ಫೋಟದಲ್ಲಿ 10 ವರ್ಷದ ಬಾಲಕಿ ಫರ್ಹೀನ್ ಮತ್ತು 19 ವರ್ಷದ ಯುವಕ ಅಜರ್ ಸೇರಿದಂತೆ ಆರು ಜನರು ಸಾವನ್ನಪ್ಪಿ, 101 ಜನರು ಗಾಯಗೊಂಡಿದ್ದರು. ಸ್ಥಳೀಯ ಪೊಲೀಸರೊಂದಿಗೆ ಜೊತೆಗೂಡಿ ಮಹಾರಾಷ್ಟ್ರ ಎಟಿಎಸ್, 'ಮೊಕಾ' (ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ) ಅಡಿ ಮಾಲೆಗಾಂವ್ ಮತ್ತು ಮುಂಬೈನ ಒಂಬತ್ತು ಮುಸ್ಲಿಂ ಪುರುಷರನ್ನು ಬಂಧಿಸಿ, ಅವರು ಸಿಮಿಯಂತಹ ನಿಷೇಧಿತ ಸಂಘಟನೆಯೊಂದಿಗೆ ಸಂಪರ್ಕ ಹೊಂದಿದ್ದಾರೆಂದು ಆರೋಪಿಸಿ ತಕ್ಷಣ ಅವರನ್ನು ಜೈಲಿಗೆ ಕಳುಹಿಸಿತ್ತು. ಈ ಮಾಲೆಗಾಂವ್ ಸ್ಫೋಟಕ್ಕಿಂತ ಮುಂಚೆ ಫೆಬ್ರವರಿ 2007ರಲ್ಲಿ ಪಾಣಿಪತ್‌ನಲ್ಲಿ ಪಾಕಿಸ್ತಾನಕ್ಕೆ ತೆರಳುತ್ತಿದ್ದ ಸಂಜೋತಾ ಎಕ್ಸ್‌ಪ್ರೆಸ್ ರೈಲಿನಲ್ಲಿ, ಮೇ 2007ರಲ್ಲಿ ಹೈದರಾಬಾದ್‌ನ ಮೆಕ್ಕಾ ಮಸೀದಿಯಲ್ಲಿ ಮತ್ತು ಅಕ್ಟೋಬರ್ 2007ರಲ್ಲಿ ಅಜ್ಮೀರ್ ದರ್ಗಾದಲ್ಲಿ ಸರಣಿ ಸ್ಫೋಟಗಳು ನಡೆದಿದ್ದವು. ಎಲ್ಲೆಡೆ ಉಂಟಾದ ಭಾರೀ ಸಾವು-ನೋವುಗಳಲ್ಲಿ ಹೆಚ್ಚಿನವರು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು. ಎಲ್ಲಾ ಪ್ರಕರಣಗಳಲ್ಲಿ ಕಂಡುಬರುವ ಒಂದು ಸಾಮಾನ್ಯ ಮಾದರಿಯು ಇದೆಲ್ಲವೂ ಒಂದು ನಿರ್ದಿಷ್ಟ ಗುಂಪು ಅಥವಾ ಸಂಘಟನೆಯ ಕೈವಾಡವಾಗಿರಬಹುದು ಎಂದು ಸೂಚಿಸುತ್ತಿತ್ತು.

ಮಾಲೆಗಾಂವ್ ಸ್ಫೋಟವಾಗುವ ಒಂದು ವರ್ಷ ಮೊದಲು, ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿ ಹಿಂದೂ ಉಗ್ರಗಾಮಿ ಗುಂಪುಗಳ ಸದಸ್ಯರ ಮನೆಗಳಲ್ಲಿ ಸ್ಫೋಟಕಗಳು ಪತ್ತೆಯಾಗಿದ್ದವು ಎಂಬುದು ಗಮನಾರ್ಹ. ನಾಂದೇಡ್‌ನಲ್ಲಿ ಸ್ಫೋಟಕಗಳನ್ನು ಜೋಡಿಸುವಾಗ ಇಬ್ಬರು ಬಜರಂಗದಳ ಕಾರ್ಯಕರ್ತರು ಸಾವನ್ನಪ್ಪಿದ್ದರು. ಪರ್ಭಾನಿ, ಪೂರ್ಣಾ ಮತ್ತು ಜಲ್ನಾದಲ್ಲಿ ಕೆಲವು ನಿಗೂಢ ಸ್ಫೋಟಗಳು ನಡೆದಾಗ, ಬಹುಶಃ ಹಿಂದುತ್ವ ಕಾರ್ಯಕರ್ತರು ಯಾವುದೋ ಕಾರ್ಯಾಚರಣೆಗೆ ತಯಾರಿ ನಡೆಸುತ್ತಿದ್ದಾರೆ ಎಂಬ ವದಂತಿಗಳು ಹಬ್ಬಿದ್ದವು. ಆದರೆ 2008 ಮುಗಿಯುವ ಮೊದಲು ಯಾವುದೇ ನಿರ್ಣಾಯಕ ಪ್ರಗತಿಯಾಗಲಿಲ್ಲ. ಮಾಲೆಗಾಂವ್ ಸ್ಫೋಟಗಳ ಸುಳಿವುಗಳನ್ನು ಆಧರಿಸಿ ಮಹಾರಾಷ್ಟ್ರ ಎಟಿಎಸ್, ಆರ್‌ಎಸ್‌ಎಸ್ ನಾಯಕಿ ಸಾಧ್ವಿ ಪ್ರಜ್ಞಾಸಿಂಗ್ ಠಾಕೂರ್, ಸಂಘ ಪರಿವಾರದ ಅಂಗಸಂಸ್ಥೆಯಾದ ಅಭಿನವ್ ಭಾರತ್ ಸದಸ್ಯ ಸಮೀರ್ ಕುಲಕರ್ಣಿ ಮತ್ತು ಹಿಂದುತ್ವದ ಒಲವು ಹೊಂದಿರುವ ಸೇನಾಧಿಕಾರಿ ಲೆಫ್ಟಿನೆಂಟ್ ಕರ್ನಲ್ ಶ್ರೀಕಾಂತ್ ಪ್ರಸಾದ್ ಪುರೋಹಿತ್ ಅವರ ಮೇಲೆ ದಾಳಿ ಮಾಡಿತು. 2009ರಲ್ಲಿ, ಎಟಿಎಸ್ ನಿಜವಾದ ಸಂಚುಕೋರರ ವಿವರ, ಸ್ಫೋಟಗಳ ಯೋಜನೆ ಹಾಗೂ ಕಾರ್ಯಯೋಜನೆಯ ರೀತಿಯನ್ನೊಳಗೊಂಡ ವಿವರಗಳ 4,528 ಪುಟಗಳ ಚಾರ್ಜ್‌ಶೀಟ್ ಅನ್ನು ಸಲ್ಲಿಸಿತು. ಕರ್ನಲ್ ಪುರೋಹಿತ್ ಬಾಂಬುಗಳಿಗೆ ಆರ್‌ಡಿಎಕ್ಸ್ ಒದಗಿಸಿದ್ದಾರೆ ಎಂದು ಶಂಕಿಸಲಾಗಿತ್ತು. ಆಗ್ನೇಯ ಗುಜರಾತ್‌ನಲ್ಲಿ ನಡೆದ 1998ರ ಕ್ರೈಸ್ತರ ಮೇಲಿನ ದಾಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮತ್ತೊಬ್ಬ ಹಿಂದುತ್ವವಾದಿ, ಸ್ವಾಮಿ ಅಸೀಮಾನಂದ ಅವರನ್ನು ಸಂಜೋತಾ ಎಕ್ಸ್‌ಪ್ರೆಸ್ ಸ್ಫೋಟದ ಪ್ರಮುಖ ಶಂಕಿತ ಎಂದು ಸಿಬಿಐ ಹರಿದ್ವಾರದಲ್ಲಿ ಬಂಧಿಸಿತು. ಅಸೀಮಾನಂದ 42 ಪುಟಗಳ ಆಘಾತಕಾರಿ ತಪ್ಪೊಪ್ಪಿಗೆಯನ್ನು ನೀಡಿದ್ದು, ಅದರಲ್ಲಿ ಅವರು ಅಜ್ಮೀರ್ ದರ್ಗಾ, ಮೆಕ್ಕಾ ಮಸೀದಿ, ಮಾಲೆಗಾಂವ್ ಮತ್ತು ಸಂಜೋತಾ ಎಕ್ಸ್‌ಪ್ರೆಸ್‌ನಲ್ಲಿ ಭಯೋತ್ಪಾದಕ ದಾಳಿಗಳನ್ನು ಯೋಜಿಸಿದ್ದಾಗಿ ಒಪ್ಪಿಕೊಂಡಿದ್ದಾರೆ. ಸ್ವತಃ ಆರ್‌ಎಸ್‌ಎಸ್ ನಾಯಕರಾಗಿರುವ ಅವರು, ಸಾಧ್ವಿ ಪ್ರಜ್ಞಾಸಿಂಗ್ ಠಾಕೂರ್ ಸೇರಿದಂತೆ ಇತರ ಹಿರಿಯ ಆರ್‌ಎಸ್‌ಎಸ್ ಹಾಗೂ ಹಿಂದುತ್ವವಾದಿ ನಾಯಕರೊಂದಿಗೆ ಮುಸ್ಲಿಂ ಧಾರ್ಮಿಕ ಸ್ಥಳಗಳ ಮೇಲೆ ಸರಣಿ ಬಾಂಬ್ ದಾಳಿಗಳನ್ನು ಆಯೋಜಿಸುವ ಯೋಜನೆಗಳನ್ನು ರೂಪಿಸಲಾಗಿತ್ತು ಎಂದು ಬಹಿರಂಗಪಡಿಸಿದ್ದರು. ಆಶ್ಚರ್ಯಕರ ಸಂಗತಿಯೆಂದರೆ, ಪ್ರಕರಣವನ್ನು 2011ರಲ್ಲಿ ಎನ್‌ಐಎಗೆ ವರ್ಗಾಯಿಸಿದಾಗ, ಈಗಾಗಲೇ ಸಲ್ಲಿಸಲಾದ ಆರೋಪ ಪಟ್ಟಿಯನ್ನೇ ಮುಂದುವರಿಸುವ ಬದಲು ಈ ಸಂಸ್ಥೆ ಮರು ತನಿಖೆ ಮಾಡಲು ನಿರ್ಧರಿಸಿತು. 2008ರ ಮುಂಬೈ ಭಯೋತ್ಪಾದಕ ದಾಳಿಯಲ್ಲಿ ಹುತಾತ್ಮರಾದ ಹೇಮಂತ್ ಕರ್ಕರೆ ನೇತೃತ್ವದ ಮಹಾರಾಷ್ಟ್ರ ಎಟಿಎಸ್ ಆರಂಭದಲ್ಲಿ ತನಿಖೆ ನಡೆಸಿ ಮಾಲೆಗಾಂವ್ ಸ್ಫೋಟಗಳಲ್ಲಿ ಸಾಧ್ವಿ ಪ್ರಜ್ಞಾ, ಕರ್ನಲ್ ಪುರೋಹಿತ್, ಮೇಜರ್ ರಣೇಶ್ ಉಪಾಧ್ಯಾಯ ಮತ್ತು ಇತರರು ಭಾಗಿಯಾಗಿರುವುದನ್ನು ಬಹಿರಂಗಪಡಿಸಿತ್ತು. ಆದರೆ ತನಿಖೆ ಮುಂದುವರಿಯುವ ಮೊದಲೇ ಕರ್ಕರೆ ಕೊಲ್ಲಲ್ಪಟ್ಟರು. ಮುಂಬೈ ದಾಳಿಯ ಸಮಯದಲ್ಲಿ ಭಯೋತ್ಪಾದಕರ ಮೇಲೆ ದಾಳಿ ನಡೆಸುವಾಗ ಅವರದೇ ಗುಂಡು ನಿರೋಧಕ ಜಾಕೆಟ್ ಬದಲಿಗೆ ಕಳಪೆ ಗುಂಡು ನಿರೋಧಕ ಜಾಕೆಟ್ ಅನ್ನು ಯಾರು ನೀಡಿದರು ಎಂಬ ಪ್ರಶ್ನೆಗಳು ಉದ್ಭವಿಸಿದವು.



### ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಬದಲಾದ ತನಿಖೆಯ ದಿಕ್ಕು

ಸರಣಿ ಸ್ಫೋಟಗಳಲ್ಲಿ ಆರೋಪಿಗಳೆಂದು ಹಿಂದುತ್ವ ಕಾರ್ಯಕರ್ತರನ್ನು ಬಂಧಿಸಿದ ದಿನದಿಂದ ಇದರಲ್ಲಿ ಮೋಸ ನಡೆದಿದೆ ಎಂದು ಕೂಗಾಡುತ್ತಿದ್ದ ಬಿಜೆಪಿ 2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ, ತನಿಖೆಯ ದಿಕ್ಕು ಬದಲಾಯಿತು. ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ರೋಹಿಣಿ ಸಾಲಿಯನ್ ಪತ್ರಕರ್ತರ ಮುಂದೆ ಬಹಿರಂಗವಾಗಿ, ಮಹಾರಾಷ್ಟ್ರ ಎಟಿಎಸ್ ನಡೆಸಿದ್ದ ಗಂಭೀರ ತನಿಖೆಯು ಕುಸಿದಿದ್ದು ದುರ್ಬಲ ಸಾಕ್ಷ್ಯಾಧಾರಗಳಿಂದಾಗಿ ಅಲ್ಲ; ಆರೋಪಿಗಳಿಗೆ ಜಾಮೀನು ತಪ್ಪಿಸಲು ಕಾನೂನುಬದ್ಧ ಗಡುವನ್ನು ಪೂರೈಸಿದ 90 ದಿನಗಳಲ್ಲಿಯೇ ಎಟಿಎಸ್ ತನ್ನ ಆರೋಪ ಪಟ್ಟಿಯನ್ನು ಸಲ್ಲಿಸಿದೆ ಎಂದು ವಿವರಿಸಿದರು. ಆದರೆ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ, ಎನ್‌ಐಎಯ ಹಿರಿಯ ಅಧಿಕಾರಿಗಳು ಆರೋಪಿಗಳ ಬಗ್ಗೆ "ಮೃದು" ಧೋರಣೆ ತಳೆಯುವಂತೆ ರೋಹಿಣಿ ಮೇಲೆ ಒತ್ತಡ ಹೇರಲು ಪ್ರಾರಂಭಿಸಿದರು. ಆದರೆ ಅವರು ರಾಜಿ ಮಾಡಿಕೊಳ್ಳಲು ನಿರಾಕರಿಸಿ ಪ್ರಕರಣದಿಂದ ತಾವೇ ಹಿಂದೆ ಸರಿದರು.

2016ರಲ್ಲಿ, ಆರು ಆರೋಪಿಗಳ ವಿರುದ್ಧ ಪ್ರಕರಣವನ್ನು ಮುಂದುವರಿಸಲು ಸಾಕಷ್ಟು ಪುರಾವೆಗಳಿವೆ ಎಂದು ಎನ್‌ಐಎ ಹೇಳಿದ್ದರೂ ಸಹ, ಅದು ಎಟಿಎಸ್ ತನಿಖೆಯನ್ನು ಟೀಕಿಸಿ ಪೂರಕ ಆರೋಪಪಟ್ಟಿ ಸಲ್ಲಿಸಿತು. ಅಪರಾಧ ನಡೆದ ಸ್ಥಳದಿಂದ ಯಾವುದೇ ಹೆಚ್ಚುವರಿ ಸಾಕ್ಷ್ಯಗಳನ್ನು ಸಂಗ್ರಹಿಸಲು ಸಾಧ್ಯವಾಗಿಲ್ಲ ಎಂದು ಎನ್‌ಐಎಯ ಆರೋಪಪಟ್ಟಿ ಸ್ಪಷ್ಟವಾಗಿ ಹೇಳಿದ್ದು, ಪ್ರಕರಣದ ವರ್ಗಾವಣೆಯಲ್ಲಿನ ಸಮಯದಲ್ಲಿನ ವಿಳಂಬವನ್ನು ದೂಷಿಸಿದೆ. ಎನ್‌ಐಎಯ ಆರೋಪಪಟ್ಟಿಯಲ್ಲಿ ಯಾವುದೇ ಹೊಸ ಸಾಕ್ಷಿಗಳನ್ನು ಸೇರಿಸಲಾಗಿಲ್ಲ. ಬದಲಿಗೆ 2008-09ರಲ್ಲಿ ಮ್ಯಾಜಿಸ್ಟ್ರೇಟ್ ಮುಂದೆ ಹೇಳಿಕೆಗಳನ್ನು ನೀಡಿದ ಕೆಲವು ಸಾಕ್ಷಿಗಳ ಹೇಳಿಕೆಗಳನ್ನು ಮರು ದಾಖಲಿಸಿದಾಗ, ಅವರು ತಮ್ಮ ಹಿಂದಿನ ಹೇಳಿಕೆಗಳನ್ನು ನಿರಾಕರಿಸಿದರು.

ಹೀಗೆ, ಸಾಧ್ವಿ ಪ್ರಜ್ಞಾ ವಿರುದ್ಧ "ಸಾಕಷ್ಟು ಪುರಾವೆಗಳು ಸಿಕ್ಕಿಲ್ಲ" ಎಂದು ಎನ್‌ಐಎ ಅವರಿಗೆ ಕ್ಲೀನ್‌ಚಿಟ್ ನೀಡಿತು. ಆದರೆ, ಸ್ಫೋಟಕ್ಕೆ ಪ್ರಜ್ಞಾಸಿಂಗ್ ಹೆಸರಿನಲ್ಲಿದ್ದ ಎಲ್‌ಎಂಎಲ್ ಮೋಟಾರ್ ಸೈಕಲ್ ಅನ್ನು ಬಳಸಲಾಗಿದೆ ಎಂದು ಎಟಿಎಸ್ ಹೇಳಿತ್ತು. ಆದರೂ ಮುಂಬೈ ಹೈಕೋರ್ಟಿನಿಂದ ಅವರಿಗೆ ಜಾಮೀನು ದೊರೆತರೂ, ಈ ಸ್ಫೋಟದಲ್ಲಿ ಬಲಿಯಾದ ಒಬ್ಬರ ಕುಟುಂಬದ ವಿರೋಧದಿಂದಾಗಿ ಅವರನ್ನು ಪ್ರಕರಣದಿಂದ ಬಿಡುಗಡೆ ಮಾಡಲಾಗಲಿಲ್ಲ. ಅವರನ್ನು ಬಿಡುಗಡೆ ಮಾಡುವಂತೆ ಎನ್‌ಐಎ ಸಲ್ಲಿಸಿದ್ದ ಅರ್ಜಿಯನ್ನು ನಿರಾಕರಿಸಿದ ಅಂದಿನ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಸ್.ಡಿ.ಟೆಕಲೆ ಅವರನ್ನು ವರ್ಗಾಯಿಸಲಾಯಿತು. ಎಟಿಎಸ್ 90 ದಿನಗಳಲ್ಲಿ ಆರೋಪಪಟ್ಟಿ ಸಲ್ಲಿಸಿದ ನಂತರವೂ, 10 ವರ್ಷಗಳ ಸುದೀರ್ಘ ವಿಳಂಬದ ನಂತರ 2018ರಲ್ಲಿ ಒಟ್ಟು 323 ಸಾಕ್ಷಿಗಳ ವಿಚಾರಣೆ ಪ್ರಾರಂಭವಾಯಿತು. ಗಮನಾರ್ಹವಾಗಿ, ನ್ಯಾಯಾಲಯದ 1,087 ವಿಚಾರಣೆಗಳಲ್ಲಿ ಪ್ರಜ್ಞಾ ಠಾಕೂರ್ ಕೇವಲ 34 ಬಾರಿ ಮಾತ್ರ ಹಾಜರಾಗಿದ್ದರು. ಅವರ ಗೈರುಹಾಜರಿಗೆ ಎನ್‌ಐಎ ನ್ಯಾಯಾಲಯದಲ್ಲಿ ಯಾವುದೇ ಆಕ್ಷೇಪಣೆ ವ್ಯಕ್ತಪಡಿಸಲಿಲ್ಲ.

### ನ್ಯಾಯಾಧೀಶರ ನಿರಂತರ ಬದಲಾವಣೆ: ಸುದೀರ್ಘ ನ್ಯಾಯಾಂಗ ಪ್ರಕ್ರಿಯೆ

ಒಟ್ಟಾರೆಯಾಗಿ, ಈ ಪ್ರಕರಣವನ್ನು ಐದು ನ್ಯಾಯಾಧೀಶರು ನಿರ್ವಹಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಷ್ಟೊಂದು ವರ್ಗಾವಣೆಗಳು ಏಕೆ ನಡೆದಿವೆ ಎಂಬ ಪ್ರಶ್ನೆಗೆ ಉತ್ತರಿಸುವ ಅಗತ್ಯವಿಲ್ಲ. ತಮ್ಮ ತೀರ್ಪಿನಲ್ಲಿ, ನ್ಯಾಯಾಧೀಶರಲ್ಲಿ ಒಬ್ಬರು ಜನರನ್ನು ಕೊಲ್ಲುವ ಉದ್ದೇಶದಿಂದ ಸ್ಫೋಟವನ್ನು ನಡೆಸಲಾಗಿದೆ ಎಂದು ಸಾಬೀತಾಗಿದೆ ಎಂದು ಹೇಳಿದ್ದಾರೆ. ಅವರು ಮೃತರು ಮತ್ತು ಗಾಯಗೊಂಡವರ ಕುಟುಂಬಗಳಿಗೆ ಸಾಂಕೇತಿಕ ಪರಿಹಾರವನ್ನು ಸಹ ನೀಡಿದರು. ತನಿಖೆ ಮತ್ತು ನಂತರದ ಕಾನೂನು ಕ್ರಮಗಳು, ಅಕ್ರಮಗಳು ಮತ್ತು ದೋಷಪೂರಿತ ಕಾರ್ಯವಿಧಾನದಿಂದ ತುಂಬಿದ್ದವು. ಹಲವಾರು ವರದಿಗಳು, ಸಾಕ್ಷ್ಯಗಳ ದೋಷಪೂರಿತ ನಿರ್ವಹಣೆ ಮತ್ತು ಸರಿಯಾದ ಸುರಕ್ಷತಾ ಕ್ರಮಗಳ ಕೊರತೆಯನ್ನು ಎತ್ತಿ ತೋರಿಸಿವೆ. ರೋಹಿಣಿ ಸಾಲಿಯನ್ ಪತ್ರಿಕೆಗಳೊಂದಿಗೆ ಮಾತನಾಡುತ್ತಾ, "ಇದು ಹೀಗೆಯೇ ಆಗುತ್ತದೆ ಎಂದು ಗೊತ್ತಿತ್ತು. ನಿಜವಾದ ಸಾಕ್ಷ್ಯಗಳನ್ನು ಮಂಡಿಸದಿದ್ದರೆ ಎನ್‌ಐಎಯು ಏನಾಗಬೇಕಿತ್ತೋ ಅದೇ ಆಗುವುದು ನಿರೀಕ್ಷಿತ" ಎಂದು ಆರೋಪಿಸಿದ್ದಾರೆ. ತಾನು ಸಲ್ಲಿಸಿದ ಸಾಕಷ್ಟು ಪುರಾವೆಗಳನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿತ್ತು ಎಂದು ಹೇಳಿದ ಅವರು, ಆರೋಪಿಗಳ ಪಿತೂರಿ ಸಭೆಗಳಿಗೆ ಸಂಬಂಧಿಸಿದ ಹದಿಮೂರು ಪ್ರಮುಖ ಸಾಕ್ಷಿಗಳ ಹೇಳಿಕೆಗಳು ನಾಪತ್ತೆಯಾಗಲು ಹೇಗೆ ಸಾಧ್ಯ ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಹಾಗಾಗಿ, ನ್ಯಾಯಾಲಯಕ್ಕೆ ದೃಢವಾದ ಪುರಾವೆಗಳು ಸಿಗಲಿಲ್ಲ. ಮತ್ತು ಮೂಲ ಹೇಳಿಕೆಗಳಿಲ್ಲದೆ ಪ್ರಾಸಿಕ್ಯೂಷನ್ ಹೆಣಗಾಡಿತು. ನ್ಯಾಯಾಲಯವು ನಕಲು ಪ್ರತಿಗಳನ್ನು ಸ್ವೀಕರಿಸಲು ನಿರಾಕರಿಸಿತು ಮತ್ತು ಕಾಣೆಯಾದ ದಾಖಲೆಗಳನ್ನು ಹುಡುಕಲು ಮಾಡಿದ ಪ್ರಯತ್ನಗಳು ವಿಫಲವಾದವು. ಸಾಕ್ಷಿಗಳು ತಮ್ಮ ಹೇಳಿಕೆಗಳನ್ನು ಬದಲಾಯಿಸಿದರು ಅಥವಾ ಪ್ರತಿಕೂಲವಾಗಿ ಬದಲಾದರು. ಕೊನೆಗೆ, ನ್ಯಾಯಾಧೀಶರು ಹೇಳಿದಂತೆ, ಪ್ರಾಸಿಕ್ಯೂಷನ್ ತನ್ನ ಪ್ರಕರಣವನ್ನು ಸಾಬೀತುಪಡಿಸಲು ವಿಫಲವಾಯಿತು. ಅವರು, 2006ರ ಮುಂಬೈ ರೈಲು ಸ್ಫೋಟ ಪ್ರಕರಣದಲ್ಲಿ ಬಾಂಬೆ ಹೈಕೋರ್ಟ್ ಇತ್ತೀಚೆಗೆ ಎಲ್ಲಾ 12 ಆರೋಪಿಗಳನ್ನು ಖುಲಾಸೆಗೊಳಿಸಿದ್ದನ್ನೂ ಉಲ್ಲೇಖಿಸಿದ್ದಾರೆ.

ಸಂಜೋತಾ ಎಕ್ಸ್‌ಪ್ರೆಸ್ ಮತ್ತು ಮೆಕ್ಕಾ ಮಸೀದಿ ಸ್ಫೋಟ ಪ್ರಕರಣಗಳ ಗತಿಯೂ ಹೀಗೆ ಆಗಿತ್ತು. ಅಲ್ಲಿ ಸಿಬಿಐ, ಎನ್‌ಐಎ ಮತ್ತು ಎಸ್‌ಟಿಎಫ್‌ನಂತಹ ತನಿಖಾ ಸಂಸ್ಥೆಗಳು ಸಹ ಯಾವುದೇ ಪುರಾವೆಗಳನ್ನು ಪ್ರಸ್ತುತಪಡಿಸಲು ವಿಫಲವಾದವು. ಪರಿಣಾಮ: ಆರ್‌ಎಸ್‌ಎಸ್-ಬಿಜೆಪಿ-ಸಂಘ ಪರಿವಾರದೊಂದಿಗೆ ಸಂಪರ್ಕ ಹೊಂದಿದ್ದ ಎಲ್ಲಾ ಆರೋಪಿಗಳನ್ನು ಖುಲಾಸೆಗೊಳಿಸಲಾಯಿತು. ಮೆಕ್ಕಾ ಮಸೀದಿ ಪ್ರಕರಣದಲ್ಲಿ, ನ್ಯಾಯಾಧೀಶ ರವೀಂದ್ರ ರೆಡ್ಡಿ ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಎಲ್ಲಾ ಆರೋಪಿಗಳನ್ನು ಖುಲಾಸೆಗೊಳಿಸಿದ ನಂತರ ಕೋಪ ಮತ್ತು ದುಃಖದಿಂದ ರಾಜೀನಾಮೆ ನೀಡಿದರು. ಅಂದರೆ, ಸ್ಫೋಟ ಸಂಭವಿಸಿದೆ, ವಿಧ್ವಂಸಕ ಕೃತ್ಯಗಳಿಂದ ಸಾವು ನೋವುಗಳು ಸಂಭವಿಸಿವೆ. ಆದರೆ ಅದನ್ನು ಮಾಡಿದವರು ಯಾರೂ ಇಲ್ಲ!

ಹಿಂದುತ್ವವಾದಿ ಗುಂಪುಗಳು ಹಾಗೂ ಅಧಿಕಾರಸ್ಥರು, ಪೊಲೀಸ್ ಆಡಳಿತದ ಸಹಾಯದಿಂದ ಸಾಕ್ಷ್ಯಗಳನ್ನು ಮುಚ್ಚಿಹಾಕುವ ಮೂಲಕ, ಕೆಲವು ಸಾಕ್ಷಿಗಳನ್ನು ಹಣದಿಂದ ಖರೀದಿಸುವ ಮೂಲಕ ಅಥವಾ ಬೆದರಿಕೆ ಹಾಕುವ ಮೂಲಕ ಮಾಲೆಗಾಂವ್‌ನಲ್ಲಿ ಅಮಾಯಕ ಜನರನ್ನು ಕೊಂದವರನ್ನು ಖುಲಾಸೆಗೊಳಿಸಿ, ಅವರನ್ನು ಬಿಡುಗಡೆಯಾಗುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

### ಜನಾಂದೋಲನವೇ ಭಯೋತ್ಪಾದನೆಗೆ ಪರಿಹಾರ

ಭಯೋತ್ಪಾದಕರಿಗೆ ಯಾವುದೇ ಒಂದು ಜನಾಂಗ, ಧರ್ಮವಿಲ್ಲ ಎಂಬುದು ಸುಸ್ಪಷ್ಟ. ಅವರು ಭಯೋತ್ಪಾದಕರಷ್ಟೇ. ಹಲವಾರು ಸಮಸ್ಯೆಗಳಿಂದ ಬಳಲುತ್ತಿರುವ ಲಕ್ಷಾಂತರ ಜನರನ್ನು ಹೆದರಿಸಲು, ತಮ್ಮ ನಿರ್ದಯ ದಬ್ಬಾಳಿಕೆ ಮತ್ತು ಶೋಷಣೆಯ ವಿರುದ್ಧ ದುಡಿಯುವ ಜನಸಾಮಾನ್ಯರ ಒಗ್ಗಟ್ಟಿನ ಚಳುವಳಿಯನ್ನು ತಡೆಯಲು, ಆಳುವ ಸಾಮ್ರಾಜ್ಯಶಾಹಿ-ಬಂಡವಾಳಶಾಹಿ ವರ್ಗ ಭಯೋತ್ಪಾದಕರನ್ನು ಹುಟ್ಟುಹಾಕಿ ಮತಿಹೀನ ಹಿಂಸಾಚಾರದ ಮೂಲಕ ನಡೆಸುವ ಸಂಚು ಇದು. ಭಯೋತ್ಪಾದನೆಯ ವಿರುದ್ಧ ಹೋರಾಟದ ನಿಜವಾದ ಅಸ್ತ್ರವೆಂದರೆ, ಅದು ತೀವ್ರ ಕೋಮುವಾದಿ ಹಿಂದೂ ಮೂಲಭೂತವಾದಿ ಗುಂಪುಗಳಾಗಲಿ ಅಥವಾ ಇಸ್ಲಾಮಿಕ್ ಮೂಲಭೂತವಾದಿ ಗುಂಪುಗಳಾಗಲಿ, ಅವುಗಳ ವಿರುದ್ಧ ಸರಿಯಾದ ಕ್ರಾಂತಿಕಾರಿ ನಾಯಕತ್ವದಲ್ಲಿ ಜನರಲ್ಲಿ ಉನ್ನತ ಸಾಂಸ್ಕೃತಿಕ ಮೌಲ್ಯಗಳು ಮತ್ತು ನೈತಿಕತೆಯನ್ನು ಬೆಳೆಸಿ ಜಾಗೃತಿಯನ್ನು ಉಂಟು ಮಾಡುವುದೇ ಆಗಿದೆ.

ಎಐಕೆಕೆಎಮ್‌ಎಸ್ ಸಂಘಟಿತ : ರೈತ – ಕೃಷಿ ಕಾರ್ಮಿಕರ ಅಧ್ಯಯನ ಶಿಬಿರದ ಘೋಷ

# ಸಮಾಜವಾದಿ ಸಮಾಜ ಮಾತ್ರವೇ ರೈತರ ಸುಸ್ಥಿರ ಬದುಕನ್ನು ಖಚಿತಪಡಿಸುತ್ತದೆ

ದೇಶದ ಬೆನ್ನೆಲುಬು, ಜೈ ಕಿಸಾನ್ ಎಂದೆಲ್ಲಾ ಘೋಷಣೆಗಳನ್ನು ಕೂಗುತ್ತಲೇ ರೈತರನ್ನು ಸಾವಿನ ದವಡೆಗೆ ಸಿಲುಕಿಸುತ್ತಿರುವ, ಕಾರ್ಪೊರೇಟ್ ಬಂಡವಾಳಿಗರ ಪಾದಸೇವಕ ಸರ್ಕಾರಗಳ ವಿರುದ್ಧ ರೈತ ಚಳುವಳಿಗಳು ಬೆಳೆಯುತ್ತಿವೆ. ಈ ಹೋರಾಟಗಳು ನಿಜವಾಗಿಯೂ ಯಶಸ್ಸು ಕಾಣಬೇಕಾದರೆ ಸರಿಯಾದ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಕಟ್ಟಬೇಕು. ಈ ನಿಟ್ಟಿನಲ್ಲಿ ರೈತರನ್ನು ವೈಚಾರಿಕವಾಗಿ ಸದೃಢಗೊಳಿಸುವ ಉದ್ದೇಶದೊಂದಿಗೆ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ (ಎಐಕೆಕೆಎಂಎಸ್), ಕರ್ನಾಟಕ ರಾಜ್ಯ ಸಮಿತಿಯು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನಲ್ಲಿ ಸೆಪ್ಟೆಂಬರ್ 16 ರಿಂದ 18 ರವರೆಗೆ ಮೂರು ದಿನಗಳ ಕಾಲ ರೈತ ಕೃಷಿ ಕಾರ್ಮಿಕರ ಅಧ್ಯಯನ ಶಿಬಿರವನ್ನು ನಡೆಸಿತು. ರಾಜ್ಯದ ವಿವಿಧ ಜಿಲ್ಲೆಗಳನ್ನು ಪ್ರತಿನಿಧಿಸಿದ 350 ಕ್ಕೂ ಹೆಚ್ಚು ರೈತರು ಮತ್ತು ಕೃಷಿ ಕಾರ್ಮಿಕರು ಶಿಬಿರದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

### ಉದ್ಘಾಟನಾ ಕಾರ್ಯಕ್ರಮ

ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರಾದ ಕಾಮ್ರೇಡ್ ಕೆ.ರಾಧಾಕೃಷ್ಣ, "ದುಡಿಯುವ ಜನರು, ರೈತರು ಮತ್ತು ಕಾರ್ಮಿಕರು ದೇಶದ ಸಂಪತ್ತಿನ ಸೃಷ್ಟಿಕರ್ತರು. ಅವರ ದುಡಿಮೆಯಿಂದ ಸೃಷ್ಟಿಸಿದ ಸಂಪತ್ತನ್ನು ಕೆಲವೇ ಮಂದಿ ಬಂಡವಾಳಿಗರು ಕಸಿದುಕೊಳ್ಳುತ್ತಿದ್ದಾರೆ. ಅಂತಹ ಶೋಷಣೆಯ ವಿರುದ್ಧ ಕಾರ್ಮಿಕರು ಮತ್ತು ರೈತರು ಒಂದಾಗಿ ಹೋರಾಡಬೇಕು. ನೇಪಾಳದಲ್ಲಿ ನಡೆದ ಭ್ರಷ್ಟಾಚಾರ ವಿರೋಧಿ ಹೋರಾಟದಂತಹ ಹೋರಾಟಗಳು ನಡೆಯಬೇಕೆಂದು ಜನರು ಬಯಸುತ್ತಿದ್ದಾರೆ. ಅದರಲ್ಲಿ ಯುವಜನರು ಮತ್ತು ವಿದ್ಯಾರ್ಥಿಗಳು ಜೀವ ಕೊಟ್ಟಿದ್ದಾರೆ. ಸರ್ಕಾರ ಉರುಳಿತು. ಹೊಸ ಸರ್ಕಾರ ರಚನೆಯಾಗಿದೆ. ಆದರೆ ಸಮಸ್ಯೆಗಳು ಬಗೆಹರಿಯುತ್ತವೆಯೇ ಎನ್ನುವುದು ಮುಖ್ಯ. ಈ ಯುಗದ ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್ ಬಹಳ ಹಿಂದೆಯೇ ಹೇಳಿದಂತೆ, ಹೋರಾಟಗಳು ಅಲೆಗಳಂತೆ ಒಂದಾದ ಮೇಲೊಂದು ಬರುತ್ತವೆ. ಆದರೆ ಶೋಷಕ ವ್ಯವಸ್ಥೆಯಾದ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯದಿದ್ದರೆ ಸಮಸ್ಯೆಗಳು ಬಗೆಹರಿಯುವುದಿಲ್ಲ. ಅದಕ್ಕಾಗಿ ರೈತರು ಹಳ್ಳಿ ಹಳ್ಳಿಗಳಲ್ಲಿ ಸಂಘಟನೆ ಕಟ್ಟಬೇಕು" ಎಂದು ಕರೆ ನೀಡಿದರು.

ಸಾಮಾಜಿಕ ಹೋರಾಟಗಾರರಾದ ಶ್ರೀಯುತ ಉಗ್ರನರಸಿಂಹೇಗೌಡರು ಮಾತನಾಡಿ, ರೈತರು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಭವಿಷ್ಯವನ್ನು ರೂಪಿಸುವಂತಹ ಹೋರಾಟ ಕಟ್ಟಲು ಸೇರಿರುವುದು ಸಂತೋಷದ ವಿಷಯ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆರೋಗ್ಯ, ಶಿಕ್ಷಣ, ಮೂಲಭೂತ ಸೌಕರ್ಯಗಳನ್ನು ಮತ್ತು ಕೃಷಿ ಅಭಿವೃದ್ಧಿಯನ್ನು ಖಚಿತಪಡಿಸುವ ಯೋಜನೆಗಳನ್ನು ರೂಪಿಸುತ್ತಿಲ್ಲ. ನಮ್ಮ ಜನರು ಕಟ್ಟುವ ತೆರಿಗೆ ಹಣ ಅದಾನಿ, ಅಂಬಾನಿಗಳಂತಹ ಕಾರ್ಪೊರೇಟ್ ಮನೆತನಗಳಿಗೆ ತೆರಿಗೆ ವಿನಾಯಿತಿಯಲ್ಲಿ ಹರಿದು ಹೋಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸುತ್ತಾ, ಬಂಡವಾಳಗಾರರ ಸೇವೆ ಸಲ್ಲಿಸುವ ಕಾಂಗ್ರೆಸ್–ಬಿಜೆಪಿಗಳಂತಹ ಪಕ್ಷಗಳನ್ನು ನಂಬದೆ ರೈತರು ಗಟ್ಟಿ ಹೋರಾಟವನ್ನು ಕಟ್ಟಬೇಕೆಂದು ಹೇಳಿದರು.

### ಗೋಷ್ಠಿ – 01 : ಮಾನವ ಸಮಾಜ ಬೆಳವಣಿಗೆಯಲ್ಲಿ ಕೃಷಿಯ ಪಾತ್ರ

ಕೃಷಿ ಉಗಮ ಮತ್ತು ಮಾನವ ಸಮಾಜದ ಬೆಳವಣಿಗೆಯ ಕುರಿತು ಮಾತನಾಡುತ್ತಾ, ಕಾಮ್ರೇಡ್ ಕೆ.ರಾಧಾಕೃಷ್ಣ, ಮಾನವ ಸಮಾಜದ ಬೆಳವಣಿಗೆಯಲ್ಲಿ, ಮಾನವನ ಉಗಮದ ಎಷ್ಟೋ ಲಕ್ಷ ವರ್ಷಗಳ ನಂತರದಲ್ಲಿ ಕೃಷಿಯ ಉಗಮವಾಯಿತು. ಅದು ಖಾಸಗಿ ಆಸ್ತಿಗೆ ಜನ್ಮ ನೀಡಿತು. ತನ್ಮೂಲಕ ವರ್ಗ ವಿಭಜನೆಗೆ ಎಡೆ ಮಾಡಿಕೊಟ್ಟಿತು. ಇಲ್ಲಿಂದ ದುಡಿಯುವ ಜನರ



ಉದ್ಘಾಟನೆ : ಕಾ. ಕೆ.ರಾಧಾಕೃಷ್ಣ ಅವರಿಂದ. ವೇದಿಕೆಯಲ್ಲಿ ಎಡದಿಂದ: ಎಸ್. ಎನ್. ಸ್ವಾಮಿ, ಭಗವಾನ್ ರೆಡ್ಡಿ, ಎಮ್. ಶಶಿಧರ್, ಉಗ್ರನರಸಿಂಹೇಗೌಡ, ಡಾ. ಸುನೀತ್ ಕುಮಾರ್, ನಾಗಮ್ಮಾಳ್


ನೆರೆದ ಪ್ರತಿನಿಧಿಗಳು

ಶೋಷಣೆ ಆರಂಭವಾಯಿತು. ಸಮಾಜ ಗುಲಾಮಗಿರಿ, ಜಮೀನ್ದಾರಿ ಪದ್ಧತಿಗಳನ್ನು ಹಾದು ಇದೀಗ ಬಂಡವಾಳಶಾಹಿ ವ್ಯವಸ್ಥೆಗೆ ಬಂದಿದೆ. ಇಲ್ಲಿ ಕಾರ್ಮಿಕರ ಹಾಗೂ ರೈತರ ಶೋಷಣೆಯಾಗುತ್ತಿದೆ. ಬಂಡವಾಳಿಗರ ಸೇವೆಗಾಗಿ ನಿಂತಿರುವ ವಿವಿಧ ಬೂರ್ಜ್ವಾ ವರ್ಗದ ಪಕ್ಷಗಳ ಬದಲಾವಣೆಯಿಂದ ಸಮಸ್ಯೆಗಳು ಬಗೆಹರಿಯುವುದಿಲ್ಲ. ಅಂತಿಮವಾಗಿ ದುಡಿಯುವ ಜನರನ್ನು ಶೋಷಣೆಯಿಂದ ವಿಮುಕ್ತಿಗೊಳಿಸುವ ಸಮಾಜವಾದಿ ಕ್ರಾಂತಿಯನ್ನು ನೆರವೇರಿಸಬೇಕು. ರೈತರು ಕಾರ್ಮಿಕರ ಜೊತೆ ನಿಂತು ಕ್ರಾಂತಿಯನ್ನು ಯಶಸ್ವಿಗೊಳಿಸಬೇಕು ಎಂದು ಹೇಳಿದರು.


ಕ್ರೀಡೆಯಲ್ಲಿ ನಿರತ ರೈತ ಪ್ರತಿನಿಧಿಗಳು

### ಗೋಷ್ಠಿ – 02 : ಕರ್ನಾಟಕದ ನೀರಾವರಿ ಯೋಜನೆಗಳು

ರಾಜ್ಯದ ವಿವಿಧ ನೀರಾವರಿ ಯೋಜನೆಗಳ ಬಗ್ಗೆ ತಿಳಿಸಿದ ಎಐಕೆಕೆಎಂಎಸ್‌ನ ಅಖಿಲ ಭಾರತ ಉಪಾಧ್ಯಕ್ಷರಾದ ಕಾಮ್ರೇಡ್ ಸುನೀತ್ ಕುಮಾರ್, ರೈತರು ಕೇವಲ ಮಳೆ ನಂಬಿ ಬೆಳೆ ಬೆಳೆಯಲು ಸಾಧ್ಯವಿಲ್ಲ. ಕೃಷಿಗೆ ನೀರನ್ನು ಬಳಸಿಕೊಳ್ಳಲು ಅಗತ್ಯವಾದ ನಾಲೆಗಳ ಕಾಮಗಾರಿಯನ್ನು ಪೂರ್ಣಗೊಳಿಸಿಲ್ಲ. ಸರ್ಕಾರಗಳಿಗೆ ಈ ಯೋಜನೆಗಳನ್ನು ಪೂರ್ಣಗೊಳಿಸುವ ಆಸಕ್ತಿಯಿಲ್ಲ. ಆದ್ದರಿಂದ ನೀರಿನ ಸದ್ಬಳಕೆಯಾಗುತ್ತಿಲ್ಲ ಎಂದರು. ನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೆ ತರುತ್ತಿರುವ ಕೃಷಿ ನೀತಿಗಳನ್ನು ವಿಶ್ಲೇಷಿಸಿ ಮಾತನಾಡಿದ ಎಐಕೆಕೆಎಂಎಸ್‌ನ ರಾಜ್ಯ ಉಪಾಧ್ಯಕ್ಷರಾದ ಕಾಮ್ರೇಡ್ ನಾಗಮ್ಮಾಳ್ ಮತ್ತು ರಾಜ್ಯ ಸಮಿತಿಯ ಸದಸ್ಯರಾದ ಕಾಮ್ರೇಡ್ ಮಧು ತೊಗಲೇರಿ ಮೂರು ಕೃಷಿ ಕಾಯ್ದೆಗಳು, ಹೊಸ ಕೃಷಿ ಮಾರುಕಟ್ಟೆ ನೀತಿ, ಇ–ನ್ಯಾಮ್‌ಗಳು ಹೇಗೆ ರೈತ ವಿರೋಧಿಯಾಗಿವೆ, ಕೃಷಿಯನ್ನು ಕಾರ್ಪೊರೇಟ್ ಕಂಪೆನಿಗಳ ಪಾಲಾಗಿಸುತ್ತವೆ ಎಂದು ತೋರಿಸಿಕೊಟ್ಟರು.

### ಗೋಷ್ಠಿ – 03 : ಕೃಷಿ ನೀತಿಗಳ ವಿಮರ್ಶೆ

ರೈತರ ಸಮಸ್ಯೆಗಳು ಇಂದಿನ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಬಗೆಹರಿಯುವುದಿಲ್ಲ. ಏಕೆಂದರೆ ಇಲ್ಲಿ ಉತ್ಪಾದನೆಯ ಮೂಲ ಖಾಸಗಿ ಮಾಲೀಕತ್ವವಾಗಿದ್ದು, ಅವರ ಉದ್ದೇಶವೇ ಲಾಭ ಗಳಿಸುವುದಾಗಿದೆ. ಕಾರ್ಪೊರೇಟ್ ಕಂಪೆನಿಗಳು ಕೃಷಿ ಉತ್ಪನ್ನಗಳ ವ್ಯಾಪಾರದಲ್ಲಿ ಗರಿಷ್ಠ ಲಾಭ ಗಳಿಸಲು ತಮ್ಮ ಕೈಗಾರಿಕೆಗಳಿಗೆ ಅವಶ್ಯಕ ಕಚ್ಚಾ ಪದಾರ್ಥಗಳನ್ನು ಕಡಿಮೆ ಬೆಲೆಯಲ್ಲಿ ಕೊಂಡುಕೊಳ್ಳಲು ಬಯಸುತ್ತಾರೆ. ಹಾಗಾಗಿ ರೈತರ ಬೆಳೆಗಳಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಕಾರ್ಪೊರೇಟ್ ಕಂಪೆನಿಗಳ ಹಿತಾಸಕ್ತಿ ಕಾಪಾಡುತ್ತಿವೆ. ಇದಕ್ಕೆ ತದ್ವಿರುದ್ಧವಾಗಿ ಸಮಾಜವಾದಿ ಕೃಷಿಯಲ್ಲಿ ಉತ್ಪಾದನೆಯ ಮೂಲದ ಒಡೆತನವು ರೈತರು ಮತ್ತು ಕಾರ್ಮಿಕರ ಕೈಯಲ್ಲಿರುತ್ತದೆ. ಜೊತೆಗೆ ಉತ್ಪಾದನೆಯು ಸಮಾಜದ ಅವಶ್ಯಕತೆಯನ್ನು ಪೂರೈಸುವ ಉದ್ದೇಶ ಹೊಂದಿರುವುದರಿಂದ ರೈತರನ್ನು ಶೋಷಿಸುವ ಪ್ರಶ್ನೆಯೇ ಬರುವುದಿಲ್ಲ. ಹಾಗಾಗಿ ಸೋವಿಯತ್ ಒಕ್ಕೂಟದಲ್ಲಿ ರೈತರ ಸುಸ್ಥಿರ ಬದುಕನ್ನು ಖಚಿತಪಡಿಸಿದರು. ಅವರ ಬೆಳೆಗೆ ಯೋಗ್ಯ ಬೆಲೆ ನೀಡಿದರು. ಕೃಷಿಗೆ ಸರ್ಕಾರ ಎಲ್ಲಾ ರೀತಿಯ ನೆರವು ನೀಡಿತು. ಅವರಿಗೆ ಶಿಕ್ಷಣ, ಆರೋಗ್ಯ, ನಾಗರಿಕ ಸೌಲಭ್ಯಗಳನ್ನು ನೀಡಿತು. ಇಂತಹ ಸಮಾಜವಾದಿ ಕೃಷಿಯ ಕಡೆಗೆ ರೈತರ ಹೋರಾಟ ಮುನ್ನಡೆಯಬೇಕು ಎಂದು ಎಐಕೆಕೆಎಂಎಸ್ ರಾಜ್ಯ ಉಪಾಧ್ಯಕ್ಷರುಗಳಾದ ಕಾಮ್ರೇಡ್ ಎಸ್.ಎನ್.ಸ್ವಾಮಿ ಮತ್ತು ಕಾಮ್ರೇಡ್ ಲಕ್ಷ್ಮಣ ಜಡಗಣ್ಣವರ್ ತಿಳಿಸಿದರು.

### ಸಮಾರೋಪ ಗೋಷ್ಠಿ : ರೈತರ ಮುಂದಿರುವ ಸವಾಲುಗಳು

ಶಿಬಿರದ ಸಮಾರೋಪದಲ್ಲಿ ಮಾತನಾಡಿದ ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷದ ಮೈಸೂರು ಜಿಲ್ಲಾ ಕಾರ್ಯದರ್ಶಿ ಕಾಮ್ರೇಡ್ ಬಿ.ರವಿ ಯಶಸ್ವಿಯಾಗಿ ನಡೆದ ಶಿಬಿರಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು. ತಾವೆಲ್ಲರೂ ವೈಚಾರಿಕವಾಗಿ ತಯಾರಾಗಿ ಮುಂದಿನ ಹೋರಾಟಗಳಿಗೆ ಸಿದ್ಧರಾಗಿ, ಕ್ರಾಂತಿಕಾರಿ ಹೋರಾಟವನ್ನು ಮುನ್ನಡೆಸಿ ಎಂದು ಹಾರೈಸಿದರು. ಎಐಕೆಕೆಎಂಎಸ್‌ನ ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಭಗವಾನ್ ರೆಡ್ಡಿ ಶಿಬಿರವನ್ನು ಯಶಸ್ವಿಗೊಳಸಲು ಶ್ರಮಿಸಿದ, ಮುಖ್ಯವಾಗಿ ನಂಜನಗೂಡಿನ ರೈತ, ಕಾರ್ಮಿಕರಿಗೆ ಕ್ರಾಂತಿಕಾರಿ ಧನ್ಯವಾದಗಳನ್ನು ಅರ್ಪಿಸಿ, ಎಐಕೆಕೆಎಂಎಸ್ ರೂಪಿಸಿರುವ ವಾರ್ಷಿಕ ಯೋಜನೆಯಲ್ಲಿರುವ ಸದಸ್ಯತ್ವ ಅಭಿಯಾನ, ಗ್ರಾಮ ಸಮಿತಿ, ತಾಲೂಕು ಸಮಿತಿ ಮತ್ತು ಜಿಲ್ಲಾ ಸಮಿತಿಗಳ ರಚನೆ, ಮುಂದಿನ ಹೋರಾಟಗಳ ಗುರಿಯನ್ನು ತಿಳಿಸಿ ಆ ದಿಕ್ಕಿನಲ್ಲಿ ಪ್ರತಿಯೊಬ್ಬರೂ ಶ್ರಮಿಸಬೇಕೆಂದು ಕರೆ ನೀಡಿದರು.

ಕೊನೆಯಲ್ಲಿ ಎಐಕೆಕೆಎಂಎಸ್‌ನ ರಾಜ್ಯಾಧ್ಯಕ್ಷರಾದ ಕಾಮ್ರೇಡ್ ಶಶಿಧರ್, ಹದಿನಾರು ಹೋರಾಟ, ನಗರ ಬಂಡಾಯ, ಹಲಗಲಿ ಬೇಡರ ಹತಾರ ಲಡಾಯಿ, ಮುಂತಾದ ರೈತ ಹೋರಾಟಗಳನ್ನು ನೆನಪಿಸಿಕೊಂಡು, ಸ್ವಾತಂತ್ರ್ಯಪೂರ್ವದಿಂದಲೂ ಸಮರಶೀಲ ರೈತ ಹೋರಾಟಗಳು ನಡೆಯುತ್ತಿವೆ. ಇಂದು ಶೋಷಕ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ರೈತರು ತಮ್ಮ ಚಳುವಳಿಗನ್ನು ಮುನ್ನಡೆಸಬೇಕು. ಇದಕ್ಕೆ ದಾರಿದೀಪವಾಗಿ ಎಐಕೆಕೆಎಂಎಸ್ ಸಂಘಟನೆಗೆ ಜನ್ಮ ನೀಡಿದ ಮತ್ತು ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್ ಚಿಂತನೆಗಳ ಹಾದಿಯಲ್ಲಿ ಮುನ್ನಡೆಯಬೇಕು ಎಂದು ಕರೆ ನೀಡಿದರು.

## ಎಪಿಎಲ್ ಕಾರ್ಡುದಾರರಿಗೆ ಆಸ್ಪತ್ರೆಗಳಲ್ಲಿ ಶುಲ್ಕ ವಿಧಿಸುವ ಕ್ರಮಕ್ಕೆ ಎಸ್‌ಯುಸಿಐ(ಸಿ) ಖಂಡನೆ

ರಾಜ್ಯದ 16 ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿ ಇದೇ ಸೆಪ್ಟೆಂಬರ್ 23ರಿಂದ ಎಂಆರ್‌ಐ ಮತ್ತು ಸಿಟಿ ಸ್ಕ್ಯಾನ್ ಪರೀಕ್ಷೆಗಳಿಗೆ ಎಪಿಎಲ್ ಕಾರ್ಡುದಾರರು ಶೇ.70ರಷ್ಟು ಶುಲ್ಕ ನೀಡಬೇಕು ಎಂಬ ರಾಜ್ಯ ಆರೋಗ್ಯ ಇಲಾಖೆಯ ಆದೇಶವನ್ನು ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷದ ಕರ್ನಾಟಕ ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ.ಉಮಾ ಅವರು ತೀವ್ರವಾಗಿ ಖಂಡಿಸಿದ್ದಾರೆ.

ಬಿಪಿಎಲ್ ಆಗಿರಲಿ, ಎಪಿಎಲ್ ಆಗಿರಲಿ, ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಉಚಿತ ಚಿಕಿತ್ಸೆ ಮತ್ತು ರೋಗ ಪರೀಕ್ಷೆಗಳನ್ನು ಮಾಡಬೇಕೆಂಬುದು ಒಂದು ಪ್ರಜಾತಾಂತ್ರಿಕ ಸರ್ಕಾರದ ಜವಾಬ್ದಾರಿ. ಇಂದಿನ ಪರಿಸ್ಥಿತಿಯಲ್ಲಿ ಸರ್ಕಾರಿ ಆಸ್ಪತ್ರೆಗಳಿಗೆ ಬರುವವರು ಯಾವುದೇ ವೈದ್ಯಕೀಯ ವಿಮಾ ಸೌಲಭ್ಯವಿಲ್ಲದ ಅಸಹಾಯಕರೇ ಆಗಿದ್ದಾರೆ. ಅಂತಹ ರೋಗಿಗಳ ಬಳಿ ಬಿಪಿಎಲ್ ಕಾರ್ಡ್ ಇಲ್ಲ ಎಂಬ ಕಾರಣಕ್ಕೆ ಶೇ 70ರಷ್ಟು ಶುಲ್ಕ ವಸೂಲಿ ಮಾಡುವುದು ಅತ್ಯಂತ ಅಮಾನವೀಯ ಕ್ರಮ. ಈಗ ಎಂಆರ್‌ಐ, ಸಿಟಿ ಸ್ಕ್ಯಾನ್ ಅಂತಹ ಪರೀಕ್ಷೆಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಸಾವಿರಾರು ರೂಪಾಯಿ ದರ ನಿಗದಿ ಮಾಡಲಾಗಿದೆ. ಸರ್ಕಾರಿ ಆರೋಗ್ಯ ಸೇವೆಯ ವ್ಯಾಪಾರೀಕರಣ ಅತ್ಯಂತ ಖಂಡನೀಯ.

ಪ್ರಪಂಚದ ಅತಿದೊಡ್ಡ ಆರೋಗ್ಯ ಯೋಜನೆ ಎಂದು ಕೊಚ್ಚಿಕೊಳ್ಳುವ ಕೇಂದ್ರದ ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ್ ಯೋಜನೆ ಕೂಡ ಇದೇ 70:30 ಎಂಬ ಜನವಿರೋಧಿ ಸೂತ್ರವನ್ನು ಅಳವಡಿಸಿದೆ.

ರಾಜ್ಯ ಆರೋಗ್ಯ ಇಲಾಖೆಯು ಈ ಆದೇಶವನ್ನು ತಕ್ಷಣವೇ ಹಿಂಪಡೆಯಬೇಕು ರಾಜ್ಯ ಕಾಂಗ್ರೆಸ್ ಸರ್ಕಾರ ಮತ್ತು ಕೇಂದ್ರ ಬಿಜೆಪಿ ಸರ್ಕಾರಗಳು ಪರಸ್ಪರ ದೂಷಿಸುವ ಬದಲು ತಕ್ಷಣವೇ ಗಮನಹರಿಸಿ, ಎಲ್ಲರಿಗೂ ಗುಣಮಟ್ಟದ ಉಚಿತ ಆರೋಗ್ಯ ಸೇವೆಯನ್ನು ಖಚಿತಪಡಿಸಲು ಮುಂದಾಗಬೇಕೆಂದು ಎಸ್‌ಯುಸಿಐ(ಸಿ) ಒತ್ತಾಯಿಸುತ್ತದೆ.

Registered Newspaper
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

## ಬಳ್ಳಾರಿ: ಎಐಡಿಎಸ್‌ಓ ಸಂಘಟಿತ ರಾಜ್ಯ ಮಟ್ಟದ ಅಧ್ಯಯನ ಶಿಬಿರ

# ದುಡಿಯುವ ವರ್ಗ ಸಂಪತ್ತಿನ ಒಡೆಯರಾದಾಗ ಅಸಮಾನತೆ ತೊಲಗುತ್ತದೆ: ಕಾ.ಕೆ. ರಾಧಾಕೃಷ್ಣ

ಎಐಡಿಎಸ್‌ಓ ಕರ್ನಾಟಕ ರಾಜ್ಯ ಸಮಿತಿಯಿಂದ ಸೆಪ್ಟೆಂಬರ್ 20, 21 ರಂದು ಬಳ್ಳಾರಿ ಜಿಲ್ಲೆಯಲ್ಲಿ ಶಿಕ್ಷಣ–ಸಂಸ್ಕೃತಿ–ಮಾನವತೆ ಉಳಿಸಿ ಘೋಷಣೆಯೊಂದಿಗೆ ರಾಜ್ಯ ಮಟ್ಟದ ಕಾರ್ಯಕರ್ತರ ಅಧ್ಯಯನ ಶಿಬಿರವನ್ನು ಸಂಘಟಿಸಲಾಗಿತ್ತು.

ಈ ಶಿಬಿರದಲ್ಲಿ 'ಸಮಾಜದ ಪರಿವರ್ತನೆಯಲ್ಲಿ ವಿದ್ಯಾರ್ಥಿಗಳ ಪಾತ್ರ'ದ ಕುರಿತು ಎಸ್‌ಯುಸಿಐ(ಸಿ) ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾದ ಕಾಮ್ರೇಡ್ ಕೆ. ರಾಧಾಕೃಷ್ಣ ಅವರು ಮಾತನಾಡಿ, ಪ್ರಸ್ತುತ ನಮ್ಮ ಸಮಾಜವು ಬಂಡವಾಳಶಾಹಿ ವ್ಯವಸ್ಥೆಯಾಗಿದೆ. ಆಳುವ ವರ್ಗ ಮತ್ತು ದುಡಿಯುವ ವರ್ಗಗಳು ಅಸ್ತಿತ್ವದಲ್ಲಿವೆ. ಯಾರು ದುಡಿದು ದಣಿಯುತ್ತಾರೋ ಅವರು ಬಡವರಾಗಿದ್ದಾರೆ. ದುಡಿಯದೆ ಕೂತು ತಿನ್ನುವವರು ಶ್ರೀಮಂತರಾಗಿದ್ದಾರೆ. ಇದೇ ಅಸಮಾನತೆಗೆ ಮೂಲ ಕಾರಣವಾಗಿದೆ. ಇದರ ವಿರುದ್ಧ ಹೋರಾಡಿ, ದುಡಿಯುವ ವರ್ಗ ಸಂಪತ್ತಿನ ಒಡೆಯರಾದಾಗ ಮಾತ್ರವೇ ಅಸಮಾನತೆ ತೊಲಗುತ್ತದೆ ಎಂದು ಹೇಳಿದರು.

ಈ ಶೋಷಕ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಜಾತಿ, ಧರ್ಮ, ಭಾಷೆ ಮುಂತಾದ ವಿಭಜನೆಗಳಿಂದ ಜನರಲ್ಲಿ ಒಡಕು ಮೂಡಿಸಲಾಗಿದೆ. ಜನ ಸಾಮಾನ್ಯರು ಎದುರಿಸುತ್ತಿರುವ ಹಸಿವು, ಬಡತನ, ನಿರುದ್ಯೋಗ, ಶಿಕ್ಷಣದ ವ್ಯಾಪಾರೀಕರಣದಂತಹ ಸಾಮಾಜಿಕ ಸಮಸ್ಯೆಗಳು ಕೇವಲ ಒಂದು ಧರ್ಮ, ಜಾತಿಗೆ ಸೀಮಿತವಾಗಿಲ್ಲ. ಎಲ್ಲಾ ಜಾತಿ, ಧರ್ಮದ ಬಡ ಜನರು ಈ ಸಮಸ್ಯೆಗಳಿಗೆ ಸಿಲುಕಿ ನಲುಗುತ್ತಿದ್ದಾರೆ. ತಮ್ಮ ಅಧಿಕಾರವನ್ನು ಭದ್ರ ಪಡಿಸಿಕೊಳ್ಳಲು ಜನರನ್ನು ಒಡೆದು ಆಳುವುದು ಬಂಡವಾಳಶಾಹಿಗಳ ಕುತಂತ್ರವೇ ಆಗಿದೆ. ಹಾಗಾಗಿ ಈ ಶೋಷಕ ವ್ಯವಸ್ಥೆಯನ್ನು ಅಂತ್ಯಗೊಳಿಸಿ, ಕ್ರಾಂತಿಯ ಮೂಲಕ ಸಮಾಜವಾದವನ್ನು ಸ್ಥಾಪಿಸಿದಾಗ ಮಾತ್ರವೇ ಅಸಮಾನತೆ ಅಂತ್ಯವಾಗುತ್ತದೆ. ಇದೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಎಂದು ತಿಳಿಸಿದರು.

ಸಮಾಜವನ್ನು ಬದಲಾಯಿಸಲು ಜ್ಞಾನವೇ ನಮ್ಮ ಅಸ್ತ್ರ. ಜ್ಞಾನವಿಲ್ಲದೇ ಇದ್ದರೆ ಬರೀ ಕತ್ತಲೆಯಲ್ಲಿ ನಡೆದಂತಾಗುತ್ತದೆ. ಈಶ್ವರಚಂದ್ರ ವಿದ್ಯಾಸಾಗರ್, ಭಗತ್ ಸಿಂಗ್, ನೇತಾಜಿ ಸುಭಾಷ್ ಚಂದ್ರ ಬೋಸ್, ಬುದ್ಧ ಮುಂತಾದವರು ಈ ಜ್ಞಾನಕ್ಕಾಗಿ ಕೇವಲ ಪಠ್ಯ ಪುಸ್ತಕಗಳ ಮೇಲೆ ಅವಲಂಬಿತವಾಗಿರಲಿಲ್ಲ. ಇಂದಿನ ವಿದ್ಯಾರ್ಥಿ ಯುವಜನರು ಸ್ವಕೇಂದ್ರಿತ ಚಿಂತನೆ ಬಿಟ್ಟು, ತಮ್ಮ ಕುಟುಂಬ, ತಂದೆ–ತಾಯಿ ಅಷ್ಟೇ ಅಲ್ಲದೇ, ಇಡೀ ಸಮಾಜದ ಎಲ್ಲಾ ನೊಂದ ತಂದೆ–ತಾಯಂದಿರ ಕಣ್ಣೀರು ಒರೆಸುವ ಕ್ರಾಂತಿಕಾರಿ ಹೋರಾಟದ ಜವಾಬ್ದಾರಿಯನ್ನು ಹೊರಬೇಕೆಂದು, ಎಐಡಿಎಸ್‌ಓನ ಪ್ರೇರಕಶಕ್ತಿಯಾಗಿರುವ ಕ್ರಾಂತಿಕಾರಿ ಹೋರಾಟಗಾರರು ಹಾಗೂ ಕಾರ್ಮಿಕ ವರ್ಗದ ಮಹಾನ್ ನಾಯಕರಾದ ಕಾ. ಶಿವದಾಸ್ ಘೋಷ್ ಬಯಸಿದ್ದರು. ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿ ಸಮಾಜವಾದಿ ಕ್ರಾಂತಿಯನ್ನು ನೆರವೇರಿಸುವ ಜವಾಬ್ದಾರಿಯನ್ನು ವಿದ್ಯಾರ್ಥಿಗಳು ತೆಗೆದುಕೊಳ್ಳಬೇಕು ಎಂದವರು ಕರೆ ನೀಡಿದರು.

ಎಸ್‌ಯುಸಿಐ(ಸಿ) ಕೇಂದ್ರ ಸಮಿತಿ ಸದಸ್ಯರು ಮತ್ತು ಕರ್ನಾಟಕ ರಾಜ್ಯ ಕಾರ್ಯದರ್ಶಿಗಳಾದ ಕಾ. ಕೆ. ಉಮಾ ಅವರು, ಶರತ್‌ಚಂದ್ರ ಚಟ್ಟೋಪಾಧ್ಯಾಯರ "ಮಹೇಶ್" ಎಂಬ ಸಣ್ಣ ಕಥೆಯ ಬಗ್ಗೆ ಉಪನ್ಯಾಸ ನೀಡಿದರು. ಶರತ್‌ಚಂದ್ರರ ಕೃತಿಗಳ ಅಧ್ಯಯನವು, ವಿಶೇಷವಾಗಿ ವಿದ್ಯಾರ್ಥಿ ಕಾರ್ಯಕರ್ತರಲ್ಲಿ ಸಹಾನುಭೂತಿ, ಸಂವೇದನೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಎಷ್ಟು ಪ್ರಸ್ತುತವಾಗಿದೆ ಎಂಬುದನ್ನು ಅವರು ವಿವರಿಸಿದರು. ಸಾಮಾಜಿಕ ಬದಲಾವಣೆಯ ಹೋರಾಟದಿಂದ ಮಾತ್ರ ಮಹಾನ್ ಸಾಹಿತ್ಯವು ಹೊರಹೊಮ್ಮಲು ಸಾಧ್ಯ. ಹಾಗಾಗಿ, ಶರತ್‌ಚಂದ್ರರ ಬರಹಗಳು ಶೋಷಿತ ಮತ್ತು ಕಾರ್ಮಿಕ ವರ್ಗಕ್ಕೆ ಸಮರ್ಪಿತವಾಗಿದೆ ಎಂದು ಹೇಳಿದರು.

### ಹೊಸ ಮನುಷ್ಯರ ಸೃಷ್ಟಿಯೇ ಎಐಡಿಎಸ್‌ಓ ಧ್ಯೇಯ

"ಸಮಾಜದಲ್ಲಿನ ನೋವು, ಅಸಮಾನತೆ ಮತ್ತು ಅನ್ಯಾಯದಂತಹ ಸಮಸ್ಯೆಗಳಿಗೆ ಸ್ಪಂದಿಸಿ ಸಾಮಾಜಿಕ ಬದಲಾವಣೆಗಾಗಿ ಶ್ರಮವಹಿಸಿದಾಗ ಮಾತ್ರ ನಾವು ನಿಜವಾದ ಮನುಷ್ಯರಾಗಲು ಸಾಧ್ಯ. ಸಮಾಜದಲ್ಲಿ ಇಂತಹ ಈ ಹೊಸ ಮನುಷ್ಯರ ಸೃಷ್ಟಿಯೇ ಎಐಡಿಎಸ್‌ಓದ ಧ್ಯೇಯವಾಗಿದೆ." ಎಂದು ಎಐಡಿಎಸ್‌ಓ ಕೇಂದ್ರ ಕೌನ್ಸಿಲ್‌ನ ಅಧ್ಯಕ್ಷರಾದ ಕಾ. ಸೌರವ್ ಘೋಷ್ ಹೇಳಿದರು. ಕರ್ನಾಟಕದಲ್ಲಿ ಸರ್ಕಾರಿ ಶಾಲೆಗಳನ್ನು ಉಳಿಸಲು 50 ಲಕ್ಷ ಸಹಿ ಸಂಗ್ರಹಿಸಿ ಐತಿಹಾಸಿಕ ಯಶಸ್ವಿ ಹೋರಾಟ ಕಟ್ಟಿರುವ, ಹಲವಾರು ಶೈಕ್ಷಣಿಕ ಸಮಸ್ಯೆಗಳ ವಿರುದ್ಧ ಹೋರಾಟ ಬೆಳೆಸುತ್ತಿರುವ ಸಂಘಟನೆಯ ಎಲ್ಲಾ ಕಾರ್ಯಕರ್ತರನ್ನು ಅವರು ಈ ಸಂದರ್ಭದಲ್ಲಿ ಅಭಿನಂದಿಸಿದರು. ಇತಿಹಾಸದಲ್ಲಿ ಸಂಘಟನೆ ಇಲ್ಲದೆ ಮಾನವ ನಾಗರಿಕತೆ ಬೆಳೆದಿಲ್ಲ. ಒಂದು ಕುಟುಂಬ, ಹಳ್ಳಿ, ಸಮುದಾಯದಂತಹ ಸಂಘಟನೆಯಿಂದಲೇ ಮಾನವ ನಾಗರಿಕತೆ ಬೆಳೆದು ಬಂದಿದೆ. ಹಾಗಾಗಿ, ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯು ಶೈಕ್ಷಣಿಕ ಸಮಸ್ಯೆಗಳ ವಿರುದ್ಧ ಹೋರಾಟ ಬೆಳೆಸುವುದು ಅಷ್ಟೇ ಅಲ್ಲ, ಸಮಾಜದಲ್ಲಿ ಮೂಲಭೂತ ಬದಲಾವಣೆ ತರುವ ನಿಟ್ಟಿನಲ್ಲಿ ಹೊಸ ಮನುಷ್ಯರ ಸೃಷ್ಟಿಗಾಗಿ ಶ್ರಮಿಸುತ್ತಿದೆ. ಈ ನಿಟ್ಟಿನಲ್ಲಿ ಕಾರ್ಯಕರ್ತರು ಸನ್ನದ್ಧರಾಗಬೇಕೆಂದು ತಿಳಿಸಿದರು.

ಶಿಬಿರದಲ್ಲಿ ರಾಜ್ಯ ಅಧ್ಯಕ್ಷರಾದ ಕಾ. ಅಶ್ವಿನಿ ಕೆ.ಎಸ್, ರಾಜ್ಯ ಕಾರ್ಯದರ್ಶಿ ಕಾ. ಅಜಯ್ ಕಾಮತ್, ರಾಜ್ಯ ಉಪಧ್ಯಕ್ಷರಾದ ಕಾ. ಅಭಯಾ ದಿವಾಕರ್, ಕಾ. ಹಣಮಂತು, ಕಾ. ಅಪೂರ್ವ, ಕಾ. ಚಂದ್ರಕಲಾ, ರಾಜ್ಯ ಖಜಾಂಚಿಗಳಾದ ಕಾ. ಸುಭಾಷ್, ಕಚೇರಿ ಕಾರ್ಯದರ್ಶಿ ಕಾ. ಮಹಾಂತೇಶ್ ಬೀಳೂರ್ ಉಪಸ್ಥಿತರಿದ್ದರು ಮತ್ತು ರಾಜ್ಯದ ವಿವಿಧ ಜಿಲ್ಲೆಗಳ ನೂರಾರು ಕಾರ್ಯಕರ್ತರು ಶಿಬಿರದಲ್ಲಿ ಭಾಗವಹಿಸಿದ್ದರು. ಎಐಡಿಎಸ್‌ಓ ಗೀತೆಯೊಂದಿಗೆ ಎರಡು ದಿನದ ಅಧ್ಯಯನ ಶಿಬಿರ ಸಮಾರೋಪಗೊಂಡಿತು.




ಮಾತನಾಡುತ್ತಿರುವವರು: ಕಾ. ಕೆ.ರಾಧಾಕೃಷ್ಣ. ವೇದಿಕೆಯಲ್ಲಿ ಎಡದಿಂದ: ಕಾ. ಹಣಮಂತು, ಕಾ. ಅಜಯ್ ಕಾಮತ್, ಕಾ. ಸೌರವ್ ಘೋಷ್, ಕಾ. ಕೆ. ಉಮಾ, ಕಾ. ಅಶ್ವಿನಿ ಕೆ.ಎಸ್ ಮತ್ತು ಕಾ. ಸುಭಾಷ್



ಶಿಬಿರಾರ್ಥಿಗಳು

## ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 15% ಎನ್‌ಆರ್‌ಐ ಕೋಟಾ : ರಾಜ್ಯವ್ಯಾಪಿ ವಿದ್ಯಾರ್ಥಿ ಪ್ರತಿಭಟನೆಗೆ ಎಐಡಿಎಸ್‌ಓ ನೇತೃತ್ವ!

ಕರ್ನಾಟಕ ರಾಜ್ಯ ಸರ್ಕಾರವು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರತಿ ಸೀಟಿಗೆ 25 ಲಕ್ಷ ರೂ.ಗಳ ದುಬಾರಿ ಶುಲ್ಕದೊಂದಿಗೆ 15% ಎನ್‌ಆರ್‌ಐ ಕೋಟಾವನ್ನು ಆರಂಭಿಸಲು ನಿರ್ಧರಿಸಿದೆ. ರಾಜ್ಯ ಸರ್ಕಾರದ ಈ ನಡೆಯ ವಿರುದ್ಧ ಎಐಡಿಎಸ್‌ಓ ನೇತೃತ್ವದಲ್ಲಿ ರಾಜ್ಯದಾದ್ಯಂತ ವಿದ್ಯಾರ್ಥಿಗಳು ಸೆಪ್ಟೆಂಬರ್ 10 ರಂದು ಪ್ರತಿಭಟನೆ ನಡೆಸಿದರು. ಎನ್‌ಆರ್‌ಐ ಕೋಟಾ ಜಾರಿಗೆ ತರುವುದರಿಂದ ವೈದ್ಯಕೀಯ ಕಾಲೇಜುಗಳಿಗೆ ಹಣ ಹರಿದುಬರಲಿದೆ ಎಂದು ಸರ್ಕಾರ ಹೇಳಿಕೊಂಡಿದ್ದರೂ, ವಾಸ್ತವದಲ್ಲಿ ಈ ವಿಧಾನವು ಬಡ–ಮಧ್ಯಮ ವರ್ಗದ ವಿದ್ಯಾರ್ಥಿಗಳ ಪಾಲಿಗೆ ಅಮೂಲ್ಯವಾದ ಸರ್ಕಾರಿ ಸೀಟುಗಳನ್ನು ಶ್ರೀಮಂತರಿಗೆ ಹರಾಜು ಹಾಕುವ ಮತ್ತು ಸಾರ್ವಜನಿಕ ಸಂಸ್ಥೆಗಳನ್ನು ಖಾಸಗೀಕರಣದತ್ತ ತಳ್ಳುವ ಪ್ರಯತ್ನವಾಗಿದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಅರ್ಹ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಉನ್ನತ ಶಿಕ್ಷಣವನ್ನು ಒದಗಿಸುವ ಉದ್ದೇಶದೊಂದಿಗೆ ಸ್ಥಾಪಿಸಲಾಗಿದೆ. ಶ್ರೀಮಂತ ವಿದ್ಯಾರ್ಥಿಗಳಿಗೆ ಎನ್‌ಆರ್‌ಐ ಸೀಟುಗಳನ್ನು ಮೀಸಲಿಡುವ ಮೂಲಕ, ಸರ್ಕಾರವು ವೈದ್ಯರಾಗಿ ಸಮಾಜಕ್ಕೆ ಸೇವೆ ಸಲ್ಲಿಸಲು ಬಯಸುವ ನೂರಾರು ಶ್ರಮಜೀವಿ, ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶದ ಬಾಗಿಲು ಮುಚ್ಚುತ್ತಿದೆ. ಈಗಾಗಲೇ, ಕರ್ನಾಟಕದ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಶುಲ್ಕವು ದೇಶದಲ್ಲಿಯೇ ಅತಿ ಹೆಚ್ಚಿದ್ದು, ಪಶ್ಚಿಮ ಬಂಗಾಳ ಮತ್ತು ಉತ್ತರ ಭಾರತದ ಹಲವು ರಾಜ್ಯಗಳ ಶುಲ್ಕಕ್ಕಿಂತ ಸುಮಾರು ಹತ್ತು ಪಟ್ಟು ಹೆಚ್ಚಾಗಿದೆ. ಈ ಅನ್ಯಾಯದ ಹೊರೆಯನ್ನು ಕಡಿಮೆ ಮಾಡುವ ಬದಲು, ಸರ್ಕಾರವು ವಿದ್ಯಾರ್ಥಿಗಳಿಂದ ಇನ್ನಷ್ಟು ಹಣವನ್ನು ವಸೂಲಿ ಮಾಡಲು ನಿರ್ಲಜ್ಜವಾಗಿ ಪ್ರಯತ್ನಿಸುತ್ತಿದೆ. ಈ ಕ್ರಮವು ರಾಜ್ಯ ಸರ್ಕಾರದ ವಿದ್ಯಾರ್ಥಿ ವಿರೋಧಿ ಮತ್ತು ಜನವಿರೋಧಿ ಮನೋಭಾವವನ್ನು ಬಟಾಬಯಲಾಗಿಸಿದೆ. ಇಂತಹ ನೀತಿಗಳು ಸರ್ಕಾರಿ ಕಾಲೇಜುಗಳಲ್ಲಿ ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸುತ್ತಾ, ಸಂಪೂರ್ಣ ಖಾಸಗೀಕರಣಕ್ಕೆ ಎಡೆ ಮಾಡಿಕೊಡುತ್ತವೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.




ಬೆಂಗಳೂರು




ಕಲಬುರಗಿ



ಧಾರವಾಡ

Published by: K.Uma on behalf of SOCIALIST UNITY CENTRE OF INDIA (COMMUNIST), Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed at : MNS Printers Private Limited, 345/4, Bhattarahalli, Old Madras Road, Bengaluru, Karnataka - 560 049. Website: www.sucic.org & www.sucic-karnataka.org EDITOR: K.Uma